ವಾಲ್ಮೀಕಿ ಮುನಿಗಳ ಹಾಸ್ಯಪ್ರವೃತ್ತಿ

ವಿದ್ವಾನ್ ಎನ್. ರಂಗನಾಥಶರ್ಮಾ

ಉದಯ ಪ್ರಕಾಶನ
೯೮೪, ೧೧ನೇ ಮುಖ್ಯ ರಸ್ತೆ, ೩ನೇ ವಿಭಾಗ,
ರಾಜಾಜಿನಗರ, ಬೆಂಗಳೂರು-೫೬೦ ೦೧೦
ದೂರವಾಣಿ - ೩೩೪೯೧೮೩

रामकृष्ण भट्ट: कुटेलु
22/02/06

ವಾಲ್ಮೀಕಿ ಮುನಿಗಳ ಹಾಸ್ಯಪ್ರವೃತ್ತಿ

ವಿದ್ವಾನ್ ಎನ್. ರಂಗನಾಥಶರ್ಮಾ

ಉದಯ ಪ್ರಕಾಶನ
೯೮೪, ೧೧ನೇ ಮುಖ್ಯ ರಸ್ತೆ, ೩ನೇ ವಿಭಾಗ,
ರಾಜಾಜಿನಗರ, ಬೆಂಗಳೂರು-೫೬೦ ೦೧೦
ದೂರವಾಣಿ - ೩೩೪೯೧೮೩

Vālmīki Munigala Hāsyapravṛtti

by Vidwan N. Ranganatha Sharma

Published by M. S. Srinivasa Rao

Udaya Prakashana, No.984

11th A Main Road, 3rd Block

Rajajinagar, Bangalore-10

Phone : 3389143

1996

No. of Pages : 80

Typeset & Printed at : **Vāgartha Printonics**

Bangalore-4, Ph. **627677**

ಆದಿಕವಿ ವಾಲ್ಮೀಕಿ ಮುನಿಗಳು

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಮ್ ॥

ಪ್ರಸ್ತಾವನೆ

ಶ್ರೀಮದ್ರಾಮಾಯಣವನ್ನು ಬರೆದವರು ವಾಲ್ಮೀಕಿ ಮುನಿಗಳೆಂಬುದು ಸುಪ್ರಸಿದ್ಧವಾಗಿದೆ. ಇದಕ್ಕೆ ಆದಿಕಾವ್ಯವೆಂಬ ಹೆಸರಿದೆ. ಆದಿ ಶಬ್ದಕ್ಕೆ ಪ್ರಥಮ ಎಂದೂ ಕಾರಣವೆಂದು ಎರಡು ಅರ್ಥಗಳುಂಟು. ಎಲ್ಲ ಕಾವ್ಯ ಗಳಲ್ಲಿಯೂ ಪ್ರಥಮ ಕಾವ್ಯವಾದ್ದರಿಂದ ಆದಿಕಾವ್ಯವೆಂದು ಪ್ರಸಿದ್ಧಿ-ಯಾಗಿರಬಹುದು. ಅಥವಾ ಮುಂದೆ ಹುಟ್ಟುವ ಕಾವ್ಯಗಳಿಗೆ ಆದರ್ಶ-ವಾದ ಕಾರಣವಾದ್ದರಿಂದ ಈ ಹೆಸರು ಬಂದಿರುವ ಸಾಧ್ಯತೆಯೂ ಇದೆ. ಆಲಂಕಾರಿಕರು ಹೇಳುವ ಎಲ್ಲ ಕಾವ್ಯ ಲಕ್ಷಣಗಳೂ ಇದರಲ್ಲಿ ಸಮೀಚೀನವಾಗಿ ಹೊಂದಿಕೊಂಡಿವೆ. ಶೃಂಗಾರಾದಿ ಸಮಸ್ತರಸಗಳೂ ಭಾವಗಳೂ ಇಲ್ಲಿ ಅಭಿವ್ಯಕ್ತಿಗೊಂಡಿವೆ. ಅಷ್ಟಾದಶವರ್ಣನೆಗಳೂ ಉಂಟು. ಎಲ್ಲ ವರ್ಣನೆಗಳೂ ಸಮಯೋಚಿತವಾಗಿ ಬಂದಿವೆ. ಲಕ್ಷಣ ಸಮನ್ವ-ಯಕ್ಕಾಗಿ ಅರಣ್ಯ, ಸಮುದ್ರಾದಿಗಳ ವರ್ಣನೆಯನ್ನು ಎಳೆದು ತಂದಿಲ್ಲ.

ವಾಲ್ಮೀಕಿಮುನಿಗಳ ಜೀವನ ಚರಿತ್ರೆ ಸರಿಯಾಗಿ ತಿಳಿಯದು. ಅಧ್ಯಾತ್ಮರಾಮಾಯಣದಲ್ಲಿ ಇವರ ವಿಷಯವಾಗಿ ಒಂದೆರಡು ಸಂಗತಿ-ಗಳು ಪ್ರಸ್ತುತವಾಗಿವೆ. ಶ್ರೀರಾಮನು ವನವಾಸಕ್ಕೆ ಹೋದಾಗ ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಹೋಗುತ್ತಾನೆ. ಆಗ ವಾಲ್ಮೀಕಿಗಳೇ ಈ ಮಾತನ್ನು ಹೇಳುತ್ತಾರೆ-

ಅಹಂ ಪುರಾ ಕಿರಾತೇಷು ಕಿರಾತೈಃ ಸಹ ವರ್ಧಿತಃ ।
ಜನ್ಮಮಾತ್ರದ್ವಿಜತ್ವಂ ಮೇ ಶೂದ್ರಾಚಾರರತಃ ಸದಾ ॥ ೧-೬-೬೫

''ನಾನು ಹಿಂದೆ ವ್ಯಾಧರ ನಡುವೆ ಇದ್ದು ಅವರೊಡನೆಯೇ ಬೆಳೆದೆ. ಕೇವಲ ಹುಟ್ಟಿನಿಂದ ನಾನು ಬ್ರಾಹ್ಮಣ. ಶೂದ್ರಾಚಾರದಲ್ಲಿಯೇ ಇದ್ದು ಬಿಟ್ಟೆ.''

'ಜನ್ಮಮಾತ್ರದ್ವಿಜತ್ವಂ ಮೇ' ಎಂಬ ಮಾತಿನಿಂದ ಅವರು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರೆಂದು ಗೊತ್ತಾಗುತ್ತದೆ. ವಾಲ್ಮೀಕಿಗಳಿಗೆ 'ಪ್ರಾಚೇತಸ' ಎಂಬ ಇನ್ನೊಂದು ಹೆಸರಿತ್ತು. ಪ್ರಚೇತನ (ಪ್ರಚೇತಸ್-ಎಂಬವನ) ಮಗನಾದ್ದರಿಂದ ಪ್ರಾಚೇತಸ. ಈ ಪ್ರಚೇತನು ಒಬ್ಬ ವಿಪ್ರನಾಗಿದ್ದಿರಬೇಕು. ಪ್ರಚೇತಸ್-ಎಂಬ ಶಬ್ದಕ್ಕೆ ದಿಕ್‌ಪಾಲಕನಾದ ವರುಣನೆಂಬ ಅರ್ಥವೂ ಇದೆ. ಆದರೆ ವರುಣನ ಮಗನೆಂದು ಹೇಳಲು ಆಧಾರವೇನೂ ಇಲ್ಲ. ವಾಲ್ಮೀಕಿಗಳನ್ನು ವಾರುಣಿಯೆಂದು ಯಾರೂ ಕರೆದಿಲ್ಲ. ಮೂಲತಃ ವಾಲ್ಮೀಕಿಯು ವಿಪ್ರನೇ ಹೊರತು ಬೇಡರ ಜಾತಿಯವನಲ್ಲ. ಅಧ್ಯಾತ್ಮರಾಮಾಯಣದಲ್ಲಿ ವಾಲ್ಮೀಕಿಗಳೇ ಹೇಳಿದ ಮುಂದಿನ ಕಥೆ ಹೀಗಿದೆ.

''ರಾಮ, ನನಗೆ ಒಬ್ಬ ಶೂದ್ರ ಸ್ತ್ರೀಯಲ್ಲಿ ಅನೇಕ ಮಕ್ಕಳಾದರು. ಅನಂತರ ನಾನು ಕಳ್ಳರೊಡನೆ ಸೇರಿ ಧನುರ್ಬಾಣಗಳನ್ನು ಧರಿಸಿ-ಕೊಂಡು ಪ್ರಾಣಿಗಳಿಗೆ ಯಮನಂತೆ ಭೀಕರ ವೃತ್ತಿಯಿಂದ ಜೀವಿಸುತ್ತಿದ್ದೆ. ಒಮ್ಮೆ ದಟ್ಟವಾದ ಕಾಡಿನಲ್ಲಿ ಸೂರ್ಯನಂತೆ ತೇಜಸ್ವಿಗಳಾಗಿದ್ದ ಏಳು ಜನ ಋಷಿಗಳು ಬರುತ್ತಿದ್ದುದನ್ನು ಕಂಡೆನು. ಅವರಲ್ಲಿರಬಹುದಾದ ವಸ್ತು-ಗಳನ್ನು ಅಪಹರಿಸಬೇಕೆಂದು ನಾನು ಅವರನ್ನು ಅಡ್ಡಗಟ್ಟಿದೆನು. ಆ ಋಷಿಗಳು ನನ್ನನ್ನು ನೋಡಿ ''ಎಲೈ ದ್ವಿಜಾಧಮ, ಏಕೆ ನಮ್ಮನ್ನು ಅಡ್ಡಗಟ್ಟುತ್ತಿದ್ದೀಯೆ?'' ಎಂದು ಕೇಳಿದರು. ನಾನು ''ಮಹರ್ಷಿಗಳೆ, ನನಗೆ ಹೆಂಡತಿ-ಮಕ್ಕಳಿದ್ದಾರೆ. ಅವರನ್ನು ಕಾಪಾಡುವುದಕ್ಕಾಗಿ ಕಾಡಿನಲ್ಲಿ ಅಲೆಯುತ್ತಿದ್ದೇನೆ. ನಿಮ್ಮಲ್ಲಿ ಏನಾದರೂ ಇದ್ದರೆ ಅದನ್ನು ಕಿತ್ತುಕೊಳ್ಳು-ವುದು ನನ್ನ ಉದ್ದೇಶ'' ಎಂದೆನು. ಅವರು ನನ್ನನ್ನು ನೋಡಿ ಸ್ವಲ್ಪವೂ ಹೆದರಲಿಲ್ಲ. ಅವರು ನನಗೆ ''ನೀನು ಮಾಡುವ ಈ ಪಾಪ ಕಾರ್ಯಗಳಿಗೆ ಯಾರು ಹೊಣೆ? ಇದರ ಫಲವನ್ನು ಅವರು ಅನುಭವಿಸುತ್ತಾರೇನು? ಮನೆಗೆ ಹೋಗಿ ಅವರನ್ನು ಬೇರೆ ಬೇರೆಯಾಗಿ ಕರೆದು ವಿಚಾರಿಸಿ-ಕೊಂಡು ಬಾ. ನೀನು ಬರುವವರೆಗೆ ನಾವು ಇಲ್ಲಿಯೇ ಇರುತ್ತೇವೆ.

ಇದು ನಿಶ್ಚಯ, ಹೋಗು'' ಎಂದರು. ಅವರು ಹೇಳಿದ್ದು ಸರಿ ಎನಿಸಿತು. ನಾನು ಮನೆಗೆ ಹೋಗಿ ಕುಟುಂಬದವರನ್ನೆಲ್ಲ ಬೇರೆ ಬೇರೆಯಾಗಿ ಕರೆದು ವಿಚಾರಿಸಿದೆ. ಹೆಂಡತಿ ಮಕ್ಕಳೆಲ್ಲರೂ ಹೇಳಿದ್ದೇನೆಂದರೆ, ''ನಾವು ಪಾಪ ಕರ್ಮವನ್ನು ಹೊತ್ತುಕೊಳ್ಳುವುದಿಲ್ಲ. ಅದಕ್ಕೆ ನೀನೇ ಹೊಣೆಗಾರ. ನಮ್ಮನ್ನು ಕಾಪಾಡುವುದು ನಿನಗೆ ಸೇರಿದ್ದು. ಕೆಟ್ಟ ಕೆಲಸದಿಂದ ಸಂಪಾದಿಸು ಎಂದು ನಾವೇನೂ ಹೇಳಿಲ್ಲ'' ಎಂದು. ನನಗೆ ನಿಜವಾಗಿ ಪಶ್ಚಾತ್ತಾಪವಾಯಿತು. ಚಿತ್ತದಲ್ಲಿ ವೈರಾಗ್ಯವು ತಲೆದೋರಿತು. ಹಿಂದಿರುಗಿ ಬಂದು ಈ ವಿಷಯವನ್ನು ಋಷಿಗಳಿಗೆ ಅರಿಕೆ ಮಾಡಿದೆನು. ''ಪೂಜ್ಯರೆ, ಈ ಪಾಪಕರ್ಮಗಳನ್ನು ಮಾಡಿ ನರಕಕ್ಕೆ ಬೀಳುತ್ತಿರುವ ನನ್ನನ್ನು ಕಾಪಾಡಿರಿ'' ಎಂದು ಹೇಳಿ ಸಾಷ್ಟಾಂಗ ನಮಸ್ಕಾರ ಮಾಡಿದೆನು. ಹಾಗೆ ನಮಸ್ಕರಿಸಿದ ನನ್ನನ್ನು ನೋಡಿ ಕರುಣಾಳುಗಳಾದ ಆ ಮುನಿಶ್ರೇಷ್ಠರು ''ಎದ್ದೇಳು, ನಿನಗೆ ಒಳ್ಳೆಯದಾಗಲಿ. ಸಜ್ಜನರ ಸಮಾಗಮವು ಸಫಲವಾಯಿತು. ನಿನಗೆ ಯಾವುದಾದರೊಂದು ಮಂತ್ರವನ್ನು ಉಪದೇಶಿಸುತ್ತೇವೆ. ಅದರಿಂದ ನಿನ್ನ ಪಾಪಗಳು ನೀಗುತ್ತವೆ'' ಎಂದು ಹೇಳಿ, ಅವರವರೇ ಏನೋ ಮಾತಾಡಿಕೊಂಡರು. ಈತನು ಪಾಪಿಯೂ ಭ್ರಷ್ಟನೂ ಆದ ಬ್ರಾಹ್ಮಣ. ಜನ್ಮಾಂತರ ಸಂಸ್ಕಾರದಿಂದ ಈಗ ಪಶ್ಚಾತ್ತಾಪ ಹುಟ್ಟಿದೆ. ಶರಣಾಗತನಾದ ಇವನನ್ನು ಉಪೇಕ್ಷಿಸಬಾರದು. ಇವನಿಗೊಂದು ಉತ್ತಮಮಾರ್ಗವನ್ನು ತೋರಿಸಬೇಕು'' ಎಂದು ನಿರ್ಣಯಿಸಿದರು. ನನ್ನನ್ನು ಕುರಿತು 'ಮರಾ' ಎಂದು ಯಾವಾಗಲೂ ಜಪಿಸುತ್ತಿರು. ಒಂದೇ ಮನಸ್ಸಿನಿಂದ ಜಪಿಸಬೇಕು. ನಾವು ಇನ್ನೊಮ್ಮೆ ಇಲ್ಲಿಗೆ ಬರುತ್ತೇವೆ. ಅಲ್ಲಿಯವರೆಗೆ ಜಪಿಸುತ್ತಿರು. ಕುಳಿತ ಸ್ಥಳದಿಂದ ಚಲಿಸಬೇಡ'' ಎಂದು ಹೇಳಿ ಆ ಮಹಾತ್ಮರು ಹೊರಟು ಹೋದರು.

ನಾನು ಅವರ ಉಪದೇಶದಂತೆ 'ಮರಾಮರಾಮರಾ' ಎಂದು ಏಕಾಗ್ರಚಿತ್ತದಿಂದ ಜಪಿಸುತ್ತ ಕುಳಿತುಬಿಟ್ಟೆನು. ಹೊರಗಿನ ಪ್ರಪಂಚವೆಲ್ಲ

ಮರೆತು ಹೋಯಿತು. ಹಾಗೆ ಎಷ್ಟು ಕಾಲ ಕುಳಿತಿದ್ದನೋ ತಿಳಿಯದು. ನಿಶ್ಚಲವಾಗಿ ಕುಳಿತ ನನ್ನ ಮೇಲೆ ವಲ್ಮೀಕವು (ಹುತ್ತವು) ಬೆಳೆಯಿತು. ನನಗೆ ಅದರ ಪರಿವೆಯೇ ಇರಲಿಲ್ಲ. ಕಡೆಗೆ ಒಂದು ದಿನ ಆ ಋಷಿ-ಶ್ರೇಷ್ಠರು ಬಂದರು. ಹುತ್ತವು ನನ್ನ ಮೇಲೆ ಬೆಳೆದಿರುವುದನ್ನು ಕಂಡು "ಹೊರಕ್ಕೆ ಬಾ" ಎಂದು ಕರೆದರು. ಆಗ ನನಗೆ ಬಾಹ್ಯಪ್ರಜ್ಞೆ ಬಂದಿತು. ಎದ್ದು ಬಂದು ಅವರಿಗೆ ನಮಸ್ಕರಿಸಿದೆನು. ಅವರು ನನ್ನನ್ನು ನೋಡಿ "ಮುನಿಶ್ರೇಷ್ಠನೆ, ನಿನ್ನ ಪಾಪಗಳೆಲ್ಲ ಕಳೆದವು. ಹುತ್ತದಿಂದ ಹೊರಗೆ ಬಂದಿದ್ದೀಯೆ. ಇನ್ನೊಂದು ಜನ್ಮವೇ ನಿನಗೆ ಬಂದಂತಾಯಿತು. ವಲ್ಮೀಕದಿಂದ ಉದ್ಭವಿಸಿದ ಕಾರಣ ವಾಲ್ಮೀಕಿ ಎಂಬ ಹೆಸರಿನಿಂದ ಪ್ರಸಿದ್ಧನಾಗುವೆ" ಎಂದು ತಿಳಿಸಿ ನಿರ್ಗಮಿಸಿದರು."

ರಾಮನಾಮದ ಮಹಿಮೆಯನ್ನು ಕೊಂಡಾಡುವುದಕ್ಕಾಗಿ ಈ ಕಥೆ ಪ್ರಸ್ತುತವಾಗಿದೆ. ರಾಮ ಎಂಬ ಶಬ್ದವನ್ನು ಹಿಂದುಮುಂದಾಗಿ 'ಮರಾ' ಎಂದು ಜಪಿಸುವಂತೆ ಋಷಿಗಳು ತಿಳಿಸಿದ್ದೇಕೆ? 'ಮರಾಮರಾಮರಾ' ಎನ್ನುವಾಗ ರಾಮಶಬ್ದದ ಜಪವೇನೋ ಆಗುವುದೆನ್ನೋಣ. ಅರ್ಥ-ಗೊತ್ತಿಲ್ಲದೆ ಹೇಗೆ ಜಪಿಸಿದರೂ ರಾಮಮಂತ್ರವು ಫಲವನ್ನೀಯುತ್ತದೆ ಎಂದು ಅಭಿಪ್ರಾಯವಿದ್ದೀತು. ಕೆಲವರು ಹೇಳುವುದೇನೆಂದರೆ : ಆ ವ್ಯಾಧನು ಕಾಡಿನಲ್ಲಿದ್ದುದರಿಂದ 'ಮರ'ದ ಪರಿಚಯವಿರುತ್ತದೆ. ಮರಾ ಎಂದರೆ ಅರ್ಥವು ಅವನಿಗೆ ತಿಳಿಯುತ್ತದೆ ಎಂದು ಹಾಗೆ ಋಷಿಗಳು ಹೇಳಿದರು.

ಹಾಗಾದರೆ ಆ ವ್ಯಾಧನು ಕನ್ನಡಿಗನಾಗಿರಬಹುದೆ! ಅದಾವುದೂ ಸರಿದೋರುವುದಿಲ್ಲ. ಶೂದ್ರಾಚಾರನಿರತನಾದವನಿಗೆ ನೇರವಾಗಿ ರಾಮ ಮಂತ್ರವನ್ನು ಉಪದೇಶಿಸುವುದು ಯುಕ್ತವಲ್ಲವೆಂದು ಋಷಿಗಳು ಭಾವಿಸಿರಬೇಕು. ಆದ್ದರಿಂದ 'ಮರಾ' ಎಂದು ಜಪಿಸುವಂತೆ ಹೇಳಿದ-ರೆಂದು ತೋರುತ್ತದೆ. ವಾಲ್ಮೀಕಿಯೆಂಬ ಶಬ್ದದ ಸಿದ್ಧಿಗಾಗಿ ಈ ಕಥೆ ಹುಟ್ಟಿರಬೇಕು.

ಮಹಾಭಾರತದಲ್ಲಿಯೂ ವಾಲ್ಮೀಕಿ ಮುನಿಗಳ ಪ್ರಸ್ತಾವ ಬಂದಿದೆ. ಇವರು ಇಂದ್ರನ ಸಭೆಯಲ್ಲಿರುತ್ತಿದ್ದರೆಂದು ಸಭಾಪರ್ವದಲ್ಲಿದೆ (೭-೧೯). ಶ್ರೀಕೃಷ್ಣನು ಶಾಂತಿದೂತನಾಗಿ ಹಸ್ತಿನಾಪುರಕ್ಕೆ ಹೋಗುವಾಗ ಇತರ ಮುನಿಗಳೊಡನೆ ವಾಲ್ಮೀಕಿ ಮುನಿಗಳೂ ಆತನಿಗೆ ಶುಭವನ್ನು ಹಾರೈಸಿದರು. (ಉದ್ಯೋ. ೮೨-೨೭) ಭೂರಿಶ್ರವಸ್ಸು ಯುದ್ಧವನ್ನು ತ್ಯಜಿಸಿ ಧ್ಯಾನಸ್ಥನಾಗಿ ಕುಳಿತಾಗ ಸಾತ್ಯಕಿಯು ಖಡ್ಗದಿಂದ ಅವನ ಶಿರಸ್ಸನ್ನು ಕತ್ತರಿಸುತ್ತಾನೆ. ಆಗ ಕೌರವ ಪಕ್ಷದವರು ಹೇಯಕೃತ್ಯವನ್ನು ನಡೆಸಿದ್ದಕ್ಕಾಗಿ ಸಾತ್ಯಕಿಯನ್ನು ನಿಂದಿಸುತ್ತಾರೆ. ಅವರಿಗೆ ಉತ್ತರ ಹೇಳುವಾಗ ಸಾತ್ಯಕಿಯು ನುಡಿಯುತ್ತಾನೆ-

ಅಪಿ ಚಾಯಂ ಪುರಾಗೀತಃ ಶ್ಲೋಕೋ ವಾಲ್ಮೀಕಿನಾ ಭುವಿ ।
ನ ಹಂತವ್ಯಾಃ ಸ್ತ್ರೀಯ ಇತಿ ಯದ್ ಬ್ರವೀಷಿ ಪ್ಲವಂಗಮ ।
ಪೀಡಾಕರಮಮಿತ್ರಾಣಾಂ ಯತ್ ಸ್ಯಾತ್ ಕರ್ತವ್ಯಮೇವ ತತ್ ॥

(ದ್ರೋಣ. ೧೪೨-೬೭-೬೮)

'ನ ಹಂತವ್ಯಾಃ ಸ್ತ್ರೀಯ ಇತಿ' ಎಂಬ ಶ್ಲೋಕವು ವಾಲ್ಮೀಕಿ ರಾಮಾಯಣದಲ್ಲಿದೆ.(ಯುದ್ಧ. ೮೧-೨೯). ಮಾಯಾಸೀತೆಯನ್ನು ಕೊಲ್ಲುವುದಕ್ಕೆ ಉದ್ಯುಕ್ತನಾದ ಇಂದ್ರಜಿತುವಿಗೆ ಹನುಮಂತನು 'ಸ್ತ್ರೀಯರನ್ನು ಕೊಲ್ಲಬಾರದು' ಎಂದು ಬುದ್ಧಿ ಹೇಳಿದಾಗ, ಇಂದ್ರಜಿತು ಹನುಮಂತನಿಗೆ ಆ ರೀತಿಯಲ್ಲಿ ಹೇಳಿದ್ದಾನೆ. ''ಎಲೈ ವಾನರ, ಸ್ತ್ರೀಯರನ್ನು ಕೊಲ್ಲಬಾರದು ಎಂದು ಹೇಳುತ್ತೀಯಲ್ಲ. ವೈರಿಗಳಿಗೆ ಯಾವಯಾವುದರಿಂದ ಪೀಡೆಯುಂಟಾಗುತ್ತದೆಯೋ ಅದನ್ನು ನಾವು ಮಾಡಲೇ ಬೇಕು!''

ಅನುಶಾಸನಪರ್ವದಲ್ಲಿ ವಾಲ್ಮೀಕಿ ಮುನಿಗಳು ಯುಧಿಷ್ಠಿರನೊಡನೆ ''ರಾಜ, ನಾನು ಒಂದು ಸಲ ಕೆಲವು ಮುನಿಗಳೊಡನೆ ವಾದಮಾಡಿದೆ. ತಮ್ಮ ತೇಜೋವಧೆಯಾಯಿತೆಂದು ಅವರು ಕ್ರುದ್ಧರಾಗಿ 'ನೀನು ಬ್ರಹ್ಮಹತ್ಯೆ ಮಾಡಿದ ದೋಷಕ್ಕೆ ಗುರಿಯಾಗು' ಎಂದು ಶಪಿಸಿದರು. ಒಡನೆಯೇ

ಆ ದೋಷವು ನನ್ನನ್ನು ಆವರಿಸಿತು. ನಾನು ಪರಮೇಶ್ವರನಿಗೆ ಶರಣಾಗತನಾಗಿ ಶಿವನಾಮಗಳನ್ನು ಜಪಿಸಿ, ಆ ದೋಷದಿಂದ ಪಾರಾದೆನು'' ಎಂದು ಹೇಳಿದ್ದಾರೆ. (ಅನು. ೧೮-೮-೧೦)

''ರಾಮಾಯಣದ ವೃತ್ತಾಂತವು ಮಹಾಭಾರತಕ್ಕಿಂತ ಪೂರ್ವದಲ್ಲಿಯೇ ನಡೆದದ್ದು. ಆದರೆ ವಾಲ್ಮೀಕಿಯು ರಾಮಾಯಣವನ್ನು ಬರೆದದ್ದು ಮಹಾಭಾರತದ ರಚನೆಯಾದ ಮೇಲೆ'' ಎಂದು ಆಧುನಿಕ ವಿಮರ್ಶಕರು ಹೇಳಿದ್ದಾರೆ. ಸಾತ್ಯಕಿಯು ''ಅಪಿ ಚಾಯಂ ಪುರಾ ಗೀತಃ ಶ್ಲೋಕೋ ವಾಲ್ಮೀಕಿನಾ ಭುವಿ'' ಎಂದು ಹೇಳಿದ ಮೇಲ್ಕಂಡ ಉದಾಹೃತ ಶ್ಲೋಕವು ಮಹಾಭಾರತದಲ್ಲಿಯೇ ಇದೆ. ಈ ವಿಮರ್ಶಕರ ಹೇಳಿಕೆ ಹುರುಳಿಲ್ಲದ್ದೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಶ್ರೀಮದ್ರಾಮಾಯಣವು ಒಂದು ಮಹಾಕಾವ್ಯ, ಪುರಾಣವಲ್ಲ. ಓದುಗರಿಗೆ ಲೋಕೋತ್ತರವಾದ ಆನಂದವನ್ನುಂಟುಮಾಡುವ ಸೌಂದರ್ಯವು ಕಾವ್ಯದಲ್ಲಿರುತ್ತದೆ. ಇತರ ಸಾಹಿತ್ಯ ಪ್ರಕಾರಗಳಿಂದ ಕಾವ್ಯವನ್ನು ಬೇರ್ಪಡಿಸುವ ವಿಭಾಜಕವೇ ಈ ಸೌಂದರ್ಯ. 'ಕಾವ್ಯಂ ಗ್ರಾಹ್ಯಮಲಂಕಾರಾತ್, ಸೌಂದರ್ಯಮಲಂಕಾರಃ' ಎಂದು ಆಲಂಕಾರಿಕನಾದ ವಾಮನನು ಹೇಳಿದ್ದು ಈ ಕಾರಣದಿಂದಲೇ. ಕಾವ್ಯ ಸೌಂದರ್ಯಕ್ಕೆ ಕಾರಣವಾದವು ಹಲವಾರು. ಪದ, ರೀತಿ, ಶಯ್ಯೆ, ಉಪಮಾದ್ಯಲಂಕಾರ, ಗುಣ, ಭಾವ, ರಸ, ಮೊದಲಾದವು. ಛಂದೋಬದ್ಧವಾದ ಗೇಯತೆಯು ಕಾವ್ಯಕ್ಕೆ ವಿಶಿಷ್ಟಶೋಭೆಯನ್ನುಂಟು ಮಾಡುತ್ತದೆ. ಇವೆಲ್ಲವನ್ನು ಹಿಡಿದಿಟ್ಟುಕೊಂಡಿರುವ ಜೀವಾಳವು ರಸ, ಅದು ಮನುಷ್ಯನಲ್ಲಿ ಜೀವವಿದ್ದಂತೆ. ಆದ್ದರಿಂದ ಕಾವ್ಯದ ಜೀವಾತ್ಮವು ರಸವೆಂದು ಆಲಂಕಾರಿಕರು ಹೇಳಿದ್ದಾರೆ.

ರಸವಾದರೋ ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತ- ಎಂದು ಒಂಬತ್ತು ವಿಧ. ಇವೇ

ನವರಸಗಳು. ರಾಮಾಯಣವು ನವರಸಭರಿತವಾಗಿದೆಯೆಂದೂ ಇದನ್ನು ಲವಕುಶರು ಹಾಡಿದರೆಂದೂ ಈ ಶ್ಲೋಕದಿಂದ ತಿಳಿದುಬರುತ್ತದೆ.

ರಸೈಃ ಶೃಂಗಾರಕರುಣ ಹಾಸ್ಯ ರೌದ್ರಭಯಾನಕೈಃ ।
ವೀರಾದಿಭಿಶ್ಚ ಸಂಯುಕ್ತಂ ಕಾವ್ಯಮೇತದಗಾಯತಾಮ್ ॥

- ಬಾಲಕಾಂಡ ೪-೯

'ವೀರಾದಿಭಿಃ' ಎಂಬ ಆದಿಪದದಿಂದ ಅದ್ಭುತ, ರೌದ್ರ, ಶಾಂತ ರಸಗಳನ್ನು ಗ್ರಹಿಸಬೇಕು. ಪ್ರತಿಯೊಂದು ರಸಕ್ಕೂ ಮೂಲಭೂತವಾದ ಒಂದು ಚಿತ್ತವೃತ್ತಿ ಇರುತ್ತದೆ. ಅದನ್ನು ಸ್ಥಾಯಿಭಾವವೆನ್ನುತ್ತಾರೆ. ಸ್ಥಾಯಿಯೆಂದರೆ ಬಹಳ ಕಾಲ ಇರತಕ್ಕದ್ದು. ಇದು ಬೇರೆಬೇರೆ ಕಾರಣಗಳಿಂದ ಧ್ವನಿತವಾದಾಗ ರಸವೆನಿಸುತ್ತದೆ. ರಸವು ಶಬ್ದದಿಂದ ನೇರವಾಗಿ ವಾಚ್ಯವಲ್ಲ. ರಸವು ಯಾವಾಗಲೂ ವ್ಯಂಗ್ಯವಾಗಿ ತೋರುತ್ತದೆ. ಈ ಸ್ಥಾಯಿಭಾವವೇ ವ್ಯಂಗ್ಯವಾಗಿ ರಸವಾಗುತ್ತದೆ. ಶೃಂಗಾರಕ್ಕೆ ರತಿ, ವೀರಕ್ಕೆ ಉತ್ಸಾಹ, ಕರುಣರಸಕ್ಕೆ ಶೋಕ, ಅದ್ಭುತಕ್ಕೆ ವಿಸ್ಮಯ, ಹಾಸ್ಯಕ್ಕೆ ಹಾಸ, ಭಯಾನಕಕ್ಕೆ ಭಯ, ಬೀಭತ್ಸಕ್ಕೆ ಜುಗುಪ್ಸೆ, ರೌದ್ರಕ್ಕೆ ಕ್ರೋಧ, ಶಾಂತರಸಕ್ಕೆ ಶಮ- ಇವು ಸ್ಥಾಯಿಭಾವಗಳು. ಇನ್ನು ವಿಭಾವ, ಅನುಭಾವ, ಸಂಚಾರಿಭಾವ, ಸಾತ್ತ್ವಿಕಭಾವ - ಇವು ರಸದ ವ್ಯಂಜಕಗಳು ಪ್ರಕೃತದಲ್ಲಿ ಅವುಗಳ ವಿವರವು ಅಪ್ರಸ್ತುತ.

ವಾಲ್ಮೀಕಿರಾಮಾಯಣದಲ್ಲಿ ಈ ಎಲ್ಲ ರಸಗಳಿಗೂ ಉಚಿತವಾದ ಉದಾಹರಣೆಗಳು ದೊರೆಯುತ್ತವೆ. ಯಾವುದೇ ಒಂದು ರಸವೂ ಎಳೆದು ತಂದಿದ್ದಲ್ಲ. ಕಥಾ ಪ್ರಸಂಗದಿಂದ ಸಹಜವಾಗಿ ಬಂದವು. ಇವುಗಳಲ್ಲದೆ ಲಜ್ಜೆ, ಅಸೂಯೆ - ಮುಂತಾದ ವಿವಿಧ ಭಾವಗಳಿಗೆ ರಾಮಾಯಣವು ಆಕರವಾಗಿದೆ. ಶ್ರೀರಾಮನಿಗೆ ಸೀತೆಯಲ್ಲಿಯೂ ಸೀತೆಗೆ ಶ್ರೀರಾಮನಲ್ಲಿಯೂ ಇದ್ದ ಅನ್ಯೋನ್ಯವಾದ ಅನುರಾಗವೇ ರತಿ. ಅಯೋಧ್ಯಾ-

ಕಾಂಡದಿಂದ ಮುಂದೆ ಎಲ್ಲ ಕಾಂಡಗಳಲ್ಲಿಯೂ ಇದು ಅಭಿವ್ಯಕ್ತ-ವಾಗಿದೆ. ಸೀತಾಪಹರಣವಾದ ಮೇಲೆ ಅವರಿಬ್ಬರ ವಿರಹಕಾಲದಲ್ಲಿ ಅಭಿವ್ಯಕ್ತವಾದ ಅನುರಾಗಕ್ಕೆ ವಿಪ್ರಲಂಭಶೃಂಗಾರವೆಂದು ಹೆಸರು. ರಾವಣನು ಸೀತಾದೇವಿಯಲ್ಲಿ ತೋರಿಸಿದ ಪ್ರೇಮವು ರಸವೆನಿಸುವು-ದಿಲ್ಲ. ಪರಸ್ತ್ರೀಯಲ್ಲಿ ಅತ್ಯಂತ ಅನುಚಿತವಾಗಿ ಪ್ರವೃತ್ತವಾದ್ದರಿಂದ ಅದು ರಸಾಭಾಸ. ಹೀಗೆ ಇತರ ಸ್ಥಾಯಿಭಾವಗಳೂ ಅನುಚಿತವಾಗಿ ತೋರಿದಾಗ ರಸಾಭಾಸಗಳೆನಿಸುತ್ತವೆ.

ಶ್ರೀರಾಮನು ಖರದೂಷಣಾದಿಗಳನ್ನು ವಧಿಸುವಾಗ, ಶ್ರೀರಾಮ-ಲಕ್ಷ್ಮಣರು ಯುದ್ಧಕಾಂಡದಲ್ಲಿ ವೈರಿಗಳೊಡನೆ ಯುದ್ಧಮಾಡುವಾಗ ಅಭಿವ್ಯಕ್ತವಾಗುವ ಉತ್ಸಾಹವು ವೀರರಸವಾಗುತ್ತದೆ. ಅವರ ಪ್ರವೃತ್ತಿಯು ಕ್ರೋಧಮಯವಾಗಿದ್ದರೆ ರೌದ್ರವೆನಿಸುತ್ತದೆ. ವಾಲಿ ಸಂಹಾರವಾದಾಗ ತಾರಾವಿಲಾಪ, ರಾವಣವಧೆಯಾದಾಗ ಮಂಡೋದರಿಯ ವಿಲಾಪ-ಇವು ಕರುಣ ರಸಕ್ಕೆ ಉದಾಹರಣೆಗಳು. ಸೇತು ಬಂಧನ, ಹನುಮಂತನ ಸಮುದ್ರ ಲಂಘನಗಳು ಅದ್ಭುತಕ್ಕೆ ನಿದರ್ಶನಗಳು. ಲಂಕಾದಹನವಾದಾಗ ರಾಕ್ಷಸಿಯರಲ್ಲಿ ವ್ಯಕ್ತವಾಗುವ ಭಯವು ಭಯಾನಕರಸ. ಕುಂಭಕರ್ಣನ ನಡವಳಿಕೆಯಲ್ಲಿ ಬೀಭತ್ಸವಿದೆ. ವಿಶ್ವಾಮಿತ್ರಾದಿ ಮುನಿಗಳ ಪ್ರಸಂಗದಲ್ಲಿ ಶಾಂತರಸವಿದೆ. ಇವು ದಿಙ್ಮಾತ್ರನಿದರ್ಶನಗಳು. ಇನ್ನೂ ನಾನಾ ಸ್ಥಳ-ಗಳನ್ನು ಹೀಗೆಯೇ ಊಹಿಸಿಕೊಳ್ಳಬಹುದು.

ಹಾಸ್ಯರಸ

ಹಾಸ್ಯರಸಕ್ಕೆ ಸ್ಥಾಯಿಭಾವವಾದ ಹಾಸವು ಒಂದು ಮನೋವೃತ್ತಿ. ಇದರಿಂದ ಮನಸ್ಸು ವಿಕಾಸಗೊಳ್ಳುತ್ತದೆ. ಹಾಸವನ್ನು ಪ್ರಕಾಶಗೊಳಿ-ಸುವುದು ಮುಖ್ಯವಾಗಿ ನಗು. ಇದು ಹಾಸದ ಅನುಭಾವ. ಹಾಸ್ಯಮಾಡ-ತಕ್ಕವನಲ್ಲಿರುವ ಹಾಸವೆಂಬ ಮನೋವೃತ್ತಿಯನ್ನು ಈ ನಗು ಅಭಿ-ವ್ಯಂಜಿಸುತ್ತದೆ. ಇದೇ ಮನೋವೃತ್ತಿಯು ಸಂಸ್ಕಾರರೂಪದಿಂದ ವಾಚಕ-ರಲ್ಲಿಯೂ ಶ್ರೋತೃಗಳಲ್ಲಿಯೂ ಸಭಾಸದರಲ್ಲಿಯೂ ಇರುತ್ತದೆ.

ಹಾಸ್ಯಗಾರನಲ್ಲಿರುವ ಈ ಹಾಸವನ್ನು ತನ್ನದೇ ಎಂದು ತಾದಾತ್ಮ್ಯದಿಂದ ಈ ಜನರು ಅನುಭವಿಸುವುದರಿಂದ ಇವರಲ್ಲಿಯೂ ನಗು ಕಾಣಿಸಿ-ಕೊಳ್ಳುತ್ತದೆ. ಹಾಸ್ಯವಸ್ತುವಿಗೆ ಅನುಗುಣವಾಗಿ ಮತ್ತು ನಗತಕ್ಕವರ ಗುಣಸ್ವಭಾವಗಳಿಗೆ ಅನುಗುಣವಾಗಿ ನಗು ಅನೇಕ ವಿಧವಾಗುವು-ದುಂಟು. ಕೆಲವು ವೇಳೆ ಮುಗುಳ್ನಗೆ ಮಾತ್ರ ಕಾಣಿಸುತ್ತದೆ. ಇದೇ ಸ್ಮಿತ ಅಥವಾ ಮಂದಹಾಸ. ಕೆಲವು ವೇಳೆ ಧ್ವನಿಗೈಯುವ ದೊಡ್ಡ ಅಟ್ಟಹಾಸ-ವಾಗಬಹುದು. ಈ ನಗುವನ್ನು ಸ್ಮಿತ, ಹಸಿತ, ವಿಹಸಿತ, ಪ್ರಹಸಿತ, ಅತಿಹಸಿತ - ಹೀಗೆ ಅನೇಕ ಬಗೆಯಲ್ಲಿ ವಿಂಗಡಿಸಿದ್ದುಂಟು. ಸಾಮಾನ್ಯ-ವಾಗಿ ಧೀರೋದಾತ್ತರಾದ ಮಹಾಪುರುಷರಲ್ಲಿ ಸ್ಮಿತವು ಮಾತ್ರ ಕಾಣಿಸಿ-ಕೊಳ್ಳುತ್ತದೆ.

ಹಾಸ್ಯದಲ್ಲಿ ಎಲ್ಲ ಇತರ ರಸಗಳಿಗಿಂತ ಭಿನ್ನವಾದ ಒಂದು ವೈಶಿಷ್ಟ್ಯವನ್ನು ಕಾಣಬಹುದು. ಇದು ಸರ್ವಜನರಿಗೂ ಪ್ರಿಯವಾಗಿದೆ. ಬಾಲಕರಿಂದ ಹಿಡಿದು ವೃದ್ಧರವರೆಗೆ ಎಲ್ಲರನ್ನೂ ಹಾಸ್ಯವು ರಂಜಿಸ-ಬಲ್ಲದು. ಮನುಷ್ಯನು ಯಾವ ವೃತ್ತಿಯಲ್ಲಿದ್ದರೂ ಭಿಕ್ಷುಕ, ಸೇವಕ, ಅಧಿಕಾರಿ, ವ್ಯಾಪಾರಿ, ಗೃಹಸ್ಥ, ಸಂನ್ಯಾಸಿ - ಎಲ್ಲರೂ ಹಾಸ್ಯವನ್ನು ಆಸ್ವಾದಿಸಬಲ್ಲರು. ಇತರ ರಸಗಳು ಹೀಗಲ್ಲ. ಶೃಂಗಾರವು ಬಾಲಕರಿಗೆ ತಿಳಿಯದು. ವೃದ್ಧರಿಗೆ ಹಿಡಿಸದು. ಸಂನ್ಯಾಸಿಗಳಿಗೆ ನಿಷಿದ್ಧ. ವೀರರಸವೂ ಅಷ್ಟೆ. ಬಹಳ ಜನರಿಗೆ ಅದು ರುಚಿಸುವುದಿಲ್ಲ. ಕರುಣರಸ ಪ್ರಧಾನ-ವಾದ ಕಥಾಭಾಗವನ್ನು ಓದಲು ಸಹ ಇಷ್ಟಪಡದವರಿದ್ದಾರೆ. ಇದೇ ಸ್ಥಿತಿ ಅನ್ಯರಸಗಳಿಗೂ ಅನ್ವಯಿಸುತ್ತದೆ. ಆದರೆ ಹಾಸ್ಯವನ್ನು ಆಹ್ಲಾದಿಸದ ಸ್ತ್ರೀ ಪುರುಷರು ಕಂಡುಬರುವುದಿಲ್ಲ. ಹಾಸ್ಯದ್ವೇಷಿಗಳನ್ನು ನಾನು ಇದು-ವರೆಗೂ ನೋಡಿಲ್ಲ. ಎಂತಹ ಶೋಕಸಮಯದಲ್ಲಿಯೂ ಯಾರಾದರೂ ಹಾಸ್ಯದ ಮಾತನ್ನಾಡಿದರೆ, ಒಂದು ಕ್ಷಣಕಾಲವಾದರೂ ಮನಸ್ಸಿನಲ್ಲಿ ಸೌಖ್ಯವು ಮಿಂಚುತ್ತದೆ. 'ಶೃಂಗಾರಪ್ರಭವೋ ಹಾಸ್ಯಃ' ಎಂದು

ಆಲಂಕಾರಿಕರು ಹೇಳಿದ್ದಾರೆ. ಶೃಂಗಾರದಿಂದ ಹಾಸ್ಯವು ಹುಟ್ಟುತ್ತದೆ-ಯಂತೆ. ಅವರ ಅಭಿಪ್ರಾಯವೇನೆಂಬುದು ಸ್ಪಷ್ಟವಾಗುವುದಿಲ್ಲ. ಅದನ್ನು ಸಮರ್ಥಿಸುವುದು ಕಷ್ಟ. ಉಲ್ಲಾಸದಿಂದ ಹಾಸ್ಯವು ಹುಟ್ಟುತ್ತದೆ ಎನ್ನ-ಬಹುದು. ಉಲ್ಲಾಸವಿಲ್ಲದೆ ಯಾರಿಂದಲೂ ಹಾಸ್ಯದ ಮಾತು ಹೊರಡ-ಲಾರದು. ಶೃಂಗಾರವೆಂದರೆ ಮಾನಸಿಕವಾದ ಉಲ್ಲಾಸವೆಂದು ಆ ಮಾತಿನ ತಾತ್ಪರ್ಯವಿರಬಹುದು.

ಹಾಸ್ಯಕ್ಕೆ ಕೆಲವು ಉದಾಹರಣೆಗಳನ್ನಿಲ್ಲಿ ಪರಿಶೀಲಿಸಬಹುದು:

ಭಿಕ್ಷೋ ಮಾಂಸನಿಷೇವಣಂ ಪ್ರಕುರುಷೇ, ಕಿಂ ತೇನ ಮದ್ಯಂ ವಿನಾ
ಮದ್ಯಂ ಚಾಪಿ ತವ ಪ್ರಿಯಂ, ಪ್ರಿಯಮಹೋ ವಾರಾಂಗನಾಭಿಃ ಸಹ ।
ವೇಶ್ಯಾ ದ್ರವ್ಯರುಚಿಃ ಕುತಸ್ತವ ಧನಂ, ದ್ಯೂತೇನ ಚೌರ್ಯೇಣ ವಾ
ಚೌರ್ಯದ್ಯೂತಿ ಪರಿಗ್ರಹೋಽಪಿ ಭವತೋ ಭ್ರಷ್ಟಸ್ಯ ಕಾ ವಾ ಗತಿಃ ॥

ಒಬ್ಬ ಸಂನ್ಯಾಸಿಯು ಮಾಂಸದ ಅಂಗಡಿಯಿಂದ ಹೊರಗೆ ಹೋಗು-ತ್ತಿರುವುದನ್ನು ಕಂಡು ವಿಸ್ಮಿತನಾದ ಒಬ್ಬ ಗೃಹಸ್ಥನು ಅವನನ್ನು ಕೇಳುತ್ತಾನೆ-

ಗೃಹಸ್ಥ - ಎಲೈ ಸಂನ್ಯಾಸಿ, ಮಾಂಸ ಸೇವನೆಯನ್ನು ಮಾಡುತ್ತೀಯಾ?
ಸಂನ್ಯಾಸಿ - ಹೆಂಡವಿಲ್ಲದಿದ್ದಮೇಲೆ ಅದರಲ್ಲೇನು ಸ್ವಾರಸ್ಯವಿದೆ!
ಗೃಹಸ್ಥ - ಓಹೋ, ನಿನಗೆ ಹೆಂಡವೂ ಪ್ರಿಯವಾದದ್ದೋ?
ಸಂನ್ಯಾಸಿ - ಖಂಡಿತವಾಗಿ, ಜೊತೆಗೆ ವೇಶ್ಯೆಯರಿದ್ದರೆ ಇನ್ನು ರುಚಿ!
ಗೃಹಸ್ಥ - ವೇಶ್ಯೆ ಹಣವನ್ನು ಬಯಸುತ್ತಾಳೆ. ನಿನಗೆ ಹಣವೆಲ್ಲಿಂದ ಬರುತ್ತದೆ?
ಸಂನ್ಯಾಸಿ - ಜೂಜಿನಿಂದಲೋ ಕಳ್ಳತನದಿಂದಲೋ ಬರುತ್ತದೆ!
ಗೃಹಸ್ಥ - ಅಬ್ಬಾ, ನಿನ್ನಲ್ಲಿ ಜೂಜೂ ಕಳ್ಳತನಗಳೂ ಉಂಟು?
ಸಂನ್ಯಾಸಿ - ಸರ್ವಭ್ರಷ್ಟನಾದ ನನಗೆ ಬೇರೆ ಗತಿ ಏನಿದೆ?

ಈ ಕಪಟಸಂನ್ಯಾಸಿಯು ನಿಶ್ಶಂಕೆಯಿಂದ ಕೊಡುವ ಉತ್ತರಗಳು ಒಂದಕ್ಕಿಂತ ಒಂದು ನಾ ಮುಂದೆ ತಾ ಮುಂದೆ ಎಂದು ಹಾಸ್ಯವನ್ನು ಮಿನುಗಿಸುತ್ತವೆ.

ಕಮಲೇ ಕಮಲಾ ಶೇತೇ ಶಿವಃ ಶೇತೇ ಹಿಮಾಲಯೇ ।
ಕ್ಷೀರಾಬ್ಧೌ ಚ ಹರಿಃ ಶೇತೇ ಮನ್ಯೇ ಮತ್ಕುಣಶಂಕಯಾ ॥

''ಲಕ್ಷ್ಮೀದೇವಿಯು (ನೀರಿನ ನಡುವೆ) ತಾವರೆ ಹೂವಿನಲ್ಲಿ ಮಲಗುತ್ತಾಳೆ. ಶಿವನು ಹಿಮಾಲಯದಲ್ಲಿಯೂ ವಿಷ್ಣು ಕ್ಷೀರಸಮುದ್ರ-ದಲ್ಲಿಯೂ ಮಲಗುತ್ತಾರೆ. ಅವರೆಲ್ಲರೂ ತಿಗಣೆಗೆ ಹೆದರಿಕೊಂಡು ಅಲ್ಲಿ ಮಲಗುತ್ತಿರಬೇಕೆಂದು ಕಾಣುತ್ತದೆ!''

ಮಶಕಾ ಮತ್ಕುಣಾ ರಾತ್ರೌ ಮಕ್ಷಿಕಾ ಭಿಕ್ಷುಕಾ ದಿವಿ ।
ಪಿಪೀಲಿಕಾಶ್ಚ ಭಾರ್ಯಾಶ್ಚ ಪೀಡಯಂತಿ ದಿವಾನಿಶಮ್ ॥

''ಸೊಳ್ಳೆಗಳೂ ತಿಗಣೆಗಳೂ ರಾತ್ರಿ ಹೊತ್ತು ಪೀಡಿಸುತ್ತವೆ. ನೊಣ-ಗಳೂ ಭಿಕ್ಷುಕರೂ ಹಗಲು ಕಾಡಿಸುತ್ತಾರೆ. ಇರುವೆಗಳೂ ಹೆಂಡತಿ-ಯರೂ ಹಗಲೂ ರಾತ್ರಿಯೂ ಪೀಡಿಸುತ್ತಾರೆ!''

ಇಂತಹ ಚಾಟು ಶ್ಲೋಕಗಳು ಸಂಸ್ಕೃತ ಸಾಹಿತ್ಯದಲ್ಲಿ ಯಥೇಚ್ಛವಾಗಿ ಇವೆ. ಇವು ಬಿಡಿ ಶ್ಲೋಕಗಳು. ಸಂದರ್ಭ ವಿಶೇಷದಲ್ಲಿ ಹೇಳಲು ಉಪಯುಕ್ತವಾದವು. ಹಾಸ್ಯರಸ ಪೋಷಣೆಗಾಗಿ ಕಾವ್ಯಗಳಲ್ಲಿ ಕವಿಗಳು ಹಾಸ್ಯವನ್ನು ತರುತ್ತಾರೆ. ನಾಟಕಗಳಲ್ಲಿ ಹಾಸ್ಯಕ್ಕಾಗಿ ವಿದೂಷಕನೇ ಮೀಸಲಾಗಿರುತ್ತಾನೆ. ಶ್ರವ್ಯಕಾವ್ಯಗಳಲ್ಲಿ ವಿದೂಷಕನಿಲ್ಲ. ಕೆಲವು ವರ್ಣನಾಸಂದರ್ಭಗಳಲ್ಲಿ ಕವಿಯೇ ಹಾಸ್ಯವನ್ನು ಮಿನುಗಿಸುತ್ತಾನೆ. ಇದು ಕವಿಯ ಪ್ರವೃತ್ತಿಯನ್ನವಲಂಬಿಸುತ್ತದೆ. ಲೋಕದಲ್ಲಿ ಎಲ್ಲರಿಗೂ ಹಾಸ್ಯಮಾಡಲು ಬರುವುದಿಲ್ಲ. ಆದರೆ ಎಲ್ಲರೂ ಹಾಸ್ಯವನ್ನು ಕೇಳಿ ಅನುಭವಿಸಬಲ್ಲರು. ಕವಿಗಳ ಪರಿಸ್ಥಿತಿಯೂ ಇದೇ. ಕಾಳಿದಾಸ. ಭಾಸ-ಮೊದಲಾದ ಕೆಲವರು ಹಾಸ್ಯವನ್ನು ತರಬಲ್ಲರು. ಭಾರವಿ, ಭವಭೂತಿ,

ಮುರಾರಿ- ಮೊದಲಾದವರು ಶ್ರವ್ಯ ಕಾವ್ಯದಲ್ಲಾಗಲಿ ನಾಟಕದಲ್ಲಾಗಲಿ ಹಾಸ್ಯದ ಸುದ್ದಿಗೇ ಹೋಗಿಲ್ಲ. ಅವರ ನಾಟಕಗಳಲ್ಲಿ ವಿದೂಷಕನ ಪ್ರವೇಶವಿರುವುದಿಲ್ಲ. ಎಲ್ಲ ಭಾಷಾಕವಿಗಳಿಗೂ ಇದು ಸಮಾನ.

ಕಾಳಿದಾಸನ ಕುಮಾರಸಂಭವದಿಂದ ಒಂದು ಉದಾಹರಣೆ- ಪಾರ್ವತಿಯು ಪರಮೇಶ್ವರನನ್ನು ಮದುವೆಯಾಗಬೇಕೆಂಬ ಉದ್ದೇಶ-ದಿಂದ, ಅವನನ್ನೇ ಮೆಚ್ಚಿಸಲು ಕಠೋರವಾದ ತಪಸ್ಸನ್ನಾಚರಿಸುತ್ತಾಳೆ. ಈಶ್ವರನು ಪ್ರಸನ್ನನಾದರೂ ಮೊದಲು ಅವಳನ್ನು ಪರೀಕ್ಷಿಸಬೇಕೆಂದು ವಟುವೇಷಧಾರಿಯಾಗಿ ಬಂದು ಮಾತಾಡುತ್ತ ಪಾರ್ವತಿಯನ್ನು ಕೆಣಕು-ತ್ತಾನೆ. ಶಿವನು ನಿನಗೆ ಯೋಗ್ಯನಾದ ಪತಿಯಲ್ಲವೆನ್ನುತ್ತಾನೆ! ಅವನು ಹೇಳುವ ಮಾತುಗಳಲ್ಲಿ ಇದೊಂದು.

ವಪುರ್ವಿರೂಪಾಕ್ಷಮಲಕ್ಷ್ಯಜನ್ಮತಾ
  ದಿಗಂಬರತ್ವೇನ ನಿವೇದಿತಂ ವಸು ।
ವರೇಷು ಯದ್ ಬಾಲಮೃಗಾಕ್ಷಿ ಮೃಗ್ಯತೇ
  ತದಸ್ತಿ ಕಿಂ ವ್ಯಸ್ತಮಪಿ ತ್ರಿಲೋಚನೇ ॥

'ಶಿವನ ರೂಪವನ್ನು ನೋಡಿದರೋ ದೇಹವು ವಿರೂಪಾಕ್ಷ. ಹಣೆಯಲ್ಲಿ ಒಂದು ಕಣ್ಣು! ಅವನ ಕುಲಗೋತ್ರಗಳು ಗೊತ್ತಿಲ್ಲ. ಯಾರ ಮಗನೋ ಎಲ್ಲಿ ಹುಟ್ಟಿದನೋ ತಿಳಿಯದು! ಸ್ವಯಂ ದಿಗಂಬರ. ಉಡಲು ಬಟ್ಟೆಯಿಲ್ಲ. ಅವನ ಆರ್ಥಿಕಸ್ಥಿತಿ ಹೇಗಿದೆಯೆಂಬುದು ಅದ-ರಿಂದಲೇ ಗೊತ್ತಾಗುತ್ತದೆ. ಆದ್ದರಿಂದ, ಹೇ ಹರಿಣಲೋಚನೆ, ವರನಲ್ಲಿ ಏನೇನಿರಬೇಕೆಂದು ಹಿರಿಯರು ಹುಡುಕುತ್ತಾರೋ ಅದರಲ್ಲಿ ಒಂದಾ-ದರೂ ಆ ವಿರೂಪಾಕ್ಷನಲ್ಲಿದೆಯೆ?'

ವರನಲ್ಲಿ ಈ ಯೋಗ್ಯತೆಯನ್ನು ಹುಡುಕುತ್ತಾರೆಂದು ಒಂದು ಲೋಕೋಕ್ತಿ ಇದೆ.

ಕನ್ಯಾ ವರಯತೇ ರೂಪಂ ಮಾತಾ ವಿತ್ತಂ ಪಿತಾ ಶ್ರುತಮ್ ।
ಬಾಂಧವಾಃ ಕುಲಮಿಚ್ಛಂತಿ ಮೃಷ್ಟಾನ್ನ ಮಿತರೇ ಜನಾಃ ॥

'ಕನ್ಯೆಯು ವರನಲ್ಲಿ ರೂಪವನ್ನು ಬಯಸುತ್ತಾಳೆ. ಕನ್ಯೆಯ ತಾಯಿ ವರನ ಆರ್ಥಿಕ ಪರಿಸ್ಥಿತಿಯನ್ನು ತಂದೆಯು ವಿದ್ಯೆಯನ್ನು ಗಮನಿಸುತ್ತಾರೆ. ನೆಂಟರು ವರನ ಕಡೆಯವರು ಕೀರ್ತಿಶಾಲಿಯಾದ ಕುಲದವರೇ ಎಂಬುದನ್ನು ವಿಚಾರಿಸುತ್ತಾರೆ. ಉಳಿದವರಿಗೆ ಬೇಕಾದದ್ದು ಸುಗ್ರಾಸ-ಭೋಜನ.'

ಅಭಿಜ್ಞಾನಶಾಕುಂತಲದಲ್ಲಿ ದುಷ್ಯಂತರಾಜನು ಮುನಿಕನ್ಯೆಯಾದ ಶಕುಂತಲೆಯಲ್ಲಿ ಅನುರಕ್ತನಾಗುತ್ತಾನೆ. ಆತನು ಶಕುಂತಲೆಯ ಸೌಂದರ್ಯ ವನ್ನು ಸ್ನೇಹಿತನಾದ ವಿದೂಷಕನಿಗೆ ಹೇಳಿದಾಗ ವಿದೂಷಕನ ಪ್ರತಿಕ್ರಿಯೆ ಇದು-

ಯಥಾ ಕಸ್ಯಾಪಿ ಪಿಂಡಖರ್ಜೂರ್ರೈರುದ್ವೇಜಿತಸ್ಯ
ತಿಂತಿಣ್ಯಾಮಭಿಲಾಷೋ ಭವೇತ್ ॥

''ಸಿಹಿಯಾದ ಖರ್ಜೂರದ ಹಣ್ಣುಗಳನ್ನು ತಿಂದು ನಾಲಿಗೆ ಕೆಟ್ಟು ಬೇಸರ ಬಂದವನಿಗೆ ಹುಣಸೇ ಹಣ್ಣನ್ನು ತಿನ್ನಲು ಮನಸ್ಸಾಗುತ್ತದೆ! ಹಾಗೆ ಇದು!''

ಇರಲಿ; ಶ್ರೀಮದ್ರಾಮಾಯಣದಲ್ಲಿ ವಾಲ್ಮೀಕಿಮುನಿಗಳು ನವರಸ-ಗಳಿಗೂ ಯಥಾಯೋಗ್ಯವಾಗಿ ಅವಕಾಶವನ್ನಿತ್ತು ಮನೋಹರವಾಗಿ ಚಿತ್ರಿಸಿದ್ದಾರೆ. ಮಹಾಕಾವ್ಯದಲ್ಲಿರಬೇಕಾದ ಅಷ್ಟಾದಶವರ್ಣನೆಗಳೂ ರಾಮಾಯಣದಲ್ಲುಂಟು. ಸರ್ವಕವಿಗಳಿಗೂ ಆದರ್ಶಭೂತವಾದ ಕಾವ್ಯ ಇದು. 'ಪರಂ ಕವೀನಾಮಾಧಾರಂ'.

ಶ್ರೀರಾಮ-ಸೀತಾದೇವಿಯರ ವಿನೋದ ವಿಹಾರಗಳಲ್ಲಿ ಶೃಂಗಾರ-ವಿದೆ. ರಾವಣನಿಂದ ಸೀತಾಪಹಾರವಾದ ಮೇಲೆ ವಿಪ್ರಲಂಭ ಶೃಂಗಾರದ ವರ್ಣನೆ ವಿಸ್ತಾರವಾಗಿದೆ. ಇತ್ತ ಶ್ರೀರಾಮನಲ್ಲಿ ಅತ್ತ ಸೀತಾದೇವಿಯಲ್ಲಿ-ಹೀಗೆ ಉಭಯಗತವಾದ ವಿಪ್ರಲಂಭದ ವರ್ಣನೆ ಪರಾಕಾಷ್ಠೆಯನ್ನು

ಮುಟ್ಟಿದೆ. ಇಷ್ಟು ವಿಸ್ತಾರವಾಗಿ ಉಭಯಗತ ವಿರಹವರ್ಣನೆ ಸಂಸ್ಕೃತ ಸಾಹಿತ್ಯದಲ್ಲಿ ಇನ್ನೊಂದು ಕಂಡು ಬರುವುದಿಲ್ಲ. ಮಾರೀಚ, ಖರ, ದೂಷಣಾದಿಗಳ ಸಂಹಾರ ಪ್ರಸಂಗಗಳಲ್ಲಿ ವೀರವಿದೆ. ಯುದ್ಧಕಾಂಡ-ದಲ್ಲಿ ರೌದ್ರವೇ ಅಧಿಕ. ತಾರೆ, ಮಂಡೋದರಿಯರ - ವಿಲಾಪಗಳಲ್ಲಿ ಕರುಣರಸವು ಪರಿಪುಷ್ಟವಾಗಿದೆ. ಹನುಮಂತನ ಸೇತುಲಂಘನ, ಸೇತು ಬಂಧನ, ಕುಂಭಕರ್ಣನ ವ್ಯವಹಾರ - ಇತ್ಯಾದಿಗಳಲ್ಲಿ ಅದ್ಭುತರಸವಿದೆ. ಲಂಕಾದಹನ ಪ್ರಸಂಗ - ಮುಂತಾದ ಕಡೆ ಭಯಾನಕವಿದೆ. ಕಬಂಧ-ಮುಂತಾದವರ ವರ್ಣನೆಯಲ್ಲಿ ಬೀಭತ್ಸವಿದೆ. ವಿಶ್ವಾಮಿತ್ರರ ತಪಸ್ಸಿ-ನಲ್ಲಿ, ಅರಣ್ಯಕಾಂಡದಲ್ಲಿ ಅಗಸ್ತ್ಯಾದಿಮುನಿಗಳ ವರ್ಣನೆಗಳಲ್ಲಿ ಶಾಂತ-ರಸವಿದೆ. ಹಾಸ್ಯವು ರಾಮಾಯಣದಲ್ಲಿ ಉಚಿತ ಸ್ಥಳದಲ್ಲಿ ಬಂದಿದೆ. ಹಾಸ್ಯವು ವಿಶೇಷವಾಗಿ ಲೋಕಜ್ಞಾನವನ್ನು ಅಪೇಕ್ಷಿಸುತ್ತದೆ. ಲೋಕ-ಸ್ವಭಾವವನ್ನೂ ಜನರ ಅಂಕುಡೊಂಕುಗಳನ್ನೂ ಚೆನ್ನಾಗಿ ಬಲ್ಲವರು ಮಾತ್ರ ಹಾಸ್ಯವನ್ನು ಮಿಂಚಿಸಬಲ್ಲರು. ವಾಲ್ಮೀಕಿ ಮುನಿಗಳು ಲೋಕವನ್ನು ಚೆನ್ನಾಗಿ ಬಲ್ಲವರು. ಶಾಕುಂತಲ ನಾಟಕದಲ್ಲಿ ಕಣ್ವ ಮುನಿಗಳು 'ವನೌಕಸೋಽಪಿ ಸಂತೋ ಲೌಕಿಕಜ್ಞಾ ವಯಂ' - ನಾವು ಅರಣ್ಯ-ವಾಸಿಗಳಾದರೂ ಲೋಕವ್ಯವಹಾರವನ್ನು ಬಲ್ಲವರು!- ಎಂದ ನುಡಿ ಇವರಿಗೆ ಚೆನ್ನಾಗಿ ಒಪ್ಪುತ್ತದೆ. ಆದ್ದರಿಂದಲೇ ರಾಮಾಯಣದಲ್ಲಿ ಬರುವ ವಿವಿಧ ವರ್ಣನೆಗಳಲ್ಲಿಯೂ ಪಾತ್ರಗಳ ಸಂಭಾಷಣೆಗಳಲ್ಲಿಯೂ ಮಣ್ಣಿನಿಂದೆದ್ದು ಅರಳಿದ ಹೂಗಳ ಸುಗಂಧವಿದೆ. ಅವು ಕಲ್ಪಿತವಾದ ಗಗನಕುಸುಮಗಳಾಗಿಲ್ಲ. ಕಾವ್ಯಮರ್ಮಜ್ಞರಾದ್ದರಿಂದ ವಾಲ್ಮೀಕಿ ಮುನಿ-ಗಳು ಓದುಗರ ಅಭಿರುಚಿಯನ್ನರಿತು ಅಲ್ಲಲ್ಲಿ ಹಾಸ್ಯವನ್ನು ಪೋಣಿಸಿ-ದರು. ಬರಿಯ ಖರ್ಜೂರದ ಹಣ್ಣುಗಳನ್ನು ನೀಡದೆ ನಡುನಡುವೆ ಸ್ವಲ್ಪ ಹುಣಿಸೆಹಣ್ಣನ್ನು ತಿನ್ನಿಸಿ ರುಚಿಯನ್ನು ಹೆಚ್ಚಿಸಿದರು! ರಸಾಯನದಲ್ಲಿ ಏಲಕ್ಕಿ ಪುಡಿಯನ್ನು ಸೇರಿಸಿದಂತೆ ರಾಮಾಯಣದಲ್ಲಿ ಹಾಸ್ಯವನ್ನು ಬೆರೆಸಿದರು.

ರಾಮಾಯಣೇ ವಿವಿಧಭಾವರಸಾಯನೇಽಸ್ಮಿನ್
ಕಾವ್ಯಜ್ಞಲೋಕಹೃದಯಸ್ಪೃಶಿ ಭವ್ಯಕಾವ್ಯೇ ।
ವಾಲ್ಮೀಕಿರಾದಿಕವಿರಾಟ್ ಕವಿತತ್ತ್ವದರ್ಶೀ
ಹಾಸ್ಯಂ ನ್ಯವೇಶಯದನರ್ಘಮಿವೈಲ ಚೂರ್ಣಮ್ ॥

ಕೆಲವು ವರ್ಷಗಳ ಹಿಂದೆ ಬೆಂಗಳೂರು ನರಸಿಂಹ ರಾಜಕಾಲನಿಯಲ್ಲಿರುವ ಗೋಖಲೆ ಸಾರ್ವಜನಿಕಸಂಸ್ಥೆಯಲ್ಲಿ ನಾನು ನೀಡಿದ ಉಪನ್ಯಾಸದ ಸಂಗ್ರಹ ಇದು. ಈ ಪುಸ್ತಕದ ಕೆಲವು ಅಂಶಗಳನ್ನು ಆ ಸಂಸ್ಥೆಯವರು ಮುದ್ರಿಸಿದ್ದರು. ಈ ಪುಸ್ತಕದಲ್ಲಿ ಕೆಲವು ಶ್ರೀರಾಮಸ್ತೋತ್ರಗಳನ್ನು ಸೇರಿಸಿದ್ದೇನೆ. ಶ್ರೀರಾಮ ಕರ್ಣಾಮೃತ ಎಂಬ ಒಂದು ಗ್ರಂಥದಿಂದ ಇವು ಸಂಗ್ರಹೀತವಾಗಿವೆ. ಲಲಿತಪದಬಂಧದಿಂದಲೂ ಭಾವಸೌಂದರ್ಯದಿಂದಲೂ ಆಕರ್ಷಕವಾದ ಈ ಪದ್ಯಗಳು ಪಾರಾಯಣಕ್ಕೆ ಕಂಠಪಾಠಕ್ಕೆ ಯೋಗ್ಯವಾದವು. ವಾಚನಮಾತ್ರದಿಂದಲೇ ಜನಹೃದಯವನ್ನು ಸೆಳೆಯುವ ಶಕ್ತಿ ಈ ಪದ್ಯಗಳಿಗುಂಟು. ಕಡೆಯಲ್ಲಿ ನಾನೇ ರಚಿಸಿದ ಶ್ರೀರಾಮಚಂದ್ರಸುಪ್ರಭಾತವಿದೆ. ಬೇರೆ ಬೇರೆಯಾಗಿದ್ದರೆ ಇವು ತುಂಬ ಚಿಕ್ಕದಾಗುತ್ತವೆಯೆಂದು ಒಟ್ಟಿಗೆ ಒಂದು ಪುಸ್ತಕದಲ್ಲಿಯೇ ಇವನ್ನು ಅಳವಡಿಸಲಾಗಿದೆ.

ನನ್ನ ಮಾನ್ಯಮಿತ್ರರೂ 'ಉದಯ ಪ್ರಕಾಶನ' ಎಂಬ ಸಂಸ್ಥೆಯನ್ನು ನಡೆಸುತ್ತಿರುವವರೂ ಆದ ಶ್ರೀ ಮ.ಸು. ಶ್ರೀನಿವಾಸರಾಯರು ಸಂತೋಷದಿಂದ ಮುಂದೆ ಬಂದು ಇದನ್ನು ಪ್ರಕಟಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಬೆಂಗಳೂರು
ವಿಜಯದಶಮೀ
ತಾ. ೨೨-೧೦-೧೯೯೬

ಎನ್. ರಂಗನಾಥಶರ್ಮಾ

ಪ್ರಕಾಶಕರ ನುಡಿ

ವಿದ್ವಾನ್ ಶ್ರೀ ಎನ್. ರಂಗನಾಥಶರ್ಮರು ನಮ್ಮ ನಾಡಿನ ಹಿರಿಯ ವಿದ್ವಾಂಸರಲ್ಲಿ ಅನ್ಯತಮರು. ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದಲ್ಲಿ ಆಳವಾದ ಪರಿಣತಿಯನ್ನು ಹೊಂದಿದವರು. ಸಮಗ್ರವಾದ ವಾಲ್ಮೀಕಿ ರಾಮಾಯಣವನ್ನು ಹಾಗೂ ಸ್ವಾರಸ್ಯವನ್ನು ಅನುಭವಕ್ಕೆ ತಂದು-ಕೊಂಡವರು. ಸಹೃದಯರ ಗೋಷ್ಠಿಯಲ್ಲಿ ರಾಮಾಯಣದ ವಿವಿಧ ಪ್ರಸಂಗಗಳನ್ನು ಕುರಿತು ಹಲವಾರು ಪ್ರವಚನಗಳನ್ನು ಮಾಡಿರುವರು. ಅಂತಹ ಒಂದು ಪ್ರಸಂಗದಲ್ಲಿ ಪ್ರವಚನಕ್ಕಾಗಿ ಆರಿಸಿಕೊಂಡದ್ದು 'ವಾಲ್ಮೀಕಿಗಳ ಹಾಸ್ಯಪ್ರವೃತ್ತಿ' ಎಂಬ ವಿಷಯ. ಆ ಪ್ರವಚನದ ಪರಿಷ್ಕಾರ ರೂಪವೇ ಈ ಗ್ರಂಥ. ಈ ಗ್ರಂಥವನ್ನು ನಮ್ಮ ಪ್ರಕಾಶನದ ಮಾಲೆಯಾಗಿ ಪ್ರಕಟಿಸಲು ಸಹೃದಯತೆಯಿಂದ ಅನುಮತಿಕೊಟ್ಟ ಶ್ರೀಯುತರಿಗೆ ನಮ್ಮ ಕೃತಜ್ಞತೆಗಳು.

ಆದಿಕವಿ ವಾಲ್ಮೀಕಿ ಮುನಿಗಳ ಚಿತ್ರವನ್ನು ಈ ಪುಸ್ತಕದಲ್ಲಿ ಪ್ರಕಟಿಸುವುದಕ್ಕೆ ಅನುಮತಿನೀಡಿದ ಗೋಖಲೆ ಸಾರ್ವಜನಿಕ ವಿಚಾರ-ಸಂಸ್ಥೆಯ ಆಡಳಿತ ವರ್ಗಕ್ಕೂ, ಹಾಗೂ ಶ್ರೀಗ್ರಂಥವನ್ನು ಅಂದವಾಗಿ ಮುದ್ರಣಮಾಡಿಕೊಟ್ಟ ವಾಗರ್ಥ ಪ್ರಿಂಟೋನಿಕ್ಸ್ ಅವರಿಗೂ ಕೃತಜ್ಞತೆಗಳು.

ಮ.ಸು. ಶ್ರೀನಿವಾಸರಾಯ

ವಾಲ್ಮೀಕಿ ಮುನಿಗಳ ಹಾಸ್ಯಪ್ರವೃತ್ತಿ

ಹಾಸ್ಯವು ಶೃಂಗಾರಾದಿ ನವರಸಗಳಲ್ಲೊಂದೆಂದು ಆಲಂಕಾರಿಕರೆಲ್ಲರೂ ಒಪ್ಪಿದ್ದಾರೆ. ಹಾಸ್ಯವು ಒಂದು ಚಿತ್ತವೃತ್ತಿ. ಕೆಲವರಲ್ಲಿ ಅದು ವಿಶೇಷವಾಗಿ ಅಭಿವ್ಯಕ್ತವಾಗುತ್ತದೆ. ಕೆಲವರಲ್ಲಿ ಗೂಢವಾಗಿದ್ದು ಯಾವುದೋ ವಿಶೇಷ ಸಮಯದಲ್ಲಿ ಅಭಿವ್ಯಕ್ತವಾಗಬಹುದು.

ಹಾಸ್ಯವು ಮನುಷ್ಯನ ಗಂಭೀರವೃತ್ತಿಗೆ-ದೊಡ್ಡತನಕ್ಕೆ ಬಾಧಕವೆಂದು ಕೆಲವರ ಅಭಿಪ್ರಾಯ. ಅದು ನಿರಾಧಾರವೆಂಬುದು ಶ್ರೀ ರಾಮಕೃಷ್ಣ ಪರಮಹಂಸರು, ಮಹಾತ್ಮಾ ಗಾಂಧಿಯವರು- ಮೊದಲಾದವರಲ್ಲಿ ಹಾಸ್ಯ ಪ್ರವೃತ್ತಿ ಪ್ರಬಲವಾಗಿತ್ತೆಂಬ ಸಂಗತಿಯಿಂದ ಸ್ಪಷ್ಟಪಡುತ್ತದೆ. ಹಾಸ್ಯವು ಹೇಯವಾಗಿದ್ದಲ್ಲಿ, ಅದೊಂದು ಕಾವ್ಯ ಭೂಷಣವೆಂದು ಆಲಂಕಾರಿಕರು ಅಂಗೀಕರಿಸುತ್ತಿರಲಿಲ್ಲ.

ಶ್ರೀಮದ್ರಾಮಾಯಣವಾದರೋ ಒಂದು ಮಹಾಕಾವ್ಯ . ಒಬ್ಬ ಮಹಾ ಪುರುಷನ, ಒಬ್ಬ ಮಹಾಸತಿಯ ದಿವ್ಯಚರಿತೆ. ಇದರಲ್ಲಿ ವಾಲ್ಮೀಕಿ ಮುನಿಗಳ ಹಾಸ್ಯ ಪ್ರವೃತ್ತಿಗೆ ಅವಕಾಶವುಂಟೆ? ಏಕಿರಬಾರದು? ಕಾವ್ಯದ ಗಾಂಭೀರ್ಯಕ್ಕೆ ಹಾಸ್ಯವು ಅಡ್ಡಿಯಲ್ಲ. ವಾಲ್ಮೀಕಿಗಳೇ ಹೀಗೆ ಹೇಳಿದ್ದಾರೆ:

ರಸೈಃ ಶೃಂಗಾರ ಕರುಣ ಹಾಸ್ಯ ರೌದ್ರ ಭಯಾನಕೈಃ ।
ವೀರಾದಿಭಿಶ್ಚ ಸಂಯುಕ್ತಂ ಕಾವ್ಯಮೇತದಗಾಯತಾಮ್ ॥

- ಬಾಲ, ೪:೯

ಇತರ ಭಾವಗಳಿಗೂ ಹಾಸ್ಯಕ್ಕೂ ಇರುವ ಒಂದು ಮುಖ್ಯ ಭೇದವನ್ನು ನಾವು ಗಮನಿಸಬೇಕು. ಕರುಣ ರೌದ್ರಾದಿಗಳು ಕಾವ್ಯನಿಬದ್ಧವಾದಾಗ ಆಹ್ಲಾದವನ್ನು ಕೊಡಬಲ್ಲವಾದರೂ ಲೋಕದಲ್ಲಿ ಅವುಗಳಿಗೆ ಆಹ್ಲಾದ ಸಂಸ್ಪರ್ಶವಿಲ್ಲ. ಶೃಂಗಾರವು ಆಯಾ ವ್ಯಕ್ತಿಗಳಿಗೆ ಸಂತೋಷಕರವಾದೀತು.

ತಟಸ್ಥನಿಗೆ ಅದರಿಂದ ಸಂತೋಷವಾಗದೆ ಜುಗುಪ್ಸೆಯೇ ಆಗಬಹುದು. ಹಾಸ್ಯಕ್ಕೆ ಇಂಥ ಪರಿಮಿತಿಗಳಿಲ್ಲ. ಅದು ಆಬಾಲವೃದ್ಧರಿಗೂ ಪಂಡಿತ ಪಾಮರರಿಗೂ ವಿರಕ್ತರಿಗೂ ಆಸ್ವಾದ್ಯವಾಗುತ್ತದೆ.

ಶ್ರೀಮದ್ರಾಮಾಯಣದಲ್ಲಿ ಕರುಣರಸವೇ ಪ್ರಧಾನವೆಂದು ತೋರು-ತ್ತದೆ. ಇತರ ರಸಭಾವಗಳಿಗೂ ಪುಷ್ಟಿಯುಂಟು. ಉದಾತ್ತ ಪೂಜ್ಯ ಭಾವನೆಗಳನ್ನು ಉಲ್ಲಾಸಗೊಳಿಸುವ ಇಂಥ ಗ್ರಂಥದಲ್ಲಿ ಹಾಸ್ಯವು ಪರಿಮಿತ ವಾಗಿಯೇ ಇರಬೇಕಷ್ಟೆ. ಆದ್ದರಿಂದ ವಾಲ್ಮೀಕಿಗಳು ಹಾಸ್ಯವನ್ನು ಹಿತಮಿತವಾಗಿ ಬಳಸಿದ್ದಾರೆ. ರಸೈಕ ದೃಷ್ಟಿಯುಳ್ಳ ವಾಚಕರು ಅಂಥ ಸಂದರ್ಭಗಳನ್ನು ಸುಲಭವಾಗಿ ಗುರುತಿಸಬಹುದು. ಅವುಗಳಲ್ಲಿ ಮುಖ್ಯ-ವಾದ ಕೆಲವನ್ನು ಸ್ಮರಿಸುವುದು ಈ ಪ್ರಬಂಧದ ಉದ್ದೇಶ.

ಋಷಿಗಳಿತ್ತ ಪಾರಿತೋಷಿಕ

ಲವ ಕುಶರಿಗೆ ರಾಮಾಯಣವು ವಾಚೋವಿಧೇಯವಾಗಿತ್ತು. ಒಂದು ಸಲ ಋಷಿಗಳ ಸಭೆಯಲ್ಲಿ ಅವರು ಮನೋಜ್ಞವಾಗಿ ರಾಮಾಯಣವನ್ನು ಹಾಡಿದರು. ವೇದಾಭ್ಯಾಸಜಡರಾದ ಋಷಿಗಳೂ ಆ ಗೀತಮಾಧುರ್ಯಕ್ಕೆ ಮಾರುಹೋದರು. ಹಾಡಿದ ಬಾಲಕರಿಗೆ ಏನಾದರೂ ಪಾರಿತೋಷಿಕ-ವನ್ನು ಕೊಡಬಯಸಿದರು. ಆದರೆ ಋಷಿಗಳ ಹತ್ತಿರ ಏನಿದ್ದೀತು? ಒಬ್ಬ ಮುನಿಗಳು ಗಡಿಗೆಯೊಂದನ್ನು ಲವಕುಶರಿಗೆ ಬಹುಮಾನವಾಗಿ ಕೊಟ್ಟರು. ಒಬ್ಬರು ವಲ್ಕಲವನ್ನು ಕೊಟ್ಟರು. ಇನ್ನೊಬ್ಬರು ಮುಂಜೀದಾರವನ್ನು ಕೊಟ್ಟರು. ಒಬ್ಬರು ಕಟ್ಟಿಗೆ ಹೊರೆಯನ್ನು ಕಟ್ಟುವ ಹಗ್ಗವನ್ನು ಕೊಟ್ಟರು. ಮತ್ತೊಬ್ಬರು ಕೌಪೀನವನ್ನು ಕೊಟ್ಟರಂತೆ!

ಬೃಸೀಮನ್ಯಸ್ತದಾ ಪ್ರಾದಾತ್ ಕೌಪೀನಮಪರೋ ಮುನಿಃ ।

- ಬಾಲ, ೪:೨೩

ಇಲ್ಲಿ ಹಾಸ್ಯದ ಹೊನಲಿದ್ದರೂ ವಸ್ತುವಿನ ಉದಾತ್ತಗುಣಕ್ಕೆ ಬಾಧೆಯಿಲ್ಲವೆಂಬುದು ಮುಖ್ಯಾಂಶ. ಋಷಿಗಳ ಭಾಗ್ಯ ಕೌಪೀನ ತಾನೆ! ಅದನ್ನು ಅವರು ಪ್ರೀತಿಯಿಂದ ಕೊಟ್ಟರು. ಅವರ ಮೆಚ್ಚಿಕೆಯ ಉಚ್ಚತೆಯನ್ನು ನಾವು ಗಮನಿಸಬೇಕು.

ರೋಮಪಾದನ ಆದೇಶದಂತೆ ಋಷ್ಯಶೃಂಗನನ್ನು ಕರೆತರಲು ಮಂತ್ರಿಗಳು ವೇಶ್ಯೆಯರನ್ನು ಕಳಿಸಿದರು. ಆ ವೇಶ್ಯೆಯರು ಅರಣ್ಯಕ್ಕೆ ಹೋಗಿ ಋಷ್ಯಶೃಂಗಾಶ್ರಮದ ಸಮೀಪದಲ್ಲಿ ಇಳಿದುಕೊಂಡು, ಆತನನ್ನು ಕಾಣುವುದಕ್ಕಾಗಿ ಹವಣಿಸುತ್ತಿದ್ದರು. ಋಷ್ಯಶೃಂಗನಾದರೋ ತಂದೆಯ ಲಾಲನೆಯಲ್ಲಿ ನಿತ್ಯಸಂತುಷ್ಟನಾಗಿ ಸದಾ ಆಶ್ರಮದಲ್ಲಿಯೇ ಇದ್ದವನು. ಹುಟ್ಟಿದಾಗಿನಿಂದ ಸ್ತ್ರೀಯರನ್ನು ನೋಡಿದವನೇ ಅಲ್ಲ. ಆಶ್ರಮದ ಹೊರಗಿರುವ ಕುದುರೆ, ಕೋಳಿಗಳನ್ನೂ ಸಹ ನೋಡಿದವನಲ್ಲ. ಹಣ್ಣು ಹಂಪಲುಗಳನ್ನು ತಿಂದು ತಪಸ್ಸು ಮಾಡಿಕೊಂಡಿದ್ದವನು. ಅವನ ತಂದೆ ವಿಭಾಂಡಕ ಮುನಿಯು ಆಶ್ರಮದಿಂದ ಹೊರಗೆ ಹೋದ ಸಂದರ್ಭವನ್ನು ನೋಡಿಕೊಂಡು, ಈ ವೇಶ್ಯೆಯರು ವಿಚಿತ್ರವಾದ ಉಡಿಗೆ ತೊಡಿಗೆಗಳನ್ನು ಧರಿಸಿ ಇಂಪಾಗಿ ಹಾಡುತ್ತಾ ಆಶ್ರಮಕ್ಕೆ ಬಂದರು. ಋಷ್ಯಶೃಂಗನು ಸ್ತ್ರೀಯರ ಆ ಸುಂದರರೂಪವನ್ನೇ ನೋಡಿರಲಿಲ್ಲ. ಅವರು ಯಾರೋ ತಪಸ್ವಿಗಳಾದ ಅತಿಥಿಗಳೆಂದೇ ಆ ಮುಗ್ಧಮುನಿಕುಮಾರನ ಕಲ್ಪನೆ. ಋಷ್ಯಶೃಂಗನು ಆ ವೇಶ್ಯೆಯರನ್ನು ಹೀಗೆ ಸತ್ಕರಿಸಿದನಂತೆ:

''ಪೂಜ್ಯರೇ, ಇದನ್ನು ಸ್ವೀಕರಿಸಿರಿ. ಇದು ಅರ್ಘ್ಯ, ಇದು ಪಾದ್ಯ, ಇದು ಮೂಲ, ಇದು ಫಲ!'' ಎಂದು ಹೇಳುತ್ತಾ ಅವೆಲ್ಲವನ್ನೂ ಕೊಟ್ಟು ಉಪಚರಿಸಿದನು. ಆ ತರುಣಿಯರು ಅವುಗಳನ್ನು ಸ್ವೀಕರಿಸಿದರು. ಋಷಿಪುತ್ರನು ತಮ್ಮ ಬಲೆಗೆ ಬಿದ್ದನೆಂದು ಅವರಿಗೆ ಸಂತೋಷವಾಯಿತು. ಅವರು ''ಕುಮಾರ, ನಾವು ತಂದಿರುವ ಈ ಹಣ್ಣುಗಳನ್ನು ತೆಗೆದುಕೋ! ಇವುಗಳನ್ನು ತಿಂದು ನೋಡು!'' ಎಂದು ಹೇಳಿ ತಾವು ತಂದಿದ್ದ ಲಾಡು

ಚಿರೋಟಿ ಮುಂತಾದ ಸಿಹಿ ತಿಂಡಿಗಳನ್ನು ಕೊಟ್ಟರು. ಋಷ್ಯಶೃಂಗನು ಆ ತಿಂಡಿಗಳನ್ನು ಕಂಡವನೇ ಅಲ್ಲ. ತಿಂದು ನೋಡಿದಾಗ ಬಹು ರುಚಿಕರವಾಗಿತ್ತು! ಅವೆಲ್ಲವೂ ಒಂದು ಬಗೆಯ ಹಣ್ಣುಗಳೆಂದೇ ಅವನು ತಿಳಿದುಕೊಂಡನಂತೆ!

ಮೋದಕಾನ್ ಪ್ರದದುಸ್ತಸ್ಮೈ ಭಕ್ಷ್ಯಾಂಶ್ಚ ವಿವಿಧಾನ್ ಶುಭಾನ್ ।
ತಾನಿ ಚಾಸ್ವಾದ್ಯ ತೇಜಸ್ವೀ ಫಲಾನೀತಿ ಸ್ಮ ಮನ್ಯತೇ ॥

- ಬಾಲ, ೧೦:೨೧

ಬ್ರಾಹ್ಮಣರ ಲೋಭ

ಬ್ರಹ್ಮನು ಬ್ರಾಹ್ಮಣರನ್ನು ಸೃಷ್ಟಿಸಿದಾಗಲೇ ಬಡತನವನ್ನು ಅವರಿಗೆ ಉಡುಗೊರೆಯಾಗಿ ಕೊಟ್ಟನೆಂದು ತೋರುತ್ತದೆ! 'ಒಂದೂರಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದನು' ಎಂಬ ಕಥೆಗಳನ್ನು ನಾವು ಬಹಳ ಕೇಳಿದ್ದೇವೆ. 'ಬಡವ' ಎಂಬುದು ವಾಡವ ಶಬ್ದದ ತದ್ಭವವಿರಬೇಕು. ವಾಡವ ಎಂದರೆ ಸಂಸ್ಕೃತದಲ್ಲಿ ಬ್ರಾಹ್ಮಣ. ಈ ವಾಡವರು ಸಾಮಾನ್ಯವಾಗಿ ಪುರೋಹಿತರಷ್ಟೆ. ಪುರೋಹಿತರದು ಆಸೆಯ ಸ್ವಭಾವ. ಆಸೆ ಎಲ್ಲ ಮಾನವರಿಗೂ ಉಂಟು. ಆದರೆ ಮುಗ್ಧ ಸ್ವಭಾವದ ವಾಡವರು ತಮ್ಮ ಲೋಭವನ್ನು ಬೇಗನೆ ತೋರಿಸಿಕೊಂಡು ಬಿಡುತ್ತಾರೆ! ಲೌಕಿಕ ಜಾಣರು ತಮ್ಮ ಲೋಭವನ್ನು ಜಾಣ್ಮೆಯಿಂದ ಮುಚ್ಚಿಕೊಂಡು ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ ಎಂಬುದಿಷ್ಟೇ ಭೇದ. ವಾಡವರ ಈ ಲೋಭ ರಾಮಾಯಣ ಕಾಲದಿಂದಲೂ ಇದೆ.

ದಶರಥನು ಅಶ್ವಮೇಧ ಯಾಗವನ್ನು ನಡೆಸಿದನಷ್ಟೆ. ಯಾಗದಲ್ಲಿ ಯಥೇಷ್ಟವಾಗಿ ಅನ್ನಸಂತರ್ಪಣೆಯು ನಡೆಯಿತು. ಅನ್ನಕೂಟಗಳು ಪರ್ವತೋಪಮವಾಗಿದ್ದವಂತೆ. ರಸಗವಳವು ಸಿಕ್ಕಿದಾಗ ಯಾರು ಬಿಡುತ್ತಾರೆ! ಹೆಂಗಸರು ಹುಡುಗರು ಮಾತ್ರವೇ ಅಲ್ಲ, ಮುದುಕರೂ ರೋಗಿಗಳೂ ಕಂಠಪೂರ್ತಿ ತಿಂದರು. ಆದರೂ ತೃಪ್ತಿಯಾಗಲಿಲ್ಲ!

ವೃದ್ಧಾಶ್ಚ ವ್ಯಾಧಿತಾಶ್ಚೈವ ಸ್ತ್ರಿಯೋ ಬಾಲಾಸ್ತಥೈವ ಚ ।
ಅನಿಶಂ ಭುಂಜಮಾನಾನಾಂ ನ ತೃಪ್ತಿರುಪಜಾಯತೇ ॥

ಅನ್ನಕೂಟಾಶ್ಚ ಬಹವೋ ದೃಶ್ಯಂತೇ ಪರ್ವತೋಪಮಾಃ ॥

- ಬಾಲ, ೧೪:೧೩, ೧೫

ವಿವಿಧವಸ್ತ್ರಗಳನ್ನೂ, ಕೋಟಿ ಕೋಟಿ ಸುವರ್ಣ ನಾಣ್ಯಗಳನ್ನೂ ಬ್ರಾಹ್ಮಣರಿಗೆ ರಾಜನು ದಾನಮಾಡಿದನು. ಆದರೂ ಒಬ್ಬ ಬಡ ಬ್ರಾಹ್ಮಣನು ಸಮಯ ನೋಡಿ ದಶರಥನನ್ನು ಕಂಡು ಅವನ ಕೈಯಲ್ಲಿದ್ದ ಚಿನ್ನದ ಕಡಗವನ್ನು ಬೇಡಿದನಂತೆ! ರಾಜನು ಸಂತೋಷದಿಂದ ಅದನ್ನು ಕೊಟ್ಟ.

ತ್ರಿಜಟ ವೃತ್ತಾಂತ

ಇಂತಹುದೇ ಇನ್ನೊಂದು ಸಂದರ್ಭ. ಶ್ರೀರಾಮನು ಅರಣ್ಯಕ್ಕೆ ಹೊರಡಲು ಸಿದ್ಧನಾಗುತ್ತಿದ್ದಾನೆ. ತನ್ನ ಖಾಸಗಿಯಾದ ಧನ ಕನಕಾದಿಗಳನ್ನು ದಾನ ಮಾಡುತ್ತಿದ್ದಾನೆ. ಈ ಸುದ್ದಿ ನಗರದಲ್ಲಿ ಹರಡಿತು. ತ್ರಿಜಟನೆಂಬ ಒಬ್ಬ ಬಡ ಬ್ರಾಹ್ಮಣನಿದ್ದ. ಅವನಿಗಿಂತ ಅವನ ಹೆಂಡತಿಗೆ ಈ ಸುದ್ದಿ ಮೊದಲು ಮುಟ್ಟಿತು! ಅವಳು ಗಂಡನನ್ನು ನೋಡಿ ''ಈ ಉಂಛವೃತ್ತಿ ಎಷ್ಟು ದಿನ? ಈ ಮಕ್ಕಳನ್ನು ಎಷ್ಟು ದಿನ ಹೀಗೆ ಸಾಕಲಾದೀತು? ಈ ಗುದ್ದಲಿ, ಸಲಿಕೆಗಳನ್ನು ಅತ್ತ ಎಸೆದು ನನ್ನ ಮಾತನ್ನು ಕೇಳು! ರಾಮನು ಬೇಕಾದಷ್ಟು ದಾನ ಮಾಡುತ್ತಿದ್ದಾನಂತೆ. ಅವನು ಧರ್ಮಜ್ಞ, ಅವನನ್ನು ಹೋಗಿ ನೋಡು. ಏನನ್ನಾದರೂ ಕೊಟ್ಟಾನು'' ಎಂದು ಹೇಳಿದಳು. ಮಡದಿಯ ಮಾತನ್ನು ಮೀರುವುದು ಹೇಗೆ? ತ್ರಿಜಟನು ಹರಕುವಲ್ಲಿಯನ್ನು ಹೊದೆದು ನೆಟ್ಟಗೆ ಅರಮನೆಗೆ ಹೋದನು! ಯಾರೂ ಅವನನ್ನು ತಡೆಯಲಿಲ್ಲ. ಅವನು ನೇರವಾಗಿ ಶ್ರೀರಾಮನ ಬಳಿಗೆ ಹೋಗಿ ''ರಾಜಪುತ್ರ, ನಾನು ದರಿದ್ರ ಬ್ರಾಹ್ಮಣ; ಬಹಳ ಮಕ್ಕಳಿದ್ದಾರೆ.

ಉಂಛವೃತ್ತಿಯಿಂದ ಜೀವಿಸುತ್ತಿದ್ದೇನೆ. ನನ್ನನ್ನು ಕರುಣೆಯಿಂದ ನೋಡು!'' ಎಂದನು.

ಶ್ರೀರಾಮನು ಪರಿಹಾಸಪ್ರಿಯ. ತಾನು ಅಂತಹ ವ್ಯಾಕುಲ ಸ್ಥಿತಿಯಲ್ಲಿದ್ದರೂ ತ್ರಿಜಟನ ದಿಟ್ಟತನವನ್ನು ನೋಡಿ ಸ್ವಲ್ಪ ವಿನೋದ ಮಾಡಬೇಕೆನ್ನಿಸಿತು. ''ವಿಪ್ರೋತ್ತಮ, ಅದೋ, ಅಲ್ಲಿ ಸಾವಿರಾರು ಹಸುಗಳು ನಿಂತಿವೆ. ನಿನ್ನ ದೊಣ್ಣೆಯನ್ನು ಆ ದಿಕ್ಕಿಗೆ ಎಸೆ. ಅದು ಎಷ್ಟು ದೂರ ಹೋಗಿ ಬೀಳುವುದೋ ಅಲ್ಲಿಯವರೆಗಿರುವ ಹಸುಗಳೆಲ್ಲವೂ ನಿನ್ನವು!'' ಎಂದನು. ಮುಂದೆ ಕೇಳಬೇಕೆ? ಆ ಬ್ರಾಹ್ಮಣನು ಹಗಕು ವಲ್ಲಿಯನ್ನು ಸೊಂಟಕ್ಕೆ ಬಿಗಿದು ಕಟ್ಟಿ ದೊಣ್ಣೆಯನ್ನು ಗಿರ್ರನೆ ತಿರುಗಿಸಿ, ತನ್ನ ಸಕಲ ಬಲವನ್ನೂ ಉಪಯೋಗಿಸಿ ಎಸೆದನು. ದೊಣ್ಣೆಯು ಸರಯೂನದಿಯನ್ನು ದಾಟಿ ಸಾವಿರಾರು ಗೋವುಗಳ ಆಚೆಗೆ ಹೋಗಿಬಿದ್ದಿತು!

ಸ ಶಾಟೀಂ ತ್ವರಿತಃ ಕಟ್ಯಾಂ ಸಂಭ್ರಾಂತಃ ಪರಿವೇಷ್ಟ್ಯ ತಾಮ್ ।
ಆವಿಧ್ಯ ದಂಡಂ ಚಿಕ್ಷೇಪ ಸರ್ವಪ್ರಾಣೇನ ವೇಗಿತಃ ॥
ಸ ತೀರ್ತ್ವಾ ಸರಯೂಪಾರಂ ದಂಡಸ್ತಸ್ಯ ಕರಾಚ್ಚ್ಯುತಃ ।
ಗೋವ್ರಜೇ ಬಹುಸಾಹಸ್ರೇ ಪಪಾತೋಕ್ಷಾಣಸಂನಿಧೌ ॥

- ಅಯೋಧ್ಯಾ. ೩೩:೩೭-೩೯

ಶ್ರೀರಾಮನು ಆ ಗೋವುಗಳೆಲ್ಲವನ್ನೂ ತ್ರಿಜಟನ ಮನೆಗೆ ಕಳಿಸಿ, ಆ ಬ್ರಾಹ್ಮಣನನ್ನು ನೋಡಿ ''ಪೂಜ್ಯರೇ, ಕೋಪಿಸಬಾರದು. ವಿನೋದಕ್ಕಾಗಿ ಹೀಗೆ ಹೇಳಿದೆನು-

ಮನ್ಯುರ್ನ ಖಲು ಕರ್ತವ್ಯಃ ಪರಿಹಾಸೋ ಹ್ಯಯಂ ಮಮ ॥''

ಎಂದು ಕ್ಷಮೆಯನ್ನು ಬೇಡಿದನು.

ಹೊಟ್ಟೆಬಾಕ ವಟುಗಳು.

ಕುಲಪತಿಗಳಾದ ವಾಲ್ಮೀಕಿ ಮುನಿಗಳಿಗೆ ವೇದ ವಿದ್ಯಾರ್ಥಿಗಳ ಸ್ವಭಾವ ಚೆನ್ನಾಗಿ ಗೊತ್ತಿರಬೇಕು. ಸದಾ ವೇದವನ್ನು ಉರು ಹಾಕುವುದು, ಹೊಟ್ಟೆ-ಬಾಕತನ, ತಮ್ಮ ಕೆಲಸವನ್ನು ಮಾಡಿಕೊಳ್ಳುವುದರಲ್ಲಿ ಸೋಮಾರಿತನ - ಇವನ್ನು ಅವರು ಬಲ್ಲರು. ಪರಿಹಾಸಪ್ರಿಯನಾದ ಶ್ರೀರಾಮನ ಬಾಯಿಂದ ಅದನ್ನು ಹೇಳಿಸಿದ್ದಾರೆ. ಅಯೋಧ್ಯೆಯಲ್ಲಿ ಕಠಕಾಲಾಪಶಾಖೆಗಳನ್ನು ಅಧ್ಯಯನ ಮಾಡುತ್ತಿದ್ದ ಬಹುಮಂದಿ ವಟುಗಳಿದ್ದರು. ಅವರು "ದಂಡ-ಮಾಣವ"ರಂತೆ; ದಂಡಧಾರಿಗಳಾದ ಬ್ರಹ್ಮಚಾರಿಗಳು, ಸದಾ ವೇದಾ-ಧ್ಯಯನ ಮಾಡುತ್ತಾ ಹೊಟ್ಟೆಬಾಕರಾಗಿದ್ದರು. "ಅಲಸಾಃ ಸ್ವಾದುಕಾ-ಮಾಶ್ಚ" ಮೃಷ್ಟಾನ್ನ ಭೋಜನವೆಂದರೆ ಅವರಿಗೆ ಬಹಳ ಪ್ರೀತಿ. ಒಂದು ಬಗೆಯಲ್ಲಿ ಸೋಮಾರಿಗಳು. ಅವರಿಗೆ ದವಸಗಳಿಂದ ಪೂರ್ಣವಾದ ಎಂಬತ್ತು ವಾಹನಗಳನ್ನೂ, ಸಾವಿರಗಾಡಿ ಭತ್ತ, ಇನ್ನೂರು ಗಾಡಿ ಕಡಲೆ ಮೊದಲಾದ ಧಾನ್ಯಗಳನ್ನೂ, ಹಾಲು ಮೊಸರಿಗಾಗಿ ಸಾವಿರ ಹಸುಗಳನ್ನೂ ಕೊಡಿಸಬೇಕೆಂದು ಶ್ರೀರಾಮನು ಲಕ್ಷ್ಮಣನಿಗೆ ತಿಳಿಸುತ್ತಾನೆ.

ಯೇ ಚೇಮೇ ಕಠಕಾಲಾಪಾಃ
ಬಹವೋ ದಂಡಮಾಣವಾಃ ।
ನಿತ್ಯಸ್ವಾಧ್ಯಾಯಶೀಲತ್ವಾತ್
ನಾನ್ಯತ್ ಕುರ್ವಂತಿ ಕಿಂಚನ ॥

ಅಲಸಾಃ ಸ್ವಾದುಕಾಮಾಶ್ಚ...॥ -ಅಯೋಧ್ಯಾ, ೩೨:೧೮, ೧೯

ದಶರಥನ ಹಾಸ್ಯಪ್ರವಣತೆ

ದಶರಥಮಹಾರಾಜನು ಶ್ರೀರಾಮನಿಗೆ ಯುವರಾಜಪಟ್ಟಾಭಿಷೇಕ ವನ್ನು ಮಾಡುವುದಾಗಿ ರಾಜಸಭೆಯಲ್ಲಿ ಪ್ರಕಟಿಸಿದನಷ್ಟೆ. ಆಗ ಸಕಲ

ಸಭಾಸದರೂ ಹರ್ಷದಿಂದ ಆ ಸುದ್ದಿಯನ್ನು ಸ್ವಾಗತಿಸಿದರು. ಶ್ರೀರಾಮನು ಯುವರಾಜನಾಗುವುದು ನಮ್ಮೆಲ್ಲರಿಗೂ ಆನಂದದಾಯಕವೆಂದು ಹೇಳಿದರು. ಅವರ ಸಂತೋಷಕ್ಕೆ ಕಾರಣವೇನೆಂಬುದು ದಶರಥನಿಗೆ ತಿಳಿದೇ ಇತ್ತು. ಆದರೂ ಏನೂ ಅರಿಯದವನಂತೆ ''ಎಲೈ ಸಭಾಸದರೆ, ರಾಮನು ರಾಜನಾಗಲೆಂದು ನಾನು ಹೇಳಿದೊಡನೆ ಎಲ್ಲರೂ ಸಂತೋಷ ದಿಂದ ಒಪ್ಪಿಕೊಳ್ಳುವಿರಲ್ಲ, ಇದೇನು? ನಾನು ಧರ್ಮದಿಂದ ರಾಜ್ಯವನ್ನು ಪಾಲಿಸುತ್ತಿಲ್ಲವೇ?'' ಎಂದು ಕೇಳುತ್ತಾನೆ:

ಕಥಂ ನು ಮಯಿ ಧರ್ಮೇಣ ಪೃಥಿವೀಮನುಶಾಸತಿ ।
ಭವಂತೋ ದ್ರಷ್ಟುಮಿಚ್ಛಂತಿ ಯುವರಾಜಂ ಮಮಾತ್ಮಜಮ್ ॥

- ಅಯೋಧ್ಯಾ ೨:೨೪

ತನ್ನ ಮಗನ ಗುಣಗಳನ್ನು ಪ್ರಜೆಗಳು ಮತ್ತಷ್ಟು ಹೊಗಳಲಿ, ಕೇಳಿ ಆನಂದಿಸೋಣ ಎಂದು ಆ ವೃದ್ಧನ ಚಾಪಲ್ಯ!

ಶ್ರೀರಾಮನ ಪರಿಹಾಸ ಪ್ರಿಯತೆ

ಶ್ರೀರಾಮನು ಧರ್ಮದ ಮೂರ್ತಸ್ವರೂಪನಾಗಿದ್ದರೂ ಸತ್ಯಪರಾ-ಕ್ರಮನಾಗಿದ್ದರೂ ವಿನೋದಪ್ರಿಯನಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ. ಧರ್ಮಾಚರಣೆಗೂ ವಿನೋದಪ್ರಿಯತೆಗೂ ಯಾವ ವಿರೋಧವೂ ಇಲ್ಲ. ಪ್ರಕೃತಿಸೌಂದರ್ಯವನ್ನು ಮೆಚ್ಚುವ, ಮನೋಜ್ಞತೆಗೆ ಮರುಳಾಗುವ ಸ್ವಭಾವ ಶ್ರೀರಾಮನದು. ಚಿತ್ರಕೂಟವನ್ನು ಕಂಡಾಗ, ಅರಣ್ಯವನ್ನು ಪ್ರವೇಶಿಸಿದಾಗ, ನದಿಗಳನ್ನು ನೋಡಿದಾಗ, ಪಂಪಾ ಸರೋವರವನ್ನು ವೀಕ್ಷಿಸಿದಾಗ, ಮಳೆಗಾಲವು ಬಂದಾಗ ಶ್ರೀರಾಮನ ಭಾವನಾಲಹರಿಗಳು ಹೇಗೆ ಹರಿದಾಡಿವೆಯೆಂಬುದನ್ನು ಓದಿದರೆ, ಅವನ ರಸಜ್ಞತೆಯನ್ನು ಎಷ್ಟು ಮಧುರವಾಗಿ ವಾಲ್ಮೀಕಿಗಳು ಚಿತ್ರಿಸಿದ್ದಾರೆಂಬುದು ಗೊತ್ತಾಗುತ್ತದೆ. ಸೀತೆಯನ್ನು ಅಗಲಿದ ವಿಪ್ರಲಂಭಸನ್ನಿವೇಶದಲ್ಲಿ ಆತನ ಶೃಂಗಾರ ಭಾವನೆ

ಎಷ್ಟು ಜಾಗೃತವಾಗಿತ್ತೆಂಬುದು ವ್ಯಕ್ತವಾಗುತ್ತದೆ. ಶ್ರೀರಾಮನು ರಸಿಕ-ನಾಗಿರದಿದ್ದರೆ ರಾಮಾಯಣವೇ ನೀರಸವಾಗುತ್ತಿತ್ತು.

ಶ್ರೀರಾಮನು ''ಸ್ಮಿತಪೂರ್ವಾಭಿಭಾಷೀ'' ನಗುನಗುತ್ತಲೇ ಮಾತ-ನಾಡುವುದು ಅವನ ಸ್ವಭಾವ. ಹಾಸ್ಯವು ಅವನಿಗೆ ಪ್ರಿಯವಾಗಿತ್ತೆಂಬುದಕ್ಕೆ ಅನೇಕ ನಿದರ್ಶನಗಳುಂಟು. ತ್ರಿಜಟನಿಗೆ 'ಪರಿಹಾಸೋ ಹ್ಯಯಂ ಮಮ' ಎಂದು ಅವನೇ ಹೇಳಿದ್ದಾನಲ್ಲವೆ?

ಸೀತಾ ರಾಮ ಲಕ್ಷ್ಮಣರು ಸಂತೋಷದಿಂದಲೇ ವನವಾಸವನ್ನು ಕಳೆದರು. ವನಗಳ ಪ್ರಕೃತಿ ಸೌಂದರ್ಯವನ್ನು ನೋಡಿ ನಲಿಯುತ್ತ, ಸರಸ ಸಂಲಾಪಗಳನ್ನಾಡುತ್ತ, ಅವರು ವನವಾಸದ ಕಷ್ಟವನ್ನು ಗಣಿಸಲಿಲ್ಲ. ಸೀತಾಪಹರಣದವರೆಗೆ ಯಾವ ಸಂದರ್ಭದಲ್ಲಿಯೂ ಅವರು ಕಷ್ಟವನ್ನು ಮನಸ್ಸಿಗೆ ತಂದುಕೊಂಡರೆಂಬುದಕ್ಕೆ ಸೂಚನೆಯಿಲ್ಲ. ಕೋಮಲೆಯಾದ ಸೀತೆಯ ಮನಸ್ಸಿಗೆ ವನವಾಸದ ಕಷ್ಟವು ತಾಗದಿರಲಿ ಎಂದು ಭಾವಜ್ಞನಾದ ಶ್ರೀರಾಮನು ಅವಳನ್ನು ಮೃದು ಮಧುರವಾಗಿ ನಡೆಸಿಕೊಂಡಿದ್ದಾನೆ. ''ಪ್ರಿಯೆ, ಈ ಚಿತ್ರಕೂಟವನ್ನೂ ಮಂದಾಕಿನಿಯನ್ನೂ ನೋಡುತ್ತಿರುವುದು ಅಯೋಧ್ಯೆಯಲ್ಲಿರುವುದಕ್ಕಿಂತ ನನಗೆ ಆನಂದಕರವಾಗಿದೆ. ಧರ್ಮಾತ್ಮ-ನಾದ ಲಕ್ಷ್ಮಣನು ನನ್ನ ಮಾತನ್ನು ಪಾಲಿಸುತ್ತ ಅನುಕೂಲನಾಗಿದ್ದಾನೆ. ವೈದೇಹಿ, ನಿಮ್ಮಿಬ್ಬರ ಜೊತೆಯಲ್ಲಿದ್ದರೆ, ನನಗೆ ಅಯೋಧ್ಯೆಯೂ ಬೇಡ. ರಾಜಪದವಿಯೂ ಬೇಡ!'' ಎನ್ನುತ್ತಾನೆ ಶ್ರೀರಾಮಚಂದ್ರ.

ದರ್ಶನಂ ಚಿತ್ರಕೂಟಸ್ಯ ಮಂದಾಕಿನ್ಯಾಶ್ಚ ಶೋಭನೇ ।
ಅಧಿಕಂ ಪುರವಾಸಾಚ್ಚ ಮನ್ಯೇ ತವ ಚ ದರ್ಶನಾತ್ ॥

ಲಕ್ಷ್ಮಣಶ್ಚಾಪಿ ಧರ್ಮಾತ್ಮಾ ಮನ್ನಿದೇಶೇ ವ್ಯವಸ್ಥಿತಃ ।
ತ್ವಂ ಚಾನುಕೂಲಾ ವೈದೇಹಿ ಪ್ರೀತಿಂ ಜನಯತೋ ಮಮ ॥

ನಾಯೋಧ್ಯಾಯೈ ನ ರಾಜ್ಯಾಯ ಸ್ಪೃಹಯೇಽದ್ಯ ತ್ವಯಾ ಸಹ ॥

- ಅಯೋಧ್ಯಾ ೯೫:೧೨, ೧೬, ೧೭

ಸೀತಾಪಹರಣವಾದಮೇಲೆ ದುಃಖಸಂತಪ್ತನಾದ ಶ್ರೀರಾಮನು ಲಕ್ಷ್ಮಣ-ನಿಗೆ ಹೇಳುವ ವಚನವಿದು:

"ಲಕ್ಷ್ಮಣ, ಇದೇ ಶಿಲಾತಲದಲ್ಲಿಯೇ ಆ ಸುಶೀಲೆಯು ಮೋಹಕವಾಗಿ ನಸು ನಗುತ್ತ ನನ್ನ ಬಳಿ ಕುಳಿತಿರುತ್ತಿದ್ದಳು. ಸೀತೆ ಇಲ್ಲಿ ಕುಳಿತು ವಿನೋದ ವಾಗಿ ನಗುತ್ತ ನಿನ್ನೊಡನೆ ಬಹಳ ಹರಟುತ್ತಿದ್ದಳಲ್ಲವೆ?"

ಅಸ್ಮಿನ್ ಮಯಾ ಸಾರ್ಧಮುದಾರಶೀಲಾ
ಶಿಲಾತಲೇ ಪೂರ್ವಮುಪೋಪವಿಷ್ಟಾ ।
ಕಾಂತಸ್ಮಿತಾ ಲಕ್ಷ್ಮಣ ಜಾತಹಾಸಾ
ತ್ವಾಮಾಹ ಸೀತಾ ಬಹು ವಾಕ್ಯಜಾತಮ್ ॥ - ಅರಣ್ಯ ೬೩:೧೨

ಆ ಮೂವರೂ ವಿನೋದಪ್ರಿಯರಾಗಿದ್ದವರು.

ಸೀತಾ ರಾಮ ಲಕ್ಷ್ಮಣರು ಗಂಗಾತೀರಕ್ಕೆ ಬಂದಿದ್ದಾರೆ. ನದಿಯನ್ನು ದಾಟಿಸಲು ಗುಹನು ನಾವೆಯನ್ನು ತರಿಸಿದ್ದಾನೆ. ಶ್ರೀರಾಮನಿಗೆ ಸೀತೆ ಯನ್ನು ಸ್ವಲ್ಪ ಚೇಡಿಸಬೇಕೆನ್ನಿಸಿತು. ಅವನು "ಲಕ್ಷ್ಮಣ, ನೀನು ಮೊದಲು ದೋಣಿಯನ್ನು ಹತ್ತು, ಅನಂತರ ಈ ಧೀರೆಯ ಕೈ ಹಿಡಿದು ಮೆಲ್ಲಗೆ ದೋಣಿಯನ್ನೇರಿಸು!" ಎನ್ನುತ್ತಾನೆ. "ಸೀತೆಯು ಬಹಳ ಧೀರೆ! ದೋಣಿಯನ್ನು ಹತ್ತುವ ಧೈರ್ಯ ಮಾತ್ರ ಅವಳಿಗಿಲ್ಲ!" ಎಂದು ಶ್ರೀರಾಮನ ಹಾಸ್ಯಭಾವವಿದು. "ಧೈರ್ಯವಿದ್ದರೆ ಅವಳು ದೋಣಿಯನ್ನು ಮೊದಲು ಹತ್ತಲಿ ನೋಡೋಣ!" ಎಂದು ಅವನ ಆಶಯ. ಲಕ್ಷ್ಮಣನು ಶ್ರೀರಾಮನ ಆಶಯವನ್ನು ಗ್ರಹಿಸಿದ. "ನನ್ನ ಅತ್ತಿಗೆ ಧೀರೆಯಲ್ಲವೆ? ನೋಡೋಣ!" ಎಂಬ ಅಭಿಪ್ರಾಯದಿಂದ ಸೀತೆಯನ್ನೇ ಮೊದಲು

ದೋಣಿಯಲ್ಲಿ ಹತ್ತಿಸಿ, ಆಮೇಲೆ ತಾನು ದೋಣಿಯನ್ನೇರಿದನು. (ಅಯೋಧ್ಯಾಕಾಂಡ, ೫೨:೭೫, ೭೬).

ಶೂರ್ಪಣಖಾ ಪ್ರಸಂಗ

ಶೂರ್ಪಣಖಾಪ್ರಸಂಗದಲ್ಲಿ ಶ್ರೀರಾಮನ ಹಾಸ್ಯಪ್ರಿಯತೆ ಸ್ಪಷ್ಟವಾಗಿ ಗೋಚರಿಸುತ್ತದೆ. ವಾಲ್ಮೀಕಿ ಮುನಿಗಳು ಬೇಕೆಂದೇ ಆ ಪ್ರಕರಣಕ್ಕೆ ಹಾಸ್ಯದ ಮೆರುಗನ್ನು ಕೊಟ್ಟಿದ್ದಾರೆ. ಜರಠೆಯಾದ ಶೂರ್ಪಣಖೆಗೆ ಕಾಮದ ಸನ್ನಿಯುಂಟಾದುದೇ ಹಾಸ್ಯಾಸ್ಪದ. ತನ್ನ ಮನೋವಿಕಾರವನ್ನು ವಾಚ್ಯವಾಗಿ ಧೈರ್ಯದಿಂದ ಪರಪುರುಷನಲ್ಲಿ, ಅದೂ ಸೀತಾ ಲಕ್ಷ್ಮಣರೆದುರಿಗಿರುವಾಗ ಪ್ರಕಟಿಸುವುದು ಲಜ್ಜೆಗೇಡಿತನವೇ ಸರಿ. ಮೊದಲಿನ ನೋಟದಲ್ಲಿಯೇ ಶೂರ್ಪಣಖೆಯು ಎಂತಹ ಹೆಂಗಸೆಂಬುದು ಇಂಗಿತಜ್ಞನಾದ ಶ್ರೀರಾಮನಿಗೆ ಹೊಳೆದುಹೋಯಿತು. 'ರಾಕ್ಷಸೀ ಪ್ರತಿಭಾಸಿ ಮೇ - ನೀನು ರಾಕ್ಷಸಿಯೆಂದು ನನಗೆ ತೋರುತ್ತದೆ'' ಎಂದು ಅವನು ಹೇಳಿಯೇ ಬಿಟ್ಟನು.

ಶೂರ್ಪಣಖೆಯು ಶ್ರೀರಾಮನನ್ನು ನೋಡಿ, ಕಾಮಮೋಹಿತ-ಳಾದದ್ದು ಎಷ್ಟು ಅನುಚಿತವೆಂಬುದನ್ನು ವಾಲ್ಮೀಕಿ ಮುನಿಗಳು ಮನೋಜ್ಞವಾಗಿ ಚಿತ್ರಿಸಿದ್ದಾರೆ.

''ಶ್ರೀರಾಮನದು ಸುಂದರವಾದ ಮುಖ. ಶೂರ್ಪಣಖೆಯದು ಸೊಟ್ಟ ಮೋರೆ! ಅವನಿಗೆ ಕೃಶವಾದ ನಡು, ಇವಳಿಗೆ ದೊಡ್ಡ ಹೊಟ್ಟೆ! ಅವನು ವಿಶಾಲಾಕ್ಷ, ಇವಳು ವಿರೂಪಾಕ್ಷಿ! ಅವನಿಗೆ ನವಿರಾದ ಕೃಷ್ಣ ಕೇಶರಾಶಿ, ಇವಳಿಗೆ ಕೆಂಗೂದಲು! ಅವನು ಸಂತೋಷವನ್ನೀಯುವ ಸಾತ್ತ್ವಿಕಮೂರ್ತಿ, ಇವಳು ಉದ್ವೇಗಗೊಳಿಸುವ ತಾಮಸಮೂರ್ತಿ! ಅವನಿಗೆ ಇಂಪಾದ ಕಂಠಧ್ವನಿ, ಇವಳಿಗೆ ಭೈರವ ಧ್ವನಿ! ಅವನು ಸೌಮ್ಯಾಕಾರದ ತರುಣ, ಇವಳು ವಿಕೃತಾಕಾರದ ಮುದುಕಿ! ಅವನು

ನಯವಾಗಿ ಮಾತನಾಡುವ ವಾಗ್ವಿಶಾರದ! ಇವಳು ಒರಟಾಗಿ ಮಾತನಾಡುವ ಕಟುಭಾಷಿಣಿ! ಅವನು ಸದಾಚಾರಸಂಪನ್ನ, ಇವಳು ದುರಾಚಾರನಿರತೆ! ಅವನನ್ನು ನೋಡಿದರೆ ಆನಂದವಾಗುವುದು, ಇವಳನ್ನು ನೋಡಿದರೆ ಉದ್ವೇಗವಾಗುವುದು!''

ಸುಮುಖಂ ದುರ್ಮುಖೀ ರಾಮಂ ವೃತ್ತಮಧ್ಯಂ ಮಹೋದರೀ ।
ವಿಶಾಲಾಕ್ಷಂ ವಿರೂಪಾಕ್ಷೀ ಸುಕೇಶಂ ತಾಮ್ರಮೂರ್ಧಜಾ ॥

ಪ್ರೀತಿರೂಪಂ ವಿರೂಪಾ ಸಾ ಸುಸ್ವರಂ ಭೈರವಸ್ವರಾ ।
ತರುಣಂ ದಾರುಣಾ ವೃದ್ಧಾ ದಕ್ಷಿಣಂ ವಾಮಭಾಷಿಣೀ ॥

ನ್ಯಾಯವೃತ್ತಂ ಸುದುರ್ವೃತ್ತಾ ಪ್ರಿಯಮಪ್ರಿಯದರ್ಶನಾ ॥

- ಅರಣ್ಯ ೧೭:೧೦-೧೨

ಎಂತಹ ಅನುರೂಪತೆ! ಮದುವೆಯಾದರೆ ಮಾದರಿಯ ದಾಂಪತ್ಯವಾದೀತು!

ಕಾಮಮೋಹಿತಳಾದ ಶೂರ್ಪಣಖಿ ಶ್ರೀರಾಮನೊಡನೆ ಸಂಭಾಷಿಸುವ ಪ್ರಣಯದ ಧಾಟಿಯನ್ನು ನೋಡಿ: ಅವಳು ನೆಟ್ಟಗೆ ಅವನ ಬಳಿಗೆ ಹೋಗಿ ''ಯಾರು ನೀನು? ಜಟೆಯನ್ನು ಧರಿಸಿ ತಾಪಸವೇಷದಲ್ಲಿದ್ದೀಯೆ. ಹೆಂಡತಿಯನ್ನು ಕಟ್ಟಿಕೊಂಡು ಶರಚಾಪಗಳನ್ನು ಹಿಡಿದಿದ್ದೀಯೆ. ಇಲ್ಲಿಗೇಕೆ ಬಂದೆ? ಸತ್ಯವನ್ನು ಹೇಳು!'' ಎಂದು ಕೇಳಿದಳು. ಶ್ರೀರಾಮನು ಇದ್ದ ಸಂಗತಿಯನ್ನು ತಿಳಿಸಿದನು. ಆಗ ಶೂರ್ಪಣಖಿಯು ''ನೀನು ನನ್ನ ಗಂಡನೆಂದು ಮೆಚ್ಚಿ ಬಂದಿದ್ದೇನೆ. ಇನ್ನು ಮೇಲೆ ಶಾಶ್ವತವಾಗಿ ನನ್ನ ಗಂಡನಾಗಿರು!'' ಎಂದಳು. ಅವಳಿಗೆ ಅದುವರೆಗೆ ಯಾರೂ ದೀರ್ಘಕಾಲ ಗಂಡನಾಗಿರಲಿಲ್ಲವೆಂದು ತೋರುತ್ತದೆ! ಶ್ರೀರಾಮನ ಬಳಿಯಲ್ಲಿ ಸೀತೆ ಇದ್ದಳಲ್ಲವೆ? ಅವಳಿರುವಾಗ ತನ್ನನ್ನು ಅವನು ವರಿಸಿಯಾನೆ- ಎಂಬ ಶಂಕೆ ಆ ರಾಕ್ಷಸಿಗೆ ಹುಟ್ಟಿತು. ಅದಕ್ಕೆ ಸುಲಭವಾದ ಪರಿಹಾರವನ್ನು ಶೂರ್ಪಣಖಿ

ಹೇಳಿಯೇಬಿಟ್ಟಳು: ''ಸೀತೆಯನ್ನು ತಿಂದುಬಿಡುತ್ತೇನೆ, ಚಿಂತಿಸಬೇಡ'' ಎಂದಳು. ಸ್ವೇಚ್ಛಾವಿಹಾರಕ್ಕೆ ಲಕ್ಷ್ಮಣನು ಅಡ್ಡಿಯಾಗಬಹುದೇನು? ಅವನನ್ನೂ ತಿಂದುಬಿಡುವೆನೆಂದಳು. ''ಅನಂತರ ಹೇ ಕಾಂತ, ನನ್ನೊಡನೆ ದಂಡಕಾರಣ್ಯದಲ್ಲಿ ಮನಬಂದಂತೆ ತಿರುಗಬಹುದು!'' ಎಂದಳು. ಅಷ್ಟು ಸುಂದರಿಯಾದ ಸೀತೆಯನ್ನು ಶ್ರೀರಾಮನು ತ್ಯಜಿಸಲು ಒಪ್ಪುವನೆ ಎಂಬ ಶಂಕೆಯಿಂದ ''ಈ ಸೀತೆಯನ್ನು ಕಟ್ಟಿಕೊಂಡು ಏನು ಮಾಡುತ್ತೀಯೆ? ಇವಳ ದೇಹ ವಿಕಾರವಾಗಿದೆ. ಕುರೂಪಿ ಇವಳು; ನಿನಗೆ ಯೋಗ್ಯಳಲ್ಲ! ನಾನೇ ನಿನಗೆ ಅನುರೂಪಳಾದವಳು. ಈ ಸೀತೆ ಕುರೂಪಿ, ಕೆಟ್ಟವಳು! ಕರಾಳಿ. ಇವಳ ಹೊಟ್ಟೆ ಒಳಗೆ ಸೀದುಹೋಗಿದೆ! ಅದೆಂಥ ರೂಪ!'' ಎಂದು ಹಲುಬಿದಳು.

'ಲಕ್ಷ್ಮಣನ ಬಳಿಗೆ ಹೋಗು....'

ಶೂರ್ಪಣಖೆಯ ಲಜ್ಜೆಗೇಡಿತನವನ್ನು ನೋಡಿ ಶ್ರೀರಾಮನಿಗೆ ಸ್ವಲ್ಪ ಹಾಸ್ಯ ಮಾಡೋಣವೆನಿಸಿತು. ಅವನು ''ಆರ್ಯೆ, ನನಗೆ ಮದುವೆ ಯಾಗಿದೆ. ನೀನು ಹೇಳಿದಂತೆ ಇವಳು ಕುರೂಪಿಯಾಗಿರಬಹುದು. ಆದರೂ ನನಗೆ ಪ್ರಿಯಳಾಗಿದ್ದಾಳೆ! ನಿನ್ನಂಥ ಹೆಂಗಸರಿಗೆ ಸವತಿಯೊಡನೆ ಬಾಳುವುದು ಕಷ್ಟ! ಅಲ್ಲಿ ನೋಡು, ನನ್ನ ತಮ್ಮನಿದ್ದಾನೆ. ಒಳ್ಳೆಯ ನಡತೆಯವನು. ಸುಂದರನಾಗಿದ್ದಾನೆ. ತುಂಬ ತೇಜಸ್ವಿ, ಅವನಿಗೆ ಮದುವೆ ಯಾಗಿಲ್ಲ. ಅವನ ಹೆಸರು ಲಕ್ಷ್ಮಣ. ಮಹಾಶೂರ, ದಾಂಪತ್ಯ ಸುಖಕ್ಕೆ ಹೊಸಬ. ಆತನಿಗೆ ಒಬ್ಬ ಹೆಂಡತಿ ಬೇಕಾಗಿದೆ! ನಿನ್ನ ರೂಪಕ್ಕೆ ಅವನು ಅನುರೂಪನಾದ ಗಂಡನಾಗುತ್ತಾನೆ. ಹೇ ವಿಶಾಲಾಕ್ಷಿ, ಅವನನ್ನು ವರಿಸು. ಅವನನ್ನು ವರಿಸಿದರೆ ನಿನಗೆ ಸವತಿಯ ಕಾಟವಿರುವುದಿಲ್ಲ'' ಎಂದನು. ''ಮೇರುಪರ್ವತದಲ್ಲಿ ಸೂರ್ಯಪ್ರಭೆಯು ಸೇರಿದಂತೆ ನಿಮ್ಮ ಜೋಡಿಯು ರಮ್ಯವಾಗಿರುವುದು!'' ಎಂದು ಹೊಗಳಿದನು.

ಕಾಮದಿಂದ ಬುದ್ಧಿಗೆಟ್ಟ ಆ ರಾಕ್ಷಸಿಗೆ ಶ್ರೀರಾಮನ ಪರಿಹಾಸ ಅರ್ಥವಾಗಲಿಲ್ಲ. ಅವಳು ನೆಟ್ಟಗೆ ಲಕ್ಷ್ಮಣನ ಬಳಿಗೆ ಹೋಗಿ "ಏ ಲಕ್ಷ್ಮಣ, ಮಿರುಗುವ ನನ್ನ ಮೈ ಬಣ್ಣವನ್ನು ನೋಡು! ನಿನಗೆ ನಾನೇ ತಕ್ಕ ಹೆಂಡತಿ!" ಎಂದು ಹೇಳಿದಳು. ಲಕ್ಷ್ಮಣನಿಗೂ ಅದೊಂದು ಹಾಸ್ಯದ ಸನ್ನಿವೇಶ ಎನಿಸಿತು. ಶೂರ್ಪಣಖೆಯನ್ನು ನೋಡಿ ಅವನಿಗೆ ನಗು ಬಂದಿತು. ಶ್ರೀರಾಮನು ಆಡಿದ ಮಾತು ಅವನಿಗೆ ಕೇಳಿಸಿತ್ತು. ಅವನೂ ಹಾಸ್ಯದಿಂದ "ಆಹಾ! ಕಮಲದ ಮೈಬಣ್ಣ ನಿನ್ನದು! ಆದರೆ ಅಣ್ಣನಿಗೆ ದಾಸನಾಗಿದ್ದೇನೆ. ನೀನು ದಾಸನ ಭಾರ್ಯೆಯಾಗಿ ಇನ್ನೊಬ್ಬನ ದಾಸಿಯಾಗಬಹುದೆ? ದಾಸನ ದಾಸಿಯಾಗುವುದು ನಿನಗೆ ಸರಿ-ಹೋದೀತೆ? ನನ್ನ ಅಣ್ಣನ ಮಡದಿಯಾಗುವುದೇ ನಿನಗೆ ಒಳ್ಳೆಯದು. ಹೇ ವಿಶಾಲಾಕ್ಷಿ, ಎಷ್ಟು ಸೊಗಸಾದ ಮೈ ಬಣ್ಣ ನಿನ್ನದು! ನನ್ನ ಅಣ್ಣನಿಗೆ ಕಿರಿಯ ಮಡದಿಯಾಗು. ನೀನು ಹೇಳುವ ಪ್ರಕಾರ ಅವನ ಹೆಂಡತಿಯು ಕುರೂಪಿಯೂ, ಕೆಟ್ಟವಳೂ, ಕರಾಳಿಯೂ, ಒಳಗೆ ಹತ್ತಿಹೋದ ಹೊಟ್ಟೆ-ಯವಳೂ, ವಯಸ್ಸಾದವಳೂ ಆಗಿದ್ದಾಳೆ! ನನ್ನ ಅಣ್ಣನು ಅವಳನ್ನು ಬಿಟ್ಟು ನಿನ್ನನ್ನೇ ವರಿಸುವನು. ಸುಂದರಿ, ನಿನ್ನ ಈ ರಮಣೀಯ ರೂಪವನ್ನು ಯಾವ ಜಾಣನು ಉಪೇಕ್ಷಿಸಿಯಾನು!" ಎಂದು ಹೇಳಿದನು.

ಕಾಮಿನಿಗೆ ಎಂತಹ ಶಿಕ್ಷೆ

ಜೋಲು ಹೊಟ್ಟೆಯ ಈ ಕರಾಳಿಯು ಲಕ್ಷ್ಮಣನ ಮಾತು ಸತ್ಯವೆಂದೇ ತಿಳಿದುಕೊಂಡಳಂತೆ. ಹಾಸ್ಯಕಲೆಯ ಪರಿಚಯವಿಲ್ಲದ್ದರಿಂದ ಮತ್ತೆ ಶ್ರೀರಾಮನ ಬಳಿಗೆ ಹೋಗುತ್ತಾಳೆ. ಶೂರ್ಪಣಖೆಗೆ ಸೀತೆಯ ಸೌಂದರ್ಯ ತಿಳಿಯದೇ ಇಲ್ಲ. ರಾವಣನೆದುರಿಗೆ ಸೀತೆಯ ಸೌಂದರ್ಯವನ್ನು ಬಾಯಿತುಂಬ ಹೊಗಳಿದವಳು ಅವಳೇ. ಇಲ್ಲಿ ಕಾಮದ ಅಮಲಿನಲ್ಲಿ ಸ್ವಾರ್ಥಕ್ಕಾಗಿ ಬೇಕೆಂದೇ ಸೀತೆಯನ್ನು ನಿಂದಿಸಿದ್ದಾಳೆ. ಸೀತೆಯನ್ನು ವೃದ್ಧೆಯೆಂದೂ ಕರಾಳಿಯೆಂದೂ ಅವಳು ಹೇಳುವುದು ಮೋಜಿನ ಸಂಗತಿ.

ಶೂರ್ಪಣಖೆಯ ನಡೆ ನುಡಿಗಳು ಬೀಭತ್ಸವನ್ನು ಪ್ರಕಟಿಸುವಂತೆ ಹಾಸ್ಯವನ್ನು ವ್ಯಂಜಿಸುತ್ತವೆ. ವಾಲ್ಮೀಕಿ ಮುನಿಗಳು ಸೂಕ್ಷ್ಮವಾದ ಹಾಸ್ಯವನ್ನು ಅವಳ ಸಂದರ್ಭದಲ್ಲಿ ಸೇರಿಸಿ ನಮ್ಮನ್ನು ನಗಿಸುತ್ತಾರೆ. ಶ್ರೀರಾಮನ ಸೂಚನೆಯಂತೆ ಲಕ್ಷ್ಮಣನು ಅವಳ ಕಿವಿ ಮೂಗುಗಳನ್ನು ಕೊಯ್ದು ಹಾಕಿದನು. ಕಾಂತನನ್ನು ಬಯಸಿ ಬಂದ ಕಾಮಿನಿಗೆ ಎಂತಹ ಶಿಕ್ಷೆ! ಕಿವಿ ಮೂಗುಗಳನ್ನು ಕೊಯ್ದೊಡನೆ ಶೂರ್ಪಣಖೆಯು ಕೆಟ್ಟಧ್ವನಿಯಿಂದ ಕಿರುಚುತ್ತ, ಬಂದ ದಾರಿಯನ್ನು ಹಿಡಿದು ಕಾಡಿನೊಳಗೆ ಓಡಿಹೋದ-ಳಂತೆ. ಅವಳು ಕೂಗಿದ್ದು ವಿವಿಧ ಧ್ವನಿಗಳಲ್ಲಿ! 'ನನಾದ ವಿವಿಧಾನ್ ನಾದಾನ್' ಕೈಗಳನ್ನು ಮೇಲೆತ್ತಿ ಗಟ್ಟಿಯಾಗಿ ಒದರುತ್ತ ಗೊಂಡಾರಣ್ಯದಲ್ಲಿ ಓಡಿಹೋದಳು!

ಅವಳು ಖರನೊಡನೆ ಆಡಿದ ಮಾತೂ ನಗುವನ್ನು ತರುವಂತಹುದೇ. ರಾಮ ಲಕ್ಷ್ಮಣರ ಸೌಂದರ್ಯ ಅವಳ ಮನಸ್ಸಿನಲ್ಲಿ ನೆಟ್ಟುಹೋಗಿದೆ. ಅವರ ವಿಷಯವಾಗಿ ಪುಕಾರು ಹೇಳುವಾಗಲೂ ಅಯಾಚಿತವಾಗಿ ಅವಳ ಬಾಯಿಂದ-

ತರುಣೌ ರೂಪಸಂಪನ್ನೌ
ಸುಕುಮಾರೌ ಮಹಾಬಲೌ ॥

ಪುಂಡರೀಕ ವಿಶಾಲಾಕ್ಷೌ.... ॥

ಎಂದು ಶ್ಲಾಘನೆ ಬಂದುಬಿಡುತ್ತದೆ. ''ರಾಮಲಕ್ಷ್ಮಣರೊಡನೆ ರೂಪಸಂಪನ್ನೆಯಾದ ಒಬ್ಬ ತರುಣಿ ಇದ್ದಾಳೆ'' ಎನ್ನುತ್ತಾಳೆ. 'ವೃದ್ಧೆಯಾದ ಕರಾಳಿ'ಯಾಗಿದ್ದ ಸೀತೆ, ಇದ್ದಕ್ಕಿದ್ದಂತೆ ಈಗ, 'ರೂಪಸಂಪನ್ನೆಯಾದ ತರುಣಿ'ಯಾಗಿಬಿಡುತ್ತಾಳೆ! ನನ್ನ ಈ ದುರವಸ್ಥೆಗೆ ಆ ಹೆಂಗಸೇ ಮೂಲ ಕಾರಣ, ನಾನೊಬ್ಬ ದಿಕ್ಕಿಲ್ಲದ ಸೂಳೆಯೋ ಎಂಬಂತೆ ಅವರಿಬ್ಬರೂ ಸೇರಿ ನನ್ನನ್ನು ಹೀಗೆ ವಿರೂಪಗೊಳಿಸಿದರು'' ಎಂದು ದೂರು ಹೇಳುತ್ತಾಳೆ.

ಸತ್ಯವನ್ನು ಹೇಗೆ ಚಾಡಿಕೋರರರು ವಿರೂಪಗೊಳಿಸುತ್ತಾರೆಂಬುದನ್ನು ಇಲ್ಲಿ ನೋಡಬಹುದು. ಏನನ್ನೂ ಹೇಳದ, ಏನನ್ನೂ ಮಾಡದ ಸೀತೆ ಶೂರ್ಪ-ಣಖೆಯ ದುರವಸ್ಥೆಗೆ ಕಾರಣಳಾದಳು! ಶೂರ್ಪಣಖೆಯು ''ದಿಕ್ಕಿಲ್ಲದ ಸೂಳೆಯಂತೆ ನನ್ನನ್ನು ನಡೆಸಿಕೊಂಡರು'' ಎನ್ನುತ್ತಾಳೆ.

ಇಮಾಮವಸ್ಥಾಂ ಯಥಾಽಸತೀ ತಥಾ ॥ - ಅರಣ್ಯ ೧೯:೧೮

ಸೂಳೆಯಂತೆ ನಡೆಯಲಿಲ್ಲವೆ ಅವಳು?

ರಾಮಲಕ್ಷ್ಮಣರು ಸಾಮಾನ್ಯರೆಂದು ಬಗೆದು ಖರನು ಹದಿನಾಲ್ಕು ಸಾವಿರ ಜನ ರಾಕ್ಷಸರನ್ನು ಯುದ್ಧಕ್ಕೆ ಕಳಿಸಿದ. ರಾಮ, ಲಕ್ಷ್ಮಣ, ಸೀತೆ- ಈ ಮೂವರ ನೊರೆ ನೊರೆಯಾದ ರಕ್ತವನ್ನು ಕುಡಿಯಬೇಕೆಂದು ಅವಳು ಕಾದು ಕುಳಿತಿದ್ದಳು! ಅವಳ ದುರ್ದೈವದಿಂದ ರಾಕ್ಷಸರೆಲ್ಲರೂ ಹತರಾದರು. ಮತ್ತೆ ಗಟ್ಟಿಯಾಗಿ ಕೂಗುತ್ತ ಖರನ ಬಳಿಗೆ ಹೋದಳು. ಅಷ್ಟು ಹೊತ್ತಿಗೆ ಕಿವಿ ಮೂಗುಗಳಿಂದ ಹರಿಯುತ್ತಿದ್ದ ರಕ್ತ ಸ್ವಲ್ಪ ಒಣಗಿತ್ತಂತೆ! 'ಕಿಂಚಿತ್ ಸಂಶುಷ್ಕಶೋಣಿತಾ' ಅಂಟು ಮೆತ್ತಿಕೊಂಡಿರುವ ಸಲ್ಲಕೀಲತೆ-ಯಂತೆ ಇದ್ದಳಂತೆ!

ಚಿತಾವಣೆ

ಸ್ವಾರ್ಥಸಾಧನೆಯ ಕಲೆ ಶೂರ್ಪಣಖೆಗೆ ಚೆನ್ನಾಗಿ ಗೊತ್ತಿತ್ತು. ಖರನನ್ನು ರೇಗಿಸಿದ ಹೊರತು ಸಮಗ್ರ ಸೇನೆಯೊಡನೆ ಅವನು ಹೊರಡುವುದಿಲ್ಲವೆಂದೂ ತನ್ನ ಇಷ್ಟವು ನೆರವೇರುವುದಿಲ್ಲವೆಂದೂ ಅವಳು ತಿಳಿದಳು. ಖರನನ್ನು ಹೇಡಿಯೆಂದು ಹಂಗಿಸಿದಳು. ಕಡೆಯಲ್ಲಿ ತನ್ನ ದೊಡ್ಡ ಹೊಟ್ಟೆಯನ್ನು ಎರಡು ಕೈಗಳಿಂದಲೂ ಬಡಿದುಕೊಂಡಳು.

ಕರಾಭ್ಯಾಮುದರಂ ಹತ್ವಾ ರುರೋದ ಭೃಶದುಃಖಿತಾ ॥

- ಅರಣ್ಯ ೨೧:೨೨

ಖರನ ಸೇನೆಯೆಲ್ಲವೂ ನಿರ್ನಾಮವಾಯಿತು. ಶೂರ್ಪಣಖೆಯು ದೂರದಲ್ಲಿ ಅಡಗಿಕೊಂಡು ನೋಡುತ್ತಿದ್ದಳು. ರಾಮನ ರಕ್ತವನ್ನು ಕುಡಿಯಲು ಕಾದಿದ್ದಳು! ಖರನೂ ಸತ್ತೊರಗಿದ. ಶೂರ್ಪಣಖೆಗೆ ಎಂತಹ ನಿರಾಸೆ! 'ಹೋ' ಎಂದು ಕೂಗುತ್ತ ಮತ್ತೆ ಓಡಿಹೋದಳು. ಈ ಸಲ ನೆಟ್ಟಗೆ ಲಂಕೆಗೆ ಹೋದಳು. ನೇರವಾಗಿ ರಾವಣನ ಸಭೆಗೆ ನುಗ್ಗಿ ತನ್ನ ವಿರೂಪವನ್ನು ತೋರಿಸಿದಳು. ''ಏ ರಾವಣ, ನೀನು ಕಾಮಭೋಗಗಳಲ್ಲಿ ಮುಳುಗಿ ಮೈ ಮರೆಯುತ್ತಿದ್ದೀಯೆ. ಮನಸ್ಸು ಬಂದಂತೆ ನಡೆಯುತ್ತಿರುವೆ. ಜನಸ್ಥಾನವು ನಿನ್ನ ಕೈತಪ್ಪಿಹೋಯಿತು. ನಿನಗೆ ಇನ್ನೂ ತಿಳಿಯಲಿಲ್ಲವೆ?'' ಎಂದು ಗಜರಿದಳು. ನಡೆದ ಕಥೆಯನ್ನು ಬಣ್ಣಗಟ್ಟಿ ಹೇಳಿದಳು. ರಾವಣನ ದೌರ್ಬಲ್ಯ ಅವಳಿಗೆ ಗೊತ್ತಿತ್ತು; ಅವನು ಕಾಮಲಂಪಟನೆಂಬುದು ತಿಳಿದಿತ್ತು. ಆದ್ದರಿಂದ ಸೀತೆಯ ಸೌಂದರ್ಯವನ್ನು ವರ್ಣಿಸಿ ಆಸೆ ಹುಟ್ಟಿಸಿದಳು. ''ಅಣ್ಣ, ಸೀತೆಯು ಯಾರ ಮಡದಿಯಾಗಿರುವಳೋ, ಯಾರನ್ನು ಅವಳು ಪ್ರೀತಿಯಿಂದ ಅಪ್ಪಿಕೊಳ್ಳುವಳೋ, ಅವನ ಜೀವನವೇ ಸಮಸ್ತವನ್ನೂ ಮೀರಿಸಿದ ಸುಖಮಯ ಜೀವನ'' ಎಂದು ಬಣ್ಣಿಸಿದಳು. ಅವಳನ್ನು ''ನಿನ್ನ ಮಡದಿಯಾಗಿ ಮಾಡಬೇಕೆಂದು ನಾನು ಪ್ರಯತ್ನಿಸಿದೆ! ಆದರೆ ಕ್ರೂರನಾದ ಲಕ್ಷ್ಮಣನು ನನ್ನನ್ನು ಹೀಗೆ ವಿರೂಪಗೊಳಿಸಿದನು'' ಎಂದು ಸುಳ್ಳು ವರದಿಯನ್ನಿತ್ತಳು.

ಶೂರ್ಪಣಖೆಗೆ ತಾನು ರಾಮನನ್ನು ಕಾಮಿಸಿದುದು ಹಾಸ್ಯಾಸ್ಪದವೆಂದು ತಿಳಿದಿದೆ. ಖರನಿಗಾಗಲಿ, ರಾವಣನಿಗಾಗಲಿ ಆ ವಿಷಯವನ್ನು ಅವಳು ತಿಳಿಸಲೇ ಇಲ್ಲ! ಲಕ್ಷ್ಮಣನು ತನ್ನನ್ನು ದಂಡಿಸಿದ್ದಕ್ಕೆ ಬೇರೆಯ ಕಾರಣವನ್ನೇ ಅವಳು ಹುಟ್ಟಿಸಿದಳು! ಆದರೂ ಅವಳ ಗುಟ್ಟು ಲಂಕೆಯಲ್ಲಿ ಬಹಿರಂಗವಾಗಿ ಹೋಯಿತು!

ಕುಂಭಕರ್ಣ, ಇಂದ್ರಜಿತು ಮೊದಲಾದ ರಾಕ್ಷಸ ವೀರರೆಲ್ಲರೂ ಹತರಾದರು. ಸತ್ತುಹೋದ ರಾಕ್ಷಸಯೋಧರ ಸಂಖ್ಯೆಗೆ ಇತಿಯಿಲ್ಲ.

ಲಂಕೆಯಲ್ಲುಳಿದ ರಾಕ್ಷಸಿಯರಲ್ಲಿ ಬಹುಮಂದಿ ವಿಧವೆಯರೇ! ಆ ರಾಕ್ಷಸಿಯರ ವಿಲಾಪವಿದು. ''ಕಂದರ್ಪನಂತೆ ರೂಪಶಾಲಿಯಾದ ರಾಮನ ಬಳಿಗೆ ಜೋಲು ಹೊಟ್ಟೆಯ ಈ ಶೂರ್ಪಣಖೆಯು ಹೇಗೆ ಹೋಗಿದ್ದಾಳು! ಕರಾಳಿಯಾದ ಈ ಮುದುಕಿಗೆ ಇದೆಲ್ಲವೂ ಏಕೆ ಬೇಕಾಗಿತ್ತು! ಗುಣವಂತನೂ ಮಹಾತೇಜಸ್ವಿಯೂ ಆದ ರಾಮನನ್ನು, ಒಂದಾನೊಂದು ಸದ್ಗುಣವೂ ಇಲ್ಲದ ಈ ರಾಕ್ಷಸಿಯು ಹೇಗೆ. ಕಾಮಿಸಿದ್ದಾಳು! ಈ ಕೆಟ್ಟಮೋರೆಯವಳು ಆ ಮನೋಜ್ಞಮುಖನನ್ನು ಹೇಗೆ ಬಯಸಿದ್ದಾಳು! ಒಟ್ಟಿನಲ್ಲಿ ನಮ್ಮ ದುರ್ಭಾಗ್ಯದಿಂದ ಈ ರಾಕ್ಷಸಿಯು ಮಾಡಬಾರದ ಕೆಲಸವನ್ನು ಮಾಡಿಬಿಟ್ಟಳು! ಇವಳ ಚರ್ಮವೆಲ್ಲವೂ ಸುಕ್ಕುಗಟ್ಟಿದೆ! ತಲೆಗೂದಲು ಬೆಳ್ಳಗಾಗಿದೆ! ಈ ಮುದುಕಿಯು ಲೋಕ-ಗರ್ಹಿತವಾದ ಎಂತಹ ಅಪಹಾಸ್ಯದ ಕೆಲಸವನ್ನು ಮಾಡಿಬಿಟ್ಟಳು!'' (ಯುದ್ಧಕಾಂಡ ೧೯:೬-೯):

ರಾಕ್ಷಸರ ವಿಕಾರರೂಪವನ್ನು ವರ್ಣಿಸುವುದು ಹಾಸ್ಯದ ಉದ್ದೇಶ-ದಿಂದಲೇ, ಅವರಲ್ಲಿ ಗಂಡಸರಿಗಿಂತ ಹೆಂಗಸರ ವಿಕಾರವನ್ನೇ ಹೆಚ್ಚಾಗಿ ವರ್ಣಿಸುತ್ತಾರೆ ವಾಲ್ಮೀಕಿಗಳು. ಅಶೋಕವನದಲ್ಲಿ ಸೀತೆಯನ್ನು ಕಾಯು-ತ್ತಿದ್ದ ರಾಕ್ಷಸಿಯರನ್ನು ಹನುಮಂತನು ಕಂಡನು. ಆ ರಾಕ್ಷಸಿಯರು ಹೇಗಿದ್ದರು?

''ಆ ರಾಕ್ಷಸಿಯರಲ್ಲಿ ಕೆಲವರಿಗೆ ಒಂದೇ ಕಣ್ಣು. ಕೆಲವರಿಗೆ ಒಂದೇ ಕಿವಿ. ಕೆಲವರಿಗೆ ಮುಸುಕುಹಾಕಿದಂತೆ ಅಗಲವಾದ ಕಿವಿ. ಕೆಲವರಿಗೆ ಕಿವಿಯೇ ಇಲ್ಲ. ಕೆಲವರಿಗೆ ಚೂಪಾದ ಕಿವಿ. ಕೆಲವರಿಗೆ ಮೇಲ್ಮುಖವಾದ ಮೂಗು. ಒಬ್ಬಳಿಗೆ ಬಹು ದೊಡ್ಡದಾದ ತಲೆ! ಒಬ್ಬಳಿಗೆ ಉದ್ದವಾದ ಕತ್ತು! ಒಬ್ಬಳಿಗೆ ತಲೆಯಲ್ಲಿ ಕೂದಲೇ ಇಲ್ಲ! ಮತ್ತೊಬ್ಬಳಿಗೆ ಕಂಬಳಿಯನ್ನು ಹೊದೆದುಕೊಂಡಂತೆ ಮೈಯೆಲ್ಲ ಕೂದಲು. ಉದ್ದವಾದ ಹಣೆ, ಕಿವಿ-

ಯುಳ್ಳವಳೊಬ್ಬಳು! ಭಾರಿ ಹೊಟ್ಟೆ, ಜೋಲುದುಟಿ, ಜೋಲು ಮುಖ, ಜೋಲು ಮೊಳಕಾಲುಳ್ಳವರು ಕೆಲವರು! ಒಬ್ಬಳು ಕುಳ್ಳಿ, ಒಬ್ಬಳು ಲಂಬಿ, ಇನ್ನೊಬ್ಬಳು ಗೂನಿ! ಮತ್ತೊಬ್ಬಳು ವಿಕಾರಿ, ಗಿಡ್ಡಿ! ಮತ್ತೊಬ್ಬಳು ಘೋರ ರೂಪಿ, ಮಗದೊಬ್ಬಳು ಸೊಟ್ಟಮೋರೆಯವಳು! ಒಬ್ಬಳು ಕೆಂಗಣ್ಣಿನವಳು, ಇನ್ನೊಬ್ಬಳು ಕೆಟ್ಟ ಮೋರೆಯವಳು!

"ಅವರೆಲ್ಲರೂ ಕಪ್ಪು ಬಣ್ಣದವರು, ಕೋಪಿಷ್ಠರು, ಜಗಳಗಂಟರು! ಕೆಲವರ ಮುಖಗಳು ಹಂದಿ, ಜಿಂಕೆ, ಹುಲಿ, ಕೋಣ, ಮೇಕೆ ಮತ್ತು ನರಿಗಳ ಮುಖಗಳಂತೆ ಇದ್ದವು! ಕೆಲವು ರಾಕ್ಷಸಿಯರ ಪಾದಗಳು ಆನೆ, ಒಂಟೆ, ಕುದುರೆಗಳ ಪಾದಗಳನ್ನು ಹೋಲುತ್ತಿದ್ದವು! ಕೆಲವರ ತಲೆ ದೇಹದಲ್ಲಿ ಹುದುಗಿಹೋಗಿತ್ತು! ಕೆಲವರಿಗೆ ಒಂದೇ ಕೈ! ಕೆಲವರಿಗೆ ಒಂದೇ ಕಾಲು! ಎಷ್ಟೋ ರಾಕ್ಷಸಿಯರ ಕಿವಿಗಳು ಕತ್ತೆ, ಕುದುರೆ, ಎತ್ತು, ಆನೆ ಮತ್ತು ಸಿಂಹದ ಕಿವಿಗಳಂತೆ ಇದ್ದವು! ಮೂಗಿಲ್ಲದವರೂ ಉದ್ದ ಮೂಗಿನವರೂ ಅಡ್ಡಮೂಗಿನವರೂ ಸೊಟ್ಟಮೂಗಿನವರೂ ಆನೆಯ ಸೊಂಡಿಲಿನಂತಹ ಮೂಗಿನವರೂ ಹಣೆಯ ಬಳಿ ಉಸಿರಾಡುವ ಮೂಗಿನವರೂ ಇದ್ದರು! ಎತ್ತಿಗಿರುವಂತೆ ಕೆಲವರ ಪಾದಗಳಿಗೆ ಗೊರಸುಗಳಿದ್ದವು! ಕೆಲವರ ತಲೆಗೂದಲು ಹೆಜ್ಜೆಯವರೆಗೂ ಜೋಲುತ್ತಿತ್ತು. ದಪ್ಪಕುತ್ತಿಗೆಯವರೂ ದೊಡ್ಡ ಮೊಲೆಯವರೂ ಅನೇಕರಿದ್ದರು. ಕೆಲವರ ಕಣ್ಣು ಬಹಳ ದೊಡ್ಡದು. ಕೆಲವರ ನಾಲಿಗೆ ಬಹಳ ಉದ್ದ. ಕೆಲವರಿಗೆ ಹಸುವಿನಂತಹ ಮೋರೆ! ಕೆಲವರಿಗೆ ಹಂದಿಯ ಮೋರೆ! ಕೆಲವರಿಗೆ ಕೆಂಪು ಕೂದಲು! ಅವರು ಮದ್ಯವನ್ನು ಕುಡಿಯುತ್ತ, ಮಾಂಸವನ್ನು ತಿನ್ನುತ್ತ, ಮೈಮೇಲೆ ರಕ್ತವನ್ನು ಹೊಯ್ದುಕೊಂಡಿದ್ದರು!" (ಸುಂದರ, ೧೭:೫-೧೬).

ಇಂಥ ರಾಕ್ಷಸಿಯರ ಮಧ್ಯದಲ್ಲಿ ದೇವಮಾಯೆಯೋ ಎಂಬಂತೆ ಅನುಪಮ ಸುಂದರಿಯಾದ ಸೀತೆ! ಸೀತಾಸೌಂದರ್ಯದೆದುರಿಗೆ ಆ ರಾಕ್ಷಸಿಯರ ಕುರೂಪ ಇನ್ನೂ ಹೆಚ್ಚಾಗಿ ಎದ್ದು ಕಾಣುತ್ತದೆ!

ಅಯೋಮುಖಿ

ಶೂರ್ಪಣಖಿಯಂತಹವಳೇ ಇನ್ನೊಬ್ಬಳು ಅಯೋಮುಖಿ. ಅವಳ ಕಥೆ ಬಹಳ ಸ್ವಲ್ಪವೇ ಆದರೂ ದಂಡಕಾರಣ್ಯದಲ್ಲಿ ಈ ಬಗೆಯ ಲಜ್ಜೆಗೆಟ್ಟ ರಾಕ್ಷಸಿಯರು ಹಲವರಿದ್ದರೆಂಬುದಕ್ಕೆ ಇದು ಸೂಚನೆ. ಸೀತಾಪಹಾರದಿಂದ ಕಂಗೆಟ್ಟ ಶ್ರೀರಾಮನು ಕಾಡಿನಲ್ಲಿ ಹೋಗುತ್ತಿದ್ದಾನೆ. ಲಕ್ಷ್ಮಣನು ಅಣ್ಣನ ದುಃಖಾತಿರೇಕದಿಂದ ದಿಗ್ಭ್ರಾಂತನಾಗಿದ್ದಾನೆ. ಇಬ್ಬರೂ ಕ್ರೌಂಚಾರಣ್ಯ-ವನ್ನು ದಾಟಿ ದಕ್ಷಿಣಕ್ಕೆ ಹೋಗುತ್ತಿದ್ದಾರೆ. ಅಲ್ಲೊಬ್ಬ ವಿಕೃತಾನನೆಯಾದ ರಾಕ್ಷಸಿಯು ಗೋಚರಿಸಿದಳು. ಅವಳಾದರೋ ಒರಟು ಚರ್ಮದ ಕರಾಳಿ; ಲಂಬೋದರಿ; ಕೈಗೆ ಸಿಕ್ಕಿದ ಮೃಗಗಳ ಮಾಂಸವನ್ನು ತಿನ್ನುತ್ತ ಬೀಭತ್ಸಾ-ಕಾರಳಾಗಿದ್ದಳು. ತಲೆಗೂದಲು ಬಿಚ್ಚಿ ಹರಡಿತ್ತು. ಅವಳೇ ಅಯೋಮುಖಿ! ಈ ಸಲ ಲಕ್ಷ್ಮಣನಿಗೆ ವಕ್ರಗತಿ ಕಾದಿತ್ತು. ಅವನು ಶ್ರೀರಾಮನ ಮುಂದುಗಡೆ ಹೋಗುತ್ತಿದ್ದ. ಮೊದಲು ಅಯೋಮುಖಿಯ ದೃಷ್ಟಿಗೆ ಬಿದ್ದವನು ಲಕ್ಷ್ಮಣ. ಅಯೋಮುಖಿಯು ಓಡುತ್ತ ಬಂದು ಲಕ್ಷ್ಮಣನನ್ನು ಅಪ್ಪಿಕೊಂಡಳು! "ಬಾ ರಮಿಸೋಣ!" ಎಂದಳು. "ಪ್ರಿಯ, ನಾನು ಲಭಿಸಿದ್ದು ನಿನಗೊಂದು ಲಾಭ!" ಎಂದಳು. "ನಾಥ, ಗಿರಿಶೃಂಗ-ಗಳಲ್ಲಿಯೂ ನದೀ ಪುಲಿನಗಳಲ್ಲಿಯೂ ನಿನ್ನ ಆಯುಷ್ಯವನ್ನೆಲ್ಲ ನನ್ನೊಡನೆ ಕಳೆಯಬಹುದು!" ಎಂದಳು. ಲಕ್ಷ್ಮಣನಿಗೆ ತಡೆಯಲಾರದ ಕೋಪ ಬಂದಿತು. ಖಡ್ಗವನ್ನೆಳೆದು ಅವಳ ಕಿವಿ ಮೂಗುಗಳನ್ನು ಕೊಯ್ದನು! "ಎಂತಹ ಭಂಡ ಜನರು ಈ ರಾಕ್ಷಸಿಯರು!" ಎಂದು ಲಕ್ಷ್ಮಣನಿಗೆ ಅನ್ನಿಸಿರಬೇಕು. ಶೂರ್ಪಣಖಿಗಾದ ಗತಿಯೇ ಅಯೋಮುಖಿಗೆ ಆಯಿತು. ಈ ಸಲ ಲಕ್ಷ್ಮಣನು ಇನ್ನೂ ಒಂದು ಹೆಜ್ಜೆ ಮುಂದಿಟ್ಟು, ಅವಳ ಸ್ತನಗಳನ್ನು ಕತ್ತಿರಿಸನು! ಅವಳು 'ಹೋ' ಎಂದು ಕೂಗುತ್ತ ಓಡಿ ಹೋದಳು! (ಅರಣ್ಯ ಕಾಂಡ, ೬೯:೧೮).

ಮಂಥರೆ

ಮಂಥರೆಯ ಚಿತ್ರಣ ಹಾಸ್ಯಪೋಷಕವಾದುದು. ಅವಳು ಕೈಕೇಯಿಯ ತವರು ಮನೆಯಿಂದ ಕೈಕೇಯಿಯೊಡನೆ ದಶರಥನ ಅರಮನೆಗೆ ಬಂದು ಸೇರಿಕೊಂಡಿದ್ದಳು. ಕೈಕೇಯಿಯನ್ನು ಬಾಲ್ಯದಿಂದಲೂ ಸೇವಿಸುತ್ತಿದ್ದುದ-ರಿಂದ ಸಲಿಗೆ ಹೆಚ್ಚಾಗಿತ್ತು. ಅವಳೊಬ್ಬ ಮುದುಕಿ. ಸೊಂಟ ಬಾಗಿತ್ತು. ಅವಳು ಕುಬ್ಜೆ - ಗೂನಿ ಎಂದೇ ಅರಮನೆಯಲ್ಲಿ ಪ್ರಸಿದ್ಧಳಾಗಿದ್ದಳು. ವಾಲ್ಮೀಕಿ ಮುನಿಗಳು ಅವಳ ಪರಿಚಯವನ್ನು ಹೇಳುವುದೇ ಸೊಗಸಾಗಿದೆ. (ಅಯೋಧ್ಯಾ ಕಾಂಡ, ೭:೧).

ಜ್ಞಾತಿದಾಸೀ ಯತೋಜಾತಾ
ಕೈಕೇಯ್ಯಾಸ್ತು ಸಹೋಷಿತಾ ॥

ಯತೋಜಾತಾ = ಎಲ್ಲಿಯೋ ಹುಟ್ಟಿದವಳು! ಕುಲಗೋತ್ರ-ಗಳೊಂದೂ ತಿಳಿಯದು. ಕೈಕೇಯಿಯ ಜೊತೆಗೇ ಇರುತ್ತಿದ್ದ ಒಬ್ಬ ದಾಸಿ.

ಶ್ರೀರಾಮನ ಪಟ್ಟಾಭಿಷೇಕ ವೃತ್ತಾಂತವು ತಿಳಿದೊಡನೆ ಅವಳ ಹೊಟ್ಟೆಗೆ ಬೆಂಕಿ ಬಿದ್ದಂತಾಯಿತು. ತಡಮಾಡದೆ ನೆಟ್ಟಗೆ ಕೈಕೇಯಿಯ ಸಮೀಪಕ್ಕೆ ಹೋದಳು. ಮನೆಗೆ ಬೆಂಕಿ ಬಿದ್ದು ಉರಿಯುತ್ತಿದ್ದರೆ ಎಷ್ಟು ಗಾಬರಿ, ಚಿಂತೆಗಳಾಗುವುವೋ ಅಷ್ಟು ಗಾಬರಿ, ಚಿಂತೆಗಳಾದುವು ಕುಬ್ಜೆಗೆ. ಕೈಕೇಯಿಯನ್ನು ಕೂಗುತ್ತಾ ಹೋದಳು. ''ಉತ್ತಿಷ್ಠ ಮೂಢೇ ಕಿಂ ಶೇಷೇ ಭಯಂ ತ್ವಾಮಭಿವರ್ತತೇ''- ಏಳು ಏಳು, ಮೂಢೇ ಇನ್ನೂ ಮಲಗಿರುವೆಯಾ? ಭಯವು ನಿನ್ನನ್ನು ಸುತ್ತುಗಟ್ಟಿದೆ- ಎಂದಳು. ತನ್ನ ಜಾಣತನವನ್ನೆಲ್ಲ ಉಪಯೋಗಿಸಿ ಕೈಕೇಯಿಯ ಮನಸ್ಸನ್ನು ಕಲುಷಿತ-ಗೊಳಿಸಿದಳು. ರಾಜನು ಕೊಟ್ಟಿದ್ದ ವರದ್ವಯವನ್ನು ನೆನಪುಮಾಡಿ ಮುಂದಿನ ಹವಣಿಕೆಯನ್ನು ಹೇಳಿ ಕೊಟ್ಟಳು. ಗೂನಿಯ ಮುನ್ನೆಚ್ಚರಿಕೆ-ಯನ್ನು ನೋಡಿ ಕೈಕೇಯಿ ಸಂತುಷ್ಟಳಾದಳು. ವಿಪತ್ತಿನಿಂದ ಪಾರಾಗುವ

ಉಪಾಯವನ್ನು ಕೇಳಿ ಕೈಕೇಯಿ ಹಿಗ್ಗಿದಳು. ಅವಳು ಹರ್ಷದಿಂದ ಗೂನಿಯನ್ನು ಹೊಗಳುವ ವಿಧಾನವನ್ನು ಕೇಳಿ:

‘‘ಎಲೆ ಗೂನಿ, ನೀನು ಇಷ್ಟು ಬುದ್ಧಿವಂತೆ, ಇಷ್ಟು ಚೆನ್ನಾಗಿ ಮಾತನಾಡುವೆಯೆಂದು ನನಗೆ ಗೊತ್ತೇ ಇರಲಿಲ್ಲ. ಈ ಜಗತ್ತಿನಲ್ಲಿರುವ ಕುಬ್ಜೆಯರಲ್ಲಿ ನೀನೇ ಬುದ್ಧಿಶಾಲಿ. ಈ ಅಂತಃಪುರದಲ್ಲಿ ಎಷ್ಟೋ ಮಂದಿ ಗೂನಿಯರಿದ್ದಾರೆ. ಅವರೆಲ್ಲರೂ ಪಾಪಿಗಳು, ಕೆಲಸಕ್ಕೆ ಬಾರದವರು. ಮಂಥರೆ, ನೀನೊಬ್ಬಳೇ ಕಾರ್ಯದಕ್ಷಳು. ನೀನು ಗಾಳಿಯಿಂದ ಬಾಗಿದ ತಾವರೆಯ ಬಳ್ಳಿಯಂತಿರುವೆ. ನಿನ್ನ ಎದೆಯು ಹೆಮ್ಮೆಯಿಂದ ಮುಂದೆ ಚಾಚಿಕೊಂಡಿದೆ! ಸುಂದರವಾದ ನಾಭಿಯುಳ್ಳ ನಿನ್ನ ಉದರವು ಎದೆಯ ಉನ್ನತಿಯನ್ನು ಕಂಡು ನಾಚಿಕೆಯಿಂದ ಕೊರಗಿ ಕೃಶವಾಗಿದೆ! ನಿನ್ನ ಮುಖವು ನಿರ್ಮಲ ಚಂದ್ರನಂತೆ ಸುಂದರವಾಗಿದೆ! ಆಹಾ, ನೀನು ಎಷ್ಟು ಚೆನ್ನಾಗಿ ಕಾಣಿಸುತ್ತೀಯೆ, ಮಂಥರೆ! ಸ್ವಚ್ಛವಾದ ಜಘನವು ಡಾಬಿನ ಎಳೆಗಳಿಂದ ಎಷ್ಟು ಮನೋಹರವಾಗಿ ಒಪ್ಪುತ್ತಿದೆ! ನಿನ್ನ ಮೊಳಕಾಲುಗಳೂ ಪಾದಗಳೂ ಬಹು ಮಾಟವಾಗಿವೆ! ನಿನ್ನ ವಿಶಾಲವಾದ ತೊಡೆಗಳಿಗೂ ಈ ಬಿಳಿಯ ದುಕೂಲಕ್ಕೂ ಎಂಥ ಹೊಂದಿಕೆ! ಮಂಥರೆ, ನನ್ನೆದುರಿಗೆ ನೀನು ಹೋಗುತ್ತಿದ್ದರೆ ರಾಜಹಂಸಿಯಂತೆ ಕಾಣುತ್ತೀಯೆ! ಶಂಬರಾಸುರನಲ್ಲಿದ್ದ ಮಾಯೆಗಳೆಲ್ಲವೂ ನಿನ್ನಲ್ಲಿವೆ. . ಅವನಿಗಿಂತ ಸಾವಿರಾರು ಹೆಚ್ಚು ಮಾಯೆಗಳನ್ನು ನೀನು ಬಲ್ಲೆ. ಈ ಬುದ್ಧಿಶಕ್ತಿ, ಈ ರಾಜನೀತಿ, ಈ ಮಾಯೆಗಳು - ಇಷ್ಟು ದಿನ ಎಲ್ಲಿದ್ದವೋ? ರಥದ ಮೂಕಿಯಂತೆ ಉಬ್ಬಿಕೊಂಡಿರುವ ನಿನ್ನ ಗೂನಿನ ಬೆನ್ನುಗಂಟಿನಲ್ಲಿ ನೆಲೆಸಿದ್ದಿರಬೇಕು! ಮಂಥರೆ, ಭರತನಿಗೆ ಪಟ್ಟಾಭಿಷೇಕವಾದಮೇಲೆ ರಾಮನು ಕಾಡಿಗೆ ಹೋದಮೇಲೆ, ಈ ಗೂನು ಡುಬ್ಬಕ್ಕೆ ಒಂದು ಚಿನ್ನದ ಸರವನ್ನು ಮಾಡಿಸಿ ಹಾಕಿಸುತ್ತೇನೆ! ಅಪರಂಜಿಯ ತಗಡಿನಿಂದ ಇದನ್ನು ಹೊದಿಸುತ್ತೇನೆ!

ಕುಬ್ಜೆ, ನಿನ್ನ ಮುಖಕ್ಕೆ ಚಿತ್ತಾರವಿರುವ ಬಂಗಾರದ ಒಂದು ತಿಲಕವನ್ನೂ, ಅನೇಕ ಒಡವೆಗಳನ್ನೂ ಮಾಡಿಸಿ ಕೊಡುತ್ತೇನೆ. ಬೆಲೆಬಾಳುವ ಸೀರೆಗಳನ್ನು ಕೊಡಿಸುತ್ತೇನೆ. ಅಪ್ಸರೆಯಂತೆ ನೀನು ತಿರುಗಾಡಿಕೊಂಡಿರಬಹುದು. ಚಂದ್ರನೊಡನೆ ಸ್ಪರ್ಧಿಸುವ ನಿನ್ನ ಮುಖದ ಚೆಲುವು ಯಾರಿಗೂ ಇಲ್ಲ. ಇಲ್ಲಿರುವ ಕುಬ್ಜೆಯರು ನಿನ್ನ ಪಾದಸೇವೆ ಮಾಡುವರು!''

ಕುಬ್ಜೇ ತ್ವಾಂ ನಾವಜಾನಾಮಿ ಶ್ರೇಷ್ಠಾಂ ಶ್ರೇಷ್ಠಾಭಿಧಾಯಿನೀಮ್ ।
ಪೃಥಿವ್ಯಾಮಸಿ ಕುಬ್ಜಾನಾಮುತ್ತಮಾ ಬುದ್ಧಿನಿಶ್ಚಯೇ ॥

ತ್ವಮೇವ ತು ಮಮಾರ್ಥೇಷು ನಿತ್ಯಯುಕ್ತಾ ಹಿತೈಷಿಣೀ ।
ನಾಹಂ ಸಮವಬುಧ್ಯೇಯಂ ಕುಬ್ಜೇ ರಾಜ್ಞಶ್ಚಿಕೀರ್ಷಿತಮ್ ॥

ಸಂತಿ ದುಃಸಂಸ್ಥಿತಾಃ ಕುಬ್ಜಾ ವಕ್ರಾಃ ಪರಮದಾರುಣಾಃ ॥
ತ್ವಂ ಪದ್ಮಮಿವ ವಾತೇನ ಸಂನತಾ ಪ್ರಿಯದರ್ಶನಾ ॥

ಉರಸ್ತೇಽಭಿನಿವಿಷ್ಟಂ ವೈ ಯಾವತ್‌ಸ್ಕಂಧಂ ಸಮುನ್ನತಮ್ ।
ಅಧಸ್ತಾಚ್ಚೋದರಂ ಶಾತಂ ಸುನಾಭಮಿವ ಲಜ್ಜಿತಮ್ ॥

ಪರಿಪೂರ್ಣಂ ತು ಜಘನಂ ಸುಪೀನೌ ಚ ಪಯೋಧರೌ ।
ವಿಮಲೇಂದುಸಮಂ ವಕ್ತ್ರಮಹೋ ರಾಜಸಿ ಮಂಥರೇ ॥

ಜಘನಂ ತವ ನಿರ್ಮೃಷ್ಟಂ ರಶನಾದಾಮಶೋಭಿತಮ್ ।
ಜಂಘೇ ಭೃಶಮುಪನ್ಯಸ್ತೇ ಪಾದೌ ಚಾಪ್ಯಾಯತಾವುಭೌ ॥

ತ್ವಮಾಯತಾಭ್ಯಾಂ ಸಕ್ಥಿಭ್ಯಾಂ ಮಂಥರೇ ಕ್ಷೌಮವಾಸಿನೀ ।
ಅಗ್ರತೋ ಮಮ ಗಚ್ಛಂತೀ ರಾಜಹಂಸೀವ ರಾಜಸೇ ॥

ಆಸನ್ ಯಾ ಶಂಬರೇ ಮಾಯಾಃ ಸಹಸ್ರಮಸುರಾಧಿಪೇ ।
ಸರ್ವಾಸ್ತ್ವಯಿ ನಿವಿಷ್ಟಾಸ್ತಾ ಭೂಯಶ್ಚಾನ್ಯಾಃ ಸಹಸ್ರಶಃ ॥

ತವೇದಂ ಸ್ಥಗು ಯದ್ದೀರ್ಘಂ ರಥಘೋಣಮಿವಾಯತಮ್ ।
ಮತಯಃ ಕ್ಷತ್ರವಿದ್ಯಾಶ್ಚ ಮಾಯಾಶ್ಚಾತ್ರ ವಸಂತಿ ತೇ ॥

ಅತ್ರ ತೇ ಪ್ರತಿಮೋಕ್ಷ್ಯಾಮಿ ಮಾಲಾಂ ಕುಬ್ಜೇ ಹಿರಣ್ಮಯೀಮ್ ।
ಅಭಿಷಿಕ್ತೇ ಚ ಭರತೇ ರಾಘವೇ ಚ ವನಂ ಗತೇ ॥

ಜಾತ್ಯೇನ ಚ ಸುವರ್ಣೇನ ಸುನಿಷ್ಟಪ್ತೇನ ಮಂಥರೇ ।
ಲಬ್ಧಾರ್ಥಾ ಚ ಪ್ರತೀತಾ ಚ ಲೇಪಯಿಷ್ಯಾಮಿ ತೇ ಸ್ಥಗು ॥

ಮುಖೇ ಚ ತಿಲಕಂ ಚಿತ್ರಂ ಜಾತರೂಪಮಯಂ ಶುಭಮ್ ।
ಕಾರಯಿಷ್ಯಾಮಿ ತೇ ಕುಬ್ಜೇ ಶುಭಾನ್ಯಾಭರಣಾನಿ ಚ ॥

ಪರಿಧಾಯ ಶುಭೇ ವಸ್ತ್ರೇ ದೇವತೇವ ಚರಿಷ್ಯಸಿ ।
ಚಂದ್ರಮಾಹ್ವಯಮಾನೇನ ಮುಖೇನಾಪ್ರತಿಮಾನನಾ ॥

ಗಮಿಷ್ಯಸಿ ಗತಿಂ ಮುಖ್ಯಾಂ ಗರ್ಹಯಂತೀ ದ್ವಿಷಜ್ಜನಮ್ ।
ತವಾಪಿ ಕುಬ್ಜಾಃ ಕುಬ್ಜಾಯಾಃ ಸರ್ವಾಭರಣಭೂಷಿತಾಃ ।

ಪಾದೌ ಪರಿಚರಿಷ್ಯಂತಿ ಯಥೈವ ತ್ವಂ ಸದಾ ಮಮ ॥

- ಅಯೋಧ್ಯಾ ೯:೩೮-೫೧

ಆ ಗೂನಿಯು ಮತ್ತೆ ಕಾಣಿಸಿಕೊಳ್ಳುವುದು ಒಂದೇ ಸಾರಿ. ಶ್ರೀರಾಮನು ವನಕ್ಕೆ ಹೋಗಿದ್ದಾನೆ. ಭರತನು ಅಯೋಧ್ಯೆಗೆ ಬಂದು ದಶರಥನ ಉತ್ತರ ಸಂಸ್ಕಾರಗಳನ್ನೆಲ್ಲ ಮಾಡಿದ್ದಾನೆ. ಶ್ರೀರಾಮನನ್ನು ಕರೆ ತರಬೇಕೆಂಬ ಸನ್ನಾಹದಲ್ಲಿ ಶತ್ರುಘ್ನನೊಡನೆ ಮಾತನಾಡುತ್ತಿದ್ದಾನೆ. ಆಗ ಸರ್ವಾಭರಣ ಭೂಷಿತಳಾದ ಕುಬ್ಜೆ ಕಾಣಿಸಿಕೊಂಡಳು!

''ಕುಬ್ಜೆಯು ಸರ್ವಾಭರಣಭೂಷಿತಳಾಗಿ ಪೂರ್ವದಿಕ್ಕಿನ ಬಾಗಿಲಿನಲ್ಲಿ ಪಕ್ಕನೆ ಕಾಣಿಸಿಕೊಂಡಳು! ಅವಳು ಶ್ರೀಗಂಧವನ್ನು ಮೈಗೆ ತೊಡೆದು ಕೊಂಡು ರಾಜಯೋಗ್ಯವಾದ ಪಟ್ಟೆಯ ಸೀರೆಯನ್ನುಟ್ಟಿದ್ದಳು. ನಾನಾ ಬಗೆಯ ಒಡವೆಗಳಿಂದ ತನ್ನನ್ನು ವಿಚಿತ್ರವಾಗಿ ಸಿಂಗರಿಸಿಕೊಂಡಿದ್ದಳು. ಚಿತ್ರವರ್ಣದ ಅಲಂಕಾರಗಳನ್ನು ಧರಿಸಿದ್ದಳು. ಸೊಂಟಕ್ಕೆ ಸೊಗಸಾದ ಡಾಬನ್ನು ಹಾಕಿಕೊಂಡಿದ್ದಳು!'' (ಅಯೋದ್ಯಾ ಕಾಂಡ, ೭೮:೫, ೬)

ಮೂರ್ತಿಯು ಸುಂದರವಾಗಿದ್ದರೆ ಒಡವೆಗಳು ಸೌಂದರ್ಯವನ್ನು ಹೆಚ್ಚಿಸುತ್ತವೆ. ಮೂರ್ತಿಯೇ ವಿಕಾರವಾಗಿದ್ದರೆ ಒಡವೆಗಳು ವಿಡಂಬನೆಯಾಗುತ್ತವೆ. ಮುದುಕಿಯೂ ಕುರೂಪಿಯೂ ಆಗಿ ಬೆನ್ನು ಬಾಗಿರುವ ಕುಬ್ಜೆ ಪಟ್ಟೆಯ ಸೀರೆಯನ್ನುಟ್ಟು ಮೈ ತುಂಬ ಒಡವೆಗಳನ್ನು ಧರಿಸಿದ್ದರೆ ಹೇಗೆ ಕಂಡಾಳು? ವಾಲ್ಮೀಕಿ ಮುನಿಗಳು ತಕ್ಕ ಉಪಮೆಯನ್ನು ಕೊಟ್ಟಿದ್ದಾರೆ! ''ರಜ್ಜುಬದ್ಧೇವ ವಾನರೀ'' ಹಗ್ಗದಲ್ಲಿ ಕಟ್ಟಿದ ಹೆಣ್ಣು ಕೋತಿಯಂತೆ ಕಂಡಳು! ಕೋತಿಯಾಡಿಸುವವರು, ಕೋತಿಯನ್ನಲಂಕರಿಸಿ ಹಗ್ಗದಲ್ಲಿ ಕಟ್ಟಿ ಹಿಡಿದುಕೊಂಡಿರುತ್ತಾರಲ್ಲವೆ?

ಭರತನಿಗೆ ಒಳ್ಳೆಯದಾಗಲಿ

ಭರತನು ಸೇನಾಸಮೇತನಾಗಿ ಚಿತ್ರಕೂಟಕ್ಕೆ ಹೊರಟಿದ್ದಾನೆ. ಶ್ರೀರಾಮನನ್ನು ಕರೆತರಬೇಕೆಂಬುದು ಅವನ ಉದ್ದೇಶ. ದಾರಿಯಲ್ಲಿ ಭರದ್ವಾಜ ಮುನಿಗಳ ಸಂದರ್ಶನವಾಗುತ್ತದೆ. ಭರತನ ಭ್ರಾತೃಪ್ರೇಮಕ್ಕೆ ಮೆಚ್ಚಿ ಮುನಿಗಳು ಒಂದು ವೈಭವದ ಔತಣವನ್ನೇರ್ಪಡಿಸಿದ್ದಾರೆ. ತಪೋಮಹಿಮೆಯಿಂದ ಸ್ವರ್ಗಭೋಗವನ್ನೂ ಮೀರಿಸಿದ ಭೋಗ ಸಾಮಗ್ರಿಗಳನ್ನೊದಗಿಸಿದ್ದಾರೆ. ಭರತನ ಸೈನಿಕರು ಉಂಡು, ತಿಂದು, ಕುಡಿದು, ನೋಡಿ ನಲಿಯುತ್ತಿದ್ದಾರೆ. ಆ ಸೈನಿಕರ ಆಮೋದವನ್ನೂ ಅವರ ಮನೋಭಾವವನ್ನೂ ಕವಿಗಳು ಹೀಗೆ ಚಿತ್ರಿಸುತ್ತಾರೆ: ಆ ಸೈನಿಕರು ಬೇಕು ಬೇಕಾದ ಭೋಗಗಳನ್ನೆಲ್ಲ ಅನುಭವಿಸಿದರು. ಸುಗಂಧದ್ರವ್ಯಗಳನ್ನು ಪೂಸಿಕೊಂಡರು. ಅಪ್ಸರೆಯರೊಡನೆ ನಲಿದರು. ಅಲ್ಲಿಂದ ಹೊರಡುವುದೇ ಅವರಿಗೆ ಬೇಡವೆನಿಸಿತು. ''ನಾವು ಅಯೋಧ್ಯೆಗೂ ಹೋಗುವುದಿಲ್ಲ, ದಂಡಕಾರಣ್ಯಕ್ಕೂ ಹೋಗುವುದಿಲ್ಲ. ಇಲ್ಲಿಯೇ ಇದ್ದುಬಿಡುತ್ತೇವೆ! ಭರತನಿಗೆ ಒಳ್ಳೆಯದಾಗಲಿ! ರಾಮನು ಸುಖವಾಗಿರಲಿ!'' ಎನ್ನುತ್ತಿದ್ದರು.

ನೈವಾಯೋಧ್ಯಾಂ ಗಮಿಷ್ಯಾಮಃ
ನ ಗಮಿಷ್ಯಾಮ ದಂಡಕಾನ್ ॥

ಕುಶಲಂ ಭರತಸ್ಯಾಸ್ತು
ರಾಮಾಯಾಸ್ತು ತಥಾ ಸುಖಮ್ ॥ - ಅಯೋಧ್ಯಾ ೯೧:೫೯

''ಸ್ವರ್ಗವೆಂದರೆ ಇದೇ ಸರಿ'' ಎಂದು ಅವರು ಕೂಗಾಡಿದರಂತೆ! ಹೂಮಾಲೆಗಳನ್ನು ಧರಿಸಿ ಗುಂಪು ಗುಂಪಾಗಿ ಸೇರಿ ಕುಣಿದರು! ನಕ್ಕರು! ಹಾಡಿದರು! ಇಲ್ಲಿಂದಲ್ಲಿಗೆ ಭರದಿಂದ ಓಡಿದರು! ಒಂದು ರಾತ್ರಿ ಭಾರಿ ವೈಭವ, ರಾತ್ರಿ ಕಳೆಯಿತು. ಅಪ್ಸರೆಯರೂ ಇಲ್ಲ. ಔತಣಕೂಟವೂ ಇಲ್ಲ! ಸೈನಿಕರು ಭರತನ ಹಿಂದೆ ಹೋದರು!

ವಾನರಲೋಕ

ರಾಮಾಯಣದಲ್ಲಿ ಕಪಿಲೋಕವೂ ರಾಕ್ಷಸಲೋಕವೂ ಹಾಸ್ಯಕ್ಕೆ ಆಲಂಬನವಾಗಿದೆ. ಕಪಿಗಳ ಚೇಷ್ಟೆ, ರಾಕ್ಷಸರ ವಿಕಾರ- ಇವು ಹಾಸ್ಯಕ್ಕೆ ಇಂಬುಗೊಡುತ್ತವೆ. ರಾಮಾಯಣದ ಕಪಿಗಳಲ್ಲಿ ಎರಡು ಜಾತಿಯುಂಟು. ಅಪ್ರಾಕೃತ ಕಪಿಗಳು, ಪ್ರಾಕೃತ ಕಪಿಗಳು. ದೇವತೆಗಳೇ ಕಪಿಗಳಾಗಿ ಜನಿಸಿದ ರಲ್ಲವೆ? ಇವರು ಮನುಷ್ಯರಂತೆ ಆಲೋಚಿಸುತ್ತಾರೆ, ಮಾತನಾಡುತ್ತಾರೆ. ವಿವೇಕ ವಿಚಾರಗಳೆಲ್ಲ ಮನುಷ್ಯರಿಗಿದ್ದಂತೆಯೇ. ಆದರೂ ಆಗಾಗ ಮಂಗಚೇಷ್ಟೆಯನ್ನೂ ಮಾಡುವುದುಂಟು. ಇವರಲ್ಲದೆ ಕಾಡಿನಲ್ಲಿ ಸಾಮಾನ್ಯ ಜಾತಿಯ ಮಂಗಗಳುಂಟು. ಅವನ್ನು ವಾಲ್ಮೀಕಿ ಮುನಿಗಳು ಪ್ರಾಕೃತ ವಾನರರೆಂದು ಕರೆದಿದ್ದಾರೆ. (ಯುದ್ಧಕಾಂಡ. ೭೪:೮೦)

ಹನುಮದಾದಿಗಳು ವಾನರಚೇಷ್ಟೆಯನ್ನು ಮಂಗತನವೆಂದು ಗೇಲಿ ಮಾಡುವುದುಂಟು. ಶ್ರೀರಾಮಲಕ್ಷ್ಮಣರನ್ನು ಮೊದಲು ನೋಡಿದಾಗ ಸುಗ್ರೀವನು ಹೆದರಿದ. ತನ್ನನ್ನು ದಂಡಿಸಲು ವಾಲಿಯು ಅವರನ್ನು ಕಳಿಸಿರಬಹುದೆಂದು ವ್ಯಾಕುಲನಾದ. ಅವನ ಉದ್ವೇಗವನ್ನು ಕಂಡು ಹನುಮಂತನು ಹೇಳುತ್ತಾನೆ:

ಅಹೋ ಶಾಖಾಮೃಗತ್ವಂ ತೇ
ವ್ಯಕ್ತಮೇವ ಪ್ಲವಂಗಮ ॥ - ಕಿಷ್ಕಿಂಧಾ ೨:೧೭

"ಆಹಾ! ವಾನರೇಂದ್ರ, ನೀನು ಶಾಖಾಮೃಗವೆಂಬುದು ಸ್ಪಷ್ಟ-ವಾಯಿತು!"

ಮದ್ಯದ ಅಮಲು

ಮಳೆಗಾಲವು ಕಳೆದರೂ ಸುಗ್ರೀವನು ಮಾತುಕೊಟ್ಟಂತೆ ಸೀತಾನ್ವೇಷಣೆಗೆ ನೆರವು ನೀಡಲು ಬರಲಿಲ್ಲವೆಂದು ಶ್ರೀರಾಮನು ಉದ್ವಿಗ್ನನಾದನು. ಲಕ್ಷ್ಮಣನು ಕೋಪೋದ್ರಿಕ್ತನಾಗಿ ಕಿಷ್ಕಿಂಧೆಗೆ ಹೋಗಿ ಸುಗ್ರೀವನನ್ನು ಎಚ್ಚರಿಸಲು ಧನುಷ್ಟಂಕಾರಮಾಡಿದನು. ಸುಗ್ರೀವನು ಲಕ್ಷ್ಮಣನನ್ನು ಸಂತೈಸುವುದಕ್ಕಾಗಿ ತಾರೆಯನ್ನು ಕಳಿಸಿದನು. ಅಂತಹ ಸಮಯದಲ್ಲಿ ಸ್ತ್ರೀಯನ್ನು ಮುಂದಿಡುವುದೇ ಜಾಣತನವೆಂದು ಅವನು ತೀರ್ಮಾನಿಸಿದನು. ಸುಗ್ರೀವನು ಮದ್ಯದ ಅಮಲಿನಲ್ಲಿದ್ದ. ತಾರೆಯೂ ಅಷ್ಟೆ! (ಕಿಷ್ಕಿಂಧಾ. ೩೩:೩೮)

"ಮದ್ಯಪಾನದಿಂದ ತಾರೆಯ ಕಣ್ಣಾಲಿಗಳು ತಿರುಗುತ್ತಿದ್ದವು. ನಡುವಿನಲ್ಲಿದ್ದ ಒಡ್ಯಾಣವೂ ಕೊರಳಲ್ಲಿದ್ದ ಚಿನ್ನದ ಸರವೂ ಸಡಿಲಿದ್ದವು. ಅವಳು ಎಡವುತ್ತ ಬಳುಕುತ್ತ ಲಕ್ಷ್ಮಣನ ಸಮೀಪಕ್ಕೆ ಬಂದಳು."

ಮದ್ಯದ ಅಮಲಿನಲ್ಲಿದ್ದ ಅವಳ ಮಾತಿನ ಧಾಟಿಯನ್ನು ನೋಡಿ: "ಲಕ್ಷ್ಮಣ, ಶ್ರೀರಾಮನ ಕೋಪಕ್ಕೆ ಕಾರಣವೇನೆಂಬುದನ್ನೂ ನಾನು ಬಲ್ಲೆ. ಅವನ ಕಾರ್ಯವು ವಿಳಂಬಿಸುತ್ತಿದೆಯೆಂಬುದನ್ನೂ ಬಲ್ಲೆ. ಈಗ ನಮ್ಮ ಕರ್ತವ್ಯವೇನೆಂಬುದನ್ನೂ ಬಲ್ಲೆ. ಮನ್ಮಥನ ಬಲವು ಎಷ್ಟು ದುರ್ವಾರವೆಂಬುದನ್ನೂ ಬಲ್ಲೆ. ಸುಗ್ರೀವನು ಯಾರಲ್ಲಿ ಆಸಕ್ತನಾಗಿರುವನೆಂಬುದನ್ನೂ ಬಲ್ಲೆ!" ಎಂದು ಉಪಕ್ರಮಿಸಿದಳು. (ಕಿಷ್ಕಿಂಧಾ ಕಾಂಡ, ೩೩:೫೩-೫೮). ಆಮೇಲೆ- "ಲಕ್ಷ್ಮಣ, ನಿನಗೆ ಕಾಮತಂತ್ರದ ಪರಿಚಯವಿಲ್ಲ!" ಎಂದಳು. ಲಕ್ಷ್ಮಣನಿಗೆ ಕಾಮತಂತ್ರದಲ್ಲಿ ಆಸಕ್ತಿಯಿದ್ದರೆ ಒಂಟಿಯಾಗಿ ಅರಣ್ಯಕ್ಕೆ ಬರುತ್ತಿದ್ದನೆ! ಶೂರ್ಪಣಖಿ ಅಯೋಮುಖಿ-

ಯರನ್ನು ದಂಡಿಸುತ್ತಿದ್ದನೆ! ತಾರೆಯ ವಾಗ್ಜಾಲದಿಂದ ಲಕ್ಷ್ಮಣನ ಕೋಪ ಇಳಿಯಿತು. ಅವಳ ಪ್ರಾರ್ಥನೆಯಂತೆ ಲಕ್ಷ್ಮಣನು ಸುಗ್ರೀವನ ಅಂತಃಪುರವನ್ನು ಪ್ರವೇಶಿಸಿದನು. ಪ್ರವೇಶಿಸಿ ನೋಡುತ್ತಾನೆ, ಸುಗ್ರೀವನು ರುಮೆಯನ್ನು ಆಲಂಗಿಸಿಕೊಂಡು ಕುಳಿತಿದ್ದಾನೆ!

ಲಕ್ಷ್ಮಣನು ಅಂತಹ ದೃಶ್ಯವನ್ನು ನಿರೀಕ್ಷಿಸಿರಲಿಲ್ಲ. ಲಕ್ಷ್ಮಣನು ಒಳಗೆ ಬಂದಾನೆಂದು ಸುಗ್ರೀವನೂ ಊಹಿಸಿರಲಿಲ್ಲ. ಇಬ್ಬರಿಗೂ ದಂಗುಬಡಿದಂತಾಗಿ ಕಣ್ಣರಳಿಸಿ ಒಬ್ಬರನ್ನೊಬ್ಬರು ನೋಡಿದರು:

ದದರ್ಶ ಸೌಮಿತ್ರಿಮದೀನಸತ್ತ್ವಂ
ವಿಶಾಲನೇತ್ರಃ ಸುವಿಶಾಲನೇತ್ರಮ್ ॥ - ಕಿಷ್ಕಿಂಧಾ ೩೩:೬೬

ಹನುಮಂತನ ವಾನರತ್ವ

ಕಪಿಚೇಷ್ಟೆಯು ಯಾವಾಗಲೂ ಹಾಸ್ಯಕರವಾದದ್ದೇ. ಹನುಮಂತನಲ್ಲಿಯೂ ಅಂಥ ಚೇಷ್ಟೆಯನ್ನು ವಾಲ್ಮೀಕಿ ಮುನಿಗಳು ವರ್ಣಿಸುತ್ತಾರೆ. ರಾವಣಾಂತಃಪುರದಲ್ಲಿ ಸೀತೆಯನ್ನು ಹುಡುಕುತ್ತಿರುವಾಗ ಹನುಮಂತನಿಗೆ ಮಂಡೋದರಿ ಗೋಚರಿಸಿದಳು. ಅವಳೇ ಸೀತೆಯಾಗಿರಬೇಕೆಂದು ಹನುಮಂತನ ತರ್ಕ. 'ತರ್ಕಯಾಮಾಸ ಸೀತೇತಿ ರೂಪಯೌವನಸಂಪದಾ'. ಹನುಮಂತನ ಆನಂದವನ್ನೇನು ವರ್ಣಿಸುವುದು?

ಆಸ್ಫೋಟಯಾಮಾಸ ಚುಚುಂಬ ಪುಚ್ಛಮ್
ನನಂದ ಚಿಕ್ರೀಡ ಜಗೌ ಜಗಾಮ ।
ಸ್ತಂಭಾನರೋಹನ್ನಿಪಪಾತ ಭೂಮೌ
ನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಮ್ ॥

- ಸುಂದರ ೧೦:೫೪

''ಹನುಮಂತನು ಹರ್ಷದಿಂದ ಬಾಲವನ್ನು ಬಡಿದನು! ಬಾಲಕ್ಕೆ ಮುತ್ತು ಕೊಟ್ಟನು! ಹಿರಿಹಿಗ್ಗುತ್ತ ಆಟವಾಡಿದನು; ಹು ಹು ಹೂ ಎಂದು

ಹಾಡಿದನು. ಇಲ್ಲಿಂದಲ್ಲಿಗೆ ತಿರುಗಾಡಿದನು! ಕಂಬಗಳನ್ನು ಹತ್ತಿ ಕೆಳಗೆ ಧುಮುಕಿದನು! ಹೀಗೆ ತನ್ನ ಕಪಿಸ್ವಭಾವವನ್ನು ತೋರಿಸಿಬಿಟ್ಟನು!''

ಆನಂದಾತಿಶಯದಲ್ಲಿ ಕಪಿಯು ಹೇಗೆ ನಡೆದುಕೊಳ್ಳುವುದೆಂಬುದನ್ನು ಕವಿಗಳು ಎಷ್ಟು ಸೂಕ್ಷ್ಮವಾಗಿ ತಿಳಿಸಿದ್ದಾರೆ! ''ಚುಚುಂಬ ಪುಚ್ಛಮ್!''

ಹನುಮಂತನು ತನ್ನ ಕರ್ತವ್ಯದಲ್ಲಿ ಅದ್ಭುತವಾದ ಜಯವನ್ನು ಗಳಿಸಿ ಲಂಕೆಯನ್ನು ದಹಿಸಿ ಹಿಂದಕ್ಕೆ ಬರುತ್ತಿದ್ದಾನೆ. ಕಪಿಸೇನೆಯು ಅವನನ್ನು ನಿರೀಕ್ಷಿಸುತ್ತ ಸಮುದ್ರತೀರದಲ್ಲಿ ಕಾದು ಕುಳಿತಿದೆ. ಹನುಮಂತನು ಸಮುದ್ರವನ್ನು ಲಂಘಿಸಿ ಬರುವಾಗಲೇ ಬಾಲವನ್ನಲ್ಲಾಡಿಸುತ್ತ ಗರ್ಜಿಸುತ್ತಿದ್ದಾನೆ. ಅವನ ಗರ್ಜನೆ ಕಪಿಗಳಿಗೆ ಕೇಳಿಸುತ್ತಿದೆ. ''ಆ! ಹನುಮಂತನು ಬರುತ್ತಿದ್ದಾನೆ!'' ಎಂದು ಎಲ್ಲರೂ ಆನಂದೋತ್ಸುಕರಾಗಿದ್ದಾರೆ. ಆ ವಾನರರು ಹೂವರಳಿದ ಮರದ ಕೊಂಬೆಗಳನ್ನು ಕೈಯಲ್ಲಿ ಹಿಡಿದು ಬೀಸುತ್ತ ಹನುಮಂತನಿಗೆ ಸ್ವಾಗತವನ್ನು ಬಯಸುತ್ತಿದ್ದಾರೆ! ಹನುಮಂತನು ಬಂದೇಬಿಟ್ಟನು. ಪರ್ವತ ಪ್ರಾಂತದಲ್ಲಿ ಆಕಾಶದಿಂದ ಧುಮುಕಿದನು. ಕಪಿಗಳೆಲ್ಲರೂ ಉತ್ಸಾಹದಿಂದ ಓಡುತ್ತ ಬಂದು ಮುತ್ತಿಕೊಂಡರು! ಕೈಯಲ್ಲಿ ಹಣ್ಣು ಹಂಪಲುಗಳನ್ನು ಅವನಿಗೆ ಕಾಣಿಕೆಯಾಗಿ ತಂದರು. ''ಸೀತೆಯನ್ನು ನೋಡಿ ಬಂದೆ'' ಎಂದು ಹನುಮಂತನು ಸಂಕ್ಷೇಪವಾಗಿ ತನ್ನ ಜಯ ವೃತ್ತಾಂತವನ್ನು ತಿಳಿಸಿದ. ವಾನರರ ಹಾರಾಟವನ್ನು ಏನು ಹೇಳೋಣ!

''ಕೆಲವರು ಆನಂದದಿಂದ ಕುಪ್ಪಳಿಸಿದರು! ಕೆಲವರು 'ಕೀ'ಯೆಂದು ಕೂಗಿದರು! ಕೆಲವರು ಸಿಂಹನಾದ ಮಾಡಿದರು! ಕೆಲವರು ಕಿಲಕಿಲ ಎಂದು ವಚಗುಟ್ಟಿದರು! ಕೆಲವರು ಗರ್ಜನೆಗೆ ಪ್ರತಿಗರ್ಜನೆ ಮಾಡಿದರು. ಕೆಲವರು ಉದ್ದವಾದ ಬಾಲಗಳನ್ನು ನಿಮಿರಿಸಿ ನೆಲವನ್ನು ಬಡಿದರು!''

ಕೆಲವು ಕಪಿಗಳು ಗಿರಿಶಿಖರಗಳಿಂದ ಧುಮುಕಿ ಬಂದು ಹನುಮಂತನನ್ನು ಕೈಯಿಂದ ಮುಟ್ಟಿಮುಟ್ಟಿ ನೋಡಿದರಂತೆ!

ಕ್ಷ್ವೇಲಂತ್ಯನ್ಯೇ ನದಂತ್ಯನ್ಯೇ ಗರ್ಜಂತ್ಯನ್ಯೇ ಮಹಾಬಲಾಃ ।
ಚಕ್ರುಃ ಕಿಲಕಿಲಾಮನ್ಯೇ ಪ್ರತಿಗರ್ಜಂತಿ ಚಾಪರೇ ॥

ಕೇಚಿದುಚ್ಛ್ರಿತಲಾಂಗೂಲಾಃ ಪ್ರಹೃಷ್ಟಾಃ ಕಪಿಕುಂಜರಾಃ ।
ಅಂಚಿತಾಯತದೀರ್ಘಾಣಿ ಲಾಂಗೂಲಾನಿ ಪ್ರವಿವ್ಯಧುಃ ॥

ಅಪರೇ ಚ ಹನೂಮಂತಂ ವಾನರಾ ವಾರಣೋಪಮಮ್ ।
ಆಪ್ಲುತ್ಯ ಗಿರಿಶೃಂಗೇಭ್ಯಃ ಸಂಸ್ಪೃಶಂತಿ ಸ್ಮ ಹರ್ಷಿತಾಃ ॥

- ಸುಂದರ ೫೭:೪೧-೪೩

ಮಧುವನದಲ್ಲಿ

ಎಲ್ಲರೂ ಸಂತೋಷದ ಸುದ್ದಿಯನ್ನು ಹೇಳಲು ಸುಗ್ರೀವನ ಬಳಿಗೆ ಹೊರಟರು. ದಾರಿಯಲ್ಲಿ ಮಧುವನ ಸಿಕ್ಕಿತು. ಮಧುವನ್ನು ಕುಡಿಯಬೇಕೆಂದು ಕಪಿಗಳಿಗೆ ಆಸೆಯಾಯಿತು. ಒಂದು ಮಹಾಕಾರ್ಯವನ್ನು ಸಾಧಿಸಿದ ಕಾರಣ ಮಧುವನ್ನು ಕುಡಿಯುವುದು ತಮ್ಮ ಹಕ್ಕೆಂದು ಅವರು ತಿಳಿದರು. ಅದಕ್ಕೆ ಅಂಗದನೂ ಹನುಮಂತನೂ ಒಪ್ಪಿದರು. ಸರಿ, ಎಲ್ಲರೂ ಮಧುವನಕ್ಕೆ ನುಗ್ಗಿದರು. ಈ ಮಧುವನದ ಪ್ರಸಂಗವು ಹಾಸ್ಯದ ಪೋಷಣೆಗಾಗಿಯೇ ಇರಬೇಕು. ಸೀತೆಯನ್ನು ಹುಡುಕಿ ಹುಡುಕಿ ಕಪಿಗಳಿಗೆ ಆಯಾಸವಾಗಿದೆ. ಕ್ಲಿಷ್ಟವಾದ ಸನ್ನಿವೇಶಗಳನ್ನು ವರ್ಣಿಸಿ ವರ್ಣಿಸಿ ಕವಿಗಳಿಗೂ ದಣಿವಾಗಿರಬೇಕು. ಉಭಯರಿಗೂ ಸ್ವಲ್ಪ ವಿನೋದ ಬೇಡವೇ?

ಕಪಿಗಳು ಮಧುವನದ ಮೇಲೆ ಧಾಳಿ ಮಾಡಿದರು. ಯಥೇಷ್ಟವಾಗಿ ಮಧುವನ್ನು ಕುಡಿದರು. ಅಮಲು ತಲೆಗೇರಿತು.

ಗಾಯಂತಿ ಕೇಚಿತ್ ಪ್ರಣಮಂತಿ ಕೇಚಿತ್
    ನೃತ್ಯಂತಿ ಕೇಚಿತ್ ಪ್ರಹಸಂತಿ ಕೇಚಿತ್ ।
ಪತಂತಿ ಕೇಚಿತ್ ವಿಚರಂತಿ ಕೇಚಿತ್
    ಪ್ಲವಂತಿ ಕೇಚಿತ್ ಪ್ರಲಪಂತಿ ಕೇಚಿತ್ ॥

ಗಾಯಂತಮನ್ಯಃ ಪ್ರಹಸನ್ನುಪೈತಿ
ಹಸಂತಮನ್ಯಃ ಪ್ರರುದನ್ನುಪೈತಿ ।
ರುದಂತಮನ್ಯಃ ಪ್ರಣದನ್ನುಪೈತಿ
ನದಂತಮನ್ಯಃ ಪ್ರಣುದನ್ನುಪೈತಿ ॥ - ಸುಂದರ ೬೧:೧೪-೧೭

''ಆ ಕಪಿಗಳಲ್ಲಿ ಕೆಲವರು ಹಾಡುವರು, ಕೆಲವರು ನಮಸ್ಕಾರ ಮಾಡುವರು! ಕೆಲವರು ಕುಣಿಯುವರು! ಕೆಲವರು ಗಟ್ಟಿಯಾಗಿ ನಗುವರು! ಕೆಲವರು ಎಡವಿ ಬೀಳುವರು. ಕೆಲವರು ಓಡುವರು. ಕೆಲವರು ಕುಪ್ಪಳಿಸುವರು. ಕೆಲವರು ಏನನ್ನೋ ಹಲುಬುವರು!

''ಒಬ್ಬ ಕಪಿಯು ಹಾಡುತ್ತಿರುವಾಗ ಇನ್ನೊಬ್ಬನು ನಗುತ್ತ ಬಂದು ಮೇಲೆ ಬೀಳುವನು! ಒಬ್ಬನು ನಗುತ್ತಿದ್ದರೆ ಇನ್ನೊಬ್ಬನು ಅಳುತ್ತ ಎದುರಿಗೆ ಬಂದು ನಿಲ್ಲುವನು! ಇನ್ನೊಬ್ಬನು ಅಳುತ್ತಿದ್ದರೆ ಮತ್ತೊಬ್ಬನು ಕೇಕೆ ಹಾಕುತ್ತಾ ಬಂದು ನಿಲ್ಲುವನು. ಮತ್ತೊಬ್ಬನು ಕೇಕೆ ಹಾಕುತ್ತಿದ್ದರೆ ಮಗದೊಬ್ಬನು ಬಂದು ಅವನನ್ನು ತಳ್ಳುವನು!''

ಈ ಕಪಿಚೇಷ್ಟೆಗೆ ಮಿತಿಯುಂಟೆ?

ಒಂದು ಪ್ರಾಚೀನ ಶ್ಲೋಕ ಹೇಳುವಂತೆ, ಮೊದಲೇ ಕಪಿ; ಅದಕ್ಕೆ ಯಾರೋ ಹೆಂಡವನ್ನು ಕುಡಿಸಿದ್ದಾರೆ. ತಲೆಗೆ ಮದವೇರಿದೆ. ಈ ಮಧ್ಯದಲ್ಲಿ ಒಂದು ಚೇಳು ಕುಟುಕಿ ಬಿಟ್ಟಿತು! ಅದು ಸಾಲದೆಂಬಂತೆ ಒಂದು ಭೂತವು ಕಪಿಯಲ್ಲಿ ಆವಿಷ್ಟವಾಯಿತು! ಅಹಾ! ಏನು ಹೇಳೋಣ ಅದರ ವಿಕಾರ ಚೇಷ್ಟೆಯನ್ನು!

ಕಪಿರಪಿ ಚ ಕಾಪಿಶಾಯನ ಮದಮತ್ತೋ ವೃಶ್ಚಿಕೇನ ಸಂದಷ್ಟಃ ।
ಅಪಿ ಚ ಪಿಶಾಚಗ್ರಸ್ತಃ ಕಿಂ ಬ್ರೂಮೋ ವೈಕೃತಂ ತಸ್ಯ ॥

ಹಾಗಾಯಿತು ಈ ಕಪಿ ಸೈನಿಕರ ಪರಿಸ್ಥಿತಿ. ಕೆಲವರು ಹೊಡೆದಾಡಿದರು. ಕೆಲವರು ಮಲಗಿಬಿಟ್ಟರು. ಕೆಲವರು ಅತ್ತರು. ಕೆಲವರು ನಕ್ಕರು. ಒಂದನ್ನು

ಮಾಡಿ ಇನ್ನೊಂದನ್ನು ಹೇಳಿದರು. ಆ ಸಮಯದಲ್ಲಿ ಕಾವಲುಗಾರನಾದ ದಧಿಮುಖನ ಕಡೆಯವರು ಬಂದು ಇವರನ್ನು ತಡೆದರು. ಇವರು ಕಾವಲುಗಾರರನ್ನು ಹೊಡೆದೋಡಿಸಿದರು. ಹಿಡಿದು ಹಂಗಿಸಿದರು. ಕಾವಲುಗಾರರಿಗೆ ತಮ್ಮ ಅಪಾನದ್ವಾರ ತೋರಿಸಿದರಂತೆ! ''ದೇವಮಾರ್ಗಂ ಚ ದರ್ಶಿತಾಃ''. ಅಪಾನದ್ವಾರವನ್ನು ದೇವಮಾರ್ಗವೆಂದು ಕರೆದಿದ್ದಾರೆ ವಾಲ್ಮೀಕಿ ಮುನಿಗಳು! ಇದೊಂದು ಹಾಸ್ಯದೊಳಗಿನ ಹಾಸ್ಯ!

ಕಪಿಗಳು ಸುಗ್ರೀವನಿದ್ದಲ್ಲಿಗೆ ಧಾವಿಸುತ್ತ ಹೋದರು. ಸೀತೆಯನ್ನು ಕಂಡು ಬಂದಿದ್ದೇವೆ ಎಂಬ ಸಡಗರದಲ್ಲಿ ನಾ ಮುಂದೆ ತಾ ಮುಂದೆ ಎಂದು ನುಗ್ಗಿದರು. ಸುಗ್ರೀವ, ಶ್ರೀರಾಮ, ಲಕ್ಷ್ಮಣ - ಈ ಮೂವರೂ ಒಂದೆಡೆ ಇದ್ದಾರೆ. ಅವರಿಗೆ ಸೀತಾವೃತ್ತಾಂತವನ್ನು ತಿಳಿಸಬೇಕೆಂದು ಎಲ್ಲರಿಗೂ ಚಾಪಲ್ಯ. ''ಓ! ನಾವು ಸೀತಾ ದೇವಿಯನ್ನು ಕಂಡುಬಂದೆವು! ಲಂಕೆಯಲ್ಲಿ ಅವಳು ಇದ್ದಾಳೆ!'' ಎಂದು ಎಲ್ಲರೂ ಹೇಳತಕ್ಕವರೇ! ವಾಸ್ತವವಾಗಿ ನೋಡಿ ಬಂದ ಹನುಮಂತನು ಹಿಂದೆ ಎಲ್ಲಿಯೋ ಇದ್ದಾನೆ!

ಏತದಾಖ್ಯಾಂತಿ ತೇ ಸರ್ವೇ
ಹರಯೋ ರಾಮಸಂನಿಧೌ ॥

ಆಗ ಶ್ರೀರಾಮನು ಸೀತಾ ವೃತ್ತಾಂತವನ್ನು ವಿವರವಾಗಿ ತಿಳಿಸಬೇಕೆಂದು ಕೇಳಿದನು. ವಿವರವಾದ ವೃತ್ತಾಂತ ಅವರಿಗೇನು ಗೊತ್ತು? ಕಪಿಗಳು ಹನುಮಂತನನ್ನು ಕರೆದು, 'ಹನುಮಂತ, ಅದರ ವಿವರವನ್ನು ನೀನೇ ಹೇಳು!' ಎಂದರಂತೆ! - ಸುಂದರಕಾಂಡ, ೬೫:೪-೬

ಕಪಿಬುದ್ಧಿಗೆ ಇನ್ನೊಂದು ಉದಾಹರಣೆ: ದಂಡಯಾತ್ರೆಗೆ ಹೋಗುವಾಗಲೂ ಕಪಿಗಳು ಚೇಷ್ಟೆಯನ್ನು ಮಾಡುತ್ತಲೇ ಹೋಗುತ್ತಾರೆ.

''ಕಪಿಸೇನೆಯು ದಂಡಯಾತ್ರೆಗೆ ಹೊರಟ ಶ್ರೀರಾಮನನ್ನು ಹಿಂಬಾಲಿಸಿ ಹೊರಟಿತು. ಕಪಿ ಸೈನಿಕರು ಹಾರುತ್ತ ನೆಗೆಯುತ್ತ ಗರ್ಜಿಸುತ್ತ

ಓಡುತ್ತ ಚೀರುತ್ತ ದಕ್ಷಿಣ ದಿಕ್ಕಿಗೆ ಹೋದರು. ದಾರಿಯಲ್ಲಿ ಮಧುವನ್ನು ಕುಡಿಯುತ್ತ ಹಣ್ಣುಗಳನ್ನು ತಿನ್ನುತ್ತ ಹೋದರು. ಹೂಗೊಂಚಲುಗಳಿದ್ದ ರಮ್ಯವಾದ ಮರಗಳನ್ನೇ ಕಿತ್ತು ಹೊತ್ತುಕೊಂಡು ಹೋದರು! ಆ ಕಪಿಯೋಧರು ಬಳಿಯಲ್ಲಿದ್ದವರನ್ನು ಇದ್ದಕ್ಕಿದ್ದಂತೆ ಎತ್ತಿಕೊಂಡು ಹೊರುತ್ತಿದ್ದರು! ಕೆಲವರನ್ನು ಮೇಲಕ್ಕೆ ಎಸೆಯುತ್ತಿದ್ದರು! ಅವರು ಕೆಳಗೆ ಬೀಳುವಷ್ಟರಲ್ಲಿ ಇವರು ಮೇಲೆ ನೆಗೆದು ಅವರನ್ನು ಆತು ಹಿಡಿಯುತ್ತಿದ್ದರು! ಕೆಲವರು ಇವರನ್ನು ತೊಡರುಗಾಲಿಕ್ಕಿ ಬೀಳಿಸುತ್ತಿದ್ದರು! ಕೆಲವರು ಮರಗಳನ್ನು ಹತ್ತಿ ಜೇನನ್ನು ಕುಡಿದು ದರ್ಪದಿಂದ ಕೂಗುತ್ತಿದ್ದರು. ಅದನ್ನು ಕಂಡ ಕೆಲವರು ಥಟ್ಟನೆ ಮರಗಳನ್ನು ಹತ್ತುತ್ತಿದ್ದರು, ಮರದ ಮೇಲಿದ್ದವರು ಕೂಡಲೇ ಮರಗಳಿಂದ ಧುಮುಕುತ್ತಿದ್ದರು!'' (ಯುದ್ಧಕಾಂಡ, ೮:೨೬-೨೯, ೬೨, ೯೩)

ರಾಕ್ಷಸ ವಿಕೃತಿ ದರ್ಶನ

ರಾಕ್ಷಸರ ವ್ಯವಹಾರ ಕಪಿಗಳ ಚೇಷ್ಟೆಯಂತಲ್ಲ. ಅವರ ನಡತೆಯಲ್ಲಿ ಒರಟುತನ, ವಿಕಾರಗಳೇ ಕಂಡು ಬರುತ್ತವೆ. ಅವೂ ಸಹ ಅನೇಕ ವೇಳೆ ಹಾಸ್ಯಕ್ಕೆ ಇಂಬುಗೊಡುತ್ತವೆ. ಅವರಿಗೆ ಸಹಜವಾದ ನಡೆನುಡಿಗಳು ನಮ್ಮ ಹಾಸ್ಯಕ್ಕೆ ಪೋಷಕವಾಗುತ್ತವೆ. ರಾಕ್ಷಸಿಯರಲ್ಲಿ 'ಲಂಬೋದರ ಪಯೋ-ಧರೆ'ಯರಿರುವುದು ಸಾಧ್ಯ. ಗಂಡಸರೂ ಲಂಬಪಯೋಧರರಾಗಿರು-ವುದುಂಟೋ? ಉಂಟು! ಹನುಮಂತನು ಅಂಥವರನ್ನು ನೋಡಿದ್ದಾನೆ!

> ವಿಕಾಕ್ಷಾನ್ ವಿಕಕರ್ಣಾಂಶ್ಚ ಲಂಬೋದರಪಯೋಧರಾನ್ ।
> ಕರಾಲಾನ್ ಭುಗ್ನವಕ್ತ್ರಾಂಶ್ಚ ವಿಕಟಾನ್ ವಾಮನಾಂಸ್ತಥಾ ॥
>
> - ಸುಂದರ ೪:೧೭

ಪ್ರಹಸ್ತನು ಭಾರಿ ದೇಹದ ಭಾರಿ ಹೊಟ್ಟೆಯವನು. ಅವನನ್ನು ನೋಡಿದಾಗ ಶ್ರೀರಾಮನಿಗೂ ನಗು ಬಂದಿತು. 'ಉವಾಚ ಸಸ್ಮಿತಂ

ರಾಮಃ' (ಯುದ್ಧ, ೫೮-೧). ಅತಿಕಾಯನು ಅವನನ್ನು ಮೀರಿಸಿದ ಮಹಾಶರೀರದವನು. ಎಲ್ಲರನ್ನೂ ಮೀರಿಸಿದವನು ಕುಂಭಕರ್ಣ. ಅವನ ನಿದ್ರೆ, ಆಹಾರ, ವಿಕೃತರೂಪ, ವಿಕಟವರ್ತನೆಗಳೆಲ್ಲ ವಿನೋದಕಾರಿಗಳು. ವಾಲ್ಮೀಕಿ ಮುನಿಗಳು ಅವನ ಚರಿತ್ರೆಯನ್ನು ಹಾಸ್ಯಪೂರ್ಣವಾಗಿ ವಿಸ್ತಾರವಾಗಿ ವರ್ಣಿಸಿದ್ದಾರೆ. ಪ್ರಹಸ್ತನು ಹತನಾಗಿ ತಾನೂ ಪರಾಜಿತ-ನಾದಾಗ ರಾವಣನಿಗೆ ಯುದ್ಧದ ಬಿಸಿ ಮುಟ್ಟಿತು. ಅವನಿಗೆ ಕುಂಭಕರ್ಣನ ನೆನಪಾಯಿತು.

ಕುಂಭಕರ್ಣ

ಲಂಕಾನಗರವೇ ಸಂಕಟದಲ್ಲಿ ಸಿಕ್ಕಿರುವಾಗ ಕುಂಭಕರ್ಣನು ಸುಖವಾಗಿ ಮಲಗಿದ್ದಾನಲ್ಲ! 'ಸುಖಂ ಸ್ವಪಿತಿ ನಿಶ್ಚಿಂತಃ' ಅವನಾಗಿ ನಿದ್ರೆಯಿಂದೇಳುವ ಸಂಭವ ಇಲ್ಲ. ಅವನು ಮಲಗಿ ಕೇವಲ ಒಂಬತ್ತು ದಿನಗಳಾದವು! ಆರು ತಿಂಗಳಿಂದ ಹಿಡಿದು ಒಂಬತ್ತು ತಿಂಗಳವರೆಗೆ ಅವನು ನಿದ್ರಿಸುವುದುಂಟು!

ನವ ಷಟ್ ಸಪ್ತ ಚಾಷ್ಟೌ ಚ ಮಾಸಾನ್ ಸ್ವಪಿತಿ ರಾಕ್ಷಸಃ ॥

- ಯುದ್ಧ ೬೦:೧೭

ರಾವಣನ ಆಜ್ಞೆಯಂತೆ ರಾಕ್ಷಸಭಟರು ಕುಂಭಕರ್ಣನನ್ನು ಎಬ್ಬಿಸಲು ಹೋದರು. ಅವನು ಎದ್ದೊಡನೆ 'ಹಸಿವು! ಹಸಿವು!' ಎನ್ನುತ್ತಾನೆ. ಅದು ರಾಕ್ಷಸಭಟರಿಗೆ ಗೊತ್ತು. ಆದ್ದರಿಂದ ಬೇಕಾದಷ್ಟು ಆಹಾರವನ್ನು ಜೊತೆಗೆ ತೆಗೆದುಕೊಂಡೇ ಹೋಗಿದ್ದರು. ಭವನವನ್ನು ಪ್ರವೇಶಿಸಿ ಕುಂಭಕರ್ಣನನ್ನು ದೂರದಲ್ಲಿ ನೋಡಿದರು. ಮಲಗಿದ್ದ ಭೀಮಾಕೃತಿಯ ಕುಂಭಕರ್ಣ ಅಡ್ಡಬಿದ್ದಿರುವ ಪರ್ವತದಂತೆ ಗೋಚರಿಸಿದನು! ಮುಂದೆ ಅವನನ್ನು ಎಬ್ಬಿಸಲು ಮಾಡಿದ ಪ್ರಯತ್ನಗಳೆಲ್ಲವೂ ವಿಚಿತ್ರವಾಗಿವೆ. (ಯುದ್ಧ ೬೦:೩೪-೫೫)

"ಆ ರಾಕ್ಷಸವ್ಯಾಘ್ರನ ಎದುರಿಗೆ ಮಾಂಸದ ರಾಶಿಯನ್ನೇ ಪೇರಿಸಿದರು. ಮಾಂಸದ ರಾಶಿಯೇ ಮೇರುಪರ್ವತದಷ್ಟು ದೊಡ್ಡದಾಗಿತ್ತು. ಕುಡಿಯುವುದಕ್ಕಾಗಿ ರಕ್ತವನ್ನು ತುಂಬಿದ ಕೊಡಗಳನ್ನೂ ಬಗೆ ಬಗೆಯ ಮದ್ಯಗಳನ್ನೂ ತಂದಿಟ್ಟರು. ಅವನ ಮೈಗೆ ಚಂದನವನ್ನು ಬಳಿದು ಪುಷ್ಪಮಾಲೆಗಳಿಂದ ಅಲಂಕರಿಸಿದರು! ಸುತ್ತಲೂ ಧೂಪವನ್ನು ಹಾಕಿ 'ಸ್ವಾಮಿ, ಬಹು ಪರಾಕು! ಬಹು ಪರಾಕು!' ಎಂದು ಸ್ತೋತ್ರ ಮಾಡಿದರು. ಅನಂತರ ಗುಡುಗಿನಂತೆ ಕೂಗಿದರು! ಶಂಖಗಳನ್ನೂದಿದರು! ಕುಂಭಕರ್ಣನಿಗೆ ಎಚ್ಚರವಾಗಲಿಲ್ಲ. ಅನಂತರ ರಾಕ್ಷಸಭಟರು ಕುಂಭಕರ್ಣನನ್ನು ಗುದ್ದಿದರು! ಕೈಕಾಲುಗಳನ್ನು ಎಳೆದು ಹೊರಳಾಡಿಸಿದರು. ಭೇರಿಗಳನ್ನು ಬಡಿದರು. ಮೃದಂಗಗಳನ್ನು ಹೊಯ್ದರು. ಕೈಬಡಿದರು, ಕೂಗಿದರು, ಗರ್ಜಿಸಿದರು! ಆ ಗದ್ದಲವನ್ನು ಕೇಳಿ ಹಕ್ಕಿಗಳು ಭಯದಿಂದ ದಿಕ್ಕುದಿಕ್ಕಿಗೆ ಚದರಿ, ಆಕಾಶವನ್ನಡರಿ, ತತ್ತರಿಸುತ್ತ ನೆಲಕ್ಕೇ ಉರುಳಿದವು. ಕುಂಭಕರ್ಣನು ಮಾತ್ರ ಏಳಲಿಲ್ಲ! ಆಗ ಮಾತ್ರ ರಾಕ್ಷಸಭಟರಿಗೆ ದಿಕ್ಕುತೋರದೆ ಭುಸುಂಡಿ, ಗದೆ, ಮುಸಲ- ಮೊದಲಾದ ಆಯುಧಗಳನ್ನು ಕೈಗೆ ತೆಗೆದುಕೊಂಡರು. ಒರಟರಾದ ಆ ರಾಕ್ಷಸರು ಸುಖನಿದ್ರೆಯಲ್ಲಿದ್ದ ಕುಂಭಕರ್ಣನನ್ನು ಬಂಡೆಗಳಿಂದ ಇಡಿದರು. ಮುಸಲಗಳಿಂದ ತಿವಿದರು. ಗದೆಗಳಿಂದ ಹೊಡೆದರು. ಮರಗಳಿಂದ ಬಡಿದರು. ಅಂಗೈಗಳಿಂದ ಅಪ್ಪಳಿಸಿದರು. ಮುದ್ಗರಗಳಿಂದ ಜಡಿದರು. ಮುಷ್ಟಿಗಳಿಂದ ಗುದ್ದಿದರು. ಆದರೇನು? ಕುಂಭಕರ್ಣನು ಏಳಲಿಲ್ಲ.

ಕುಂಭಕರ್ಣನ ಉಸಿರಾಟದ ರಭಸಕ್ಕೆ ಬಲಶಾಲಿಗಳಾದ ರಾಕ್ಷಸರಿಗೂ ಅವನೆದುರಿಗೆ ಕಾಲೂರಿ ನಿಂತುಕೊಳ್ಳಲು ಸಾಧ್ಯವಾಗಲಿಲ್ಲ. ಕಡೆಗೆ ಆ ದೈತ್ಯರು ಸೊಂಟವನ್ನು ಬಿಗಿದುಕಟ್ಟಿ ಗಾಢವಾದ ಪ್ರಯತ್ನಕ್ಕೆ ಕೈ ಹಾಕಿದರು. ಮೃದಂಗ, ತಮಟೆ, ಭೇರಿ, ಶಂಖ, ಘಟವಾದ್ಯಗಳನ್ನು ಬಾರಿಸುತ್ತ ಹತ್ತುಸಾವಿರ ರಾಕ್ಷಸರು ಒಟ್ಟಿಗೆ ಕೂಗಿದರು! ಕುಂಭಕರ್ಣನಿಗೆ ಎಚ್ಚರ-

ವಾಗಲಿಲ್ಲ! ಕುದುರೆ, ಒಂಟೆ, ಕತ್ತೆ, ಆನೆ ಮೊದಲಾದ ಪ್ರಾಣಿಗಳನ್ನು ತಂದು ಅವುಗಳನ್ನು ಹೊಡೆದು ಕೂಗಿಸಿದರು. ಕುದುರೆಗಳು ಕೆನೆದವು. ಒಂಟೆಗಳು ಅರಚಿದವು. ಕತ್ತೆಗಳು ಕಿರಿಚಿದವು. ಆನೆಗಳು ಘೀಂಕರಿಸಿದವು. ಆ ಗದ್ದಲದೊಡನೆ ಭೇರೀ ಶಂಖ ಮೃದಂಗಗಳ ಘೋಷವನ್ನು ಸರ್ವಶಕ್ತಿಯಿಂದ ಮೇಳೈಸಿ ಕೋಲಾಹಲಮಾಡಿದರು. ಲಂಕೆಯೆಲ್ಲವೂ ಮೊಳಗಿಹೋಯಿತು. ಆ ಮಹಾರಾಕ್ಷಸನಿಗೆ ಮಾತ್ರ ಎಚ್ಚರವಾಗಲಿಲ್ಲ! ರಾಕ್ಷಸರಿಗೆ ದಿಕ್ಕು ತೋಚಲಿಲ್ಲ. ಕೆಲವರು ಮುಂದೆ ಹೋಗಿ ಕುಂಭಕರ್ಣನ ತಲೆಕೂದಲನ್ನು ಕೀಳ ತೊಡಗಿದರು. ಕೆಲವರು ಅವನ ಕಿವಿಗಳನ್ನು ಕಚ್ಚಿದರು! ಕೆಲವರು ನೂರಾರು ಕೊಡಗಳಲ್ಲಿ ನೀರನ್ನು ತಂದು ಅವನ ಕಿವಿಗಳಲ್ಲಿ ಸುರಿದರು! ಕುಂಭಕರ್ಣನು ಜಪ್ಪೆನ್ನಲಿಲ್ಲ! ಅವನು ಗಾಢನಿದ್ರೆಯಲ್ಲೇ ಇದ್ದನು. ಅಮೇಲೆ ಬಲಾಢ್ಯರಾದ ರಾಕ್ಷಸರು ಸುತ್ತಿಗೆಗಳಿಂದ ಅವನನ್ನು ಬಡಿಯತೊಡಗಿದರು! ಆ ಮಹಾರಾಕ್ಷಸನು ಏಳಲಿಲ್ಲ! ದಿಗ್ಭ್ರಾಂತರಾದ ರಾಕ್ಷಸರು ಒಂದು ಸಾವಿರ ಆನೆಗಳನ್ನು ತಂದು ಅವನ ಮೈಮೇಲೆ ಓಡಾಡಿಸಿ ತುಳಿಸಿದರು! ಆಗ ಕುಂಭಕರ್ಣನಿಗೆ ಯಾರೋ ಮೈಯನ್ನು ಮುಟ್ಟಿದಂತಾಗಿ ಎಚ್ಚರವಾಯಿತು!''

ಕಡೆಗೂ ಎದ್ದ

ಆಗ ಕುಂಭಕರ್ಣನು ಆಕಳಿಸುತ್ತ ಎದ್ದು ಕುಳಿತನಂತೆ! ತನ್ನನ್ನು ಹೊಡೆದುದಾಗಲಿ, ಬಡಿದುದಾಗಲಿ ಅವನಿಗೆ ತಿಳಿಯಲೇ ಇಲ್ಲ. ಅವನಿಗೆ ತಿಳಿದದ್ದು ತನಗೆ ಹಸಿವಾಗುತ್ತಿದೆ ಎಂಬುದು! ನಿದ್ದೆಯ ಜೋಮಿನಲ್ಲಿ ಒಂದು ಸಲ ಆಕಳಿಸಿದನಂತೆ. ಪರ್ವತಾಗ್ರದಿಂದ ಬಿರ್ರನೆ ಬಿರುಗಾಳಿ ಬೀಸಿದಂತಾಯಿತಂತೆ! ಆಮೇಲೆ ಕುಂಭಕರ್ಣನು ಹಸಿವು ಹಸಿವು ಎನ್ನುತ್ತ ಮಾಂಸರಾಶಿಗಳನ್ನು ಕಬಳಿಸಿ, ಬಾಯಾರಿಕೆ ಬಾಯಾರಿಕೆ ಎನ್ನುತ್ತ ಕೊಡಗಟ್ಟಲೆ ರಕ್ತವನ್ನು ಕುಡಿದು, ಹರವಿಗಳಲ್ಲಿ ತುಂಬಿದ್ದ ಹೆಂಡವನ್ನು ಬಾಯಿಗೆ ಸುರುವಿಕೊಂಡನು.

ಆ ಸಮಯದಲ್ಲಿ ಅವನನ್ನೆಬ್ಬಿಸಲು ಬಂದಿದ್ದ ರಾಕ್ಷಸರು ಓಡಿಹೋಗಿ ಅಡಗಿಕೊಂಡಿದ್ದರು! ಕುಂಭಕರ್ಣನು ತಿಂದು ತೇಗಿದ ಮೇಲೆ ಅವರು ಮೆಲ್ಲನೆ ಒಬ್ಬೊಬ್ಬರಾಗಿ ಕಾಣಿಸಿಕೊಂಡರು. 'ಓಹೋ, ಇವರೆಲ್ಲರೂ ಸೇರಿ ನನ್ನನ್ನು ನಿದ್ದೆಯಿಂದ ಎಬ್ಬಿಸಿದ್ದಾರೆ' ಎಂದು ಆಗ ಕುಂಭಕರ್ಣನಿಗೆ ಅರಿವಾಯಿತು!

ರಾವಣನು ತನ್ನನ್ನು ಎಬ್ಬಿಸಿದ್ದೇಕೆ ಎಂಬುದು ತಿಳಿಯಿತು. "ಸರಿ, ರಾಮ ಲಕ್ಷ್ಮಣರನ್ನೂ ವಾನರಸೇನೆಯನ್ನೂ ಕೊಂದು ಆಮೇಲೆ ಅಣ್ಣನನ್ನು ಹೋಗಿ ನೋಡುವೆನು!" ಎಂದನು. ರಾವಣನನ್ನು ಮೊದಲು ನೋಡು-ವುದೇ ಯುಕ್ತವೆಂದು ರಾಕ್ಷಸಭಟರು ನಿವೇದಿಸಿದರು. "ಸರಿ, ರಾವಣ ನನ್ನು ಹೋಗಿ ಕೇಳಿರಿ. ನಾನು ಹೀಗೇ ಯುದ್ಧಕ್ಕೆ ಹೋಗಲೋ? ಅಥವಾ ಅವನನ್ನು ಬಂದು ನೋಡ ಬೇಕೋ?" ಎಂದು ರಾಕ್ಷಸರನ್ನು ಕಳಿಸಿದನು. ತನ್ನನ್ನು ಮೊದಲು ನೋಡಲೆಂದು ರಾವಣನ ಅಪ್ಪಣೆಯಾಯಿತು. ಆಗ ಕುಂಭಕರ್ಣನು ಹಾಸಿಗೆಯಿಂದೆದ್ದು ಮುಖ ತೊಳೆದು ಸ್ನಾನಮಾಡಿ ಸನ್ನದ್ಧ ನಾದನು. ಯುದ್ಧಕ್ಕೆ ಹೊರಡುವುದಾದರೆ ಉತ್ತೇಜಕವಾದ ಪೇಯವು ಬೇಡವೆ? ಎರಡು ಸಾವಿರ ಕೊಡದಷ್ಟು ಮದ್ಯವನ್ನು ಬಾಯಿಗೆ ಹೊಯ್ದುಕೊಂಡು ರಾವಣನ ಅರಮನೆಗೆ ಹೊರಟನು.

ಅವನು ರಾಜಮಾರ್ಗದಲ್ಲಿ ಹೋಗುವಾಗ ಹೆಜ್ಜೆಯಿಡುವ ರಭಸಕ್ಕೆ ಭೂಮಿ ಅದುರುತ್ತಿದ್ದಿತು. ಅವನು ಲಂಕಾನಗರದ ಬೀದಿಯಲ್ಲಿ ಹೋಗುತ್ತಿರುವುದು ಪ್ರಾಕಾರದ ಹೊರಗಡೆ ರಣಭೂಮಿಯಲ್ಲಿದ್ದ ಕಪಿಗಳಿಗೆ ಕಾಣಿಸಿತಂತೆ! ಕುಂಭಕರ್ಣನ ಎತ್ತರ ೬೦೦ ಅಡಿ! ಅವನ ಸೊಂಟದ ಸುತ್ತಳತೆ ೩,೬೦೦ ಅಡಿ! ಅವನು ಹಿಡಿದ ಶೂಲಾಯುಧದ ತೂಕ ೧೧೧ ಟನ್!

ಕುಂಭಕರ್ಣನ ಅಕಟವಿಕಟಾಕಾರವನ್ನು ಕಂಡು ಕಪಿಗಳು ಭಯದಿಂದ ತತ್ತರಿಸಿದರು. ಕೆಲವರು ಅಂಜಿಕೆಯಿಂದ ದಿಕ್ಕು ದಿಕ್ಕಿಗೂ ಓಡಿಹೋದರು!

ಕೆಲವರು ನೆಲವನ್ನಪ್ಪಿಕೊಂಡು ಸತ್ತವರಂತೆ ಮಲಗಿಬಿಟ್ಟರು! ಶ್ರೀರಾಮನಿಗೂ ಕುಂಭಕರ್ಣನನ್ನು ಕಂಡು ಅಚ್ಚರಿಯಾಯಿತು. ಅವನು ವಿಭೀಷಣನನ್ನು ಕರೆದು "ವಿಭೀಷಣ, ಲಂಕೆಯೊಳಗೆ ಕಾಣಿಸುವ ಆ ರಾಕ್ಷಸನು ಯಾರು? ನಾನು ಇಂಥ ಪೆಡಂಭೂತವನ್ನು ನೋಡಿಯೇ ಇಲ್ಲ" ಎಂದು ಉದ್ಗರಿಸುತ್ತಾನೆ. ಆಗ ವಿಭೀಷಣನು ಕುಂಭಕರ್ಣನ ಕಥೆಯನ್ನು ಹೇಳಿ "ಶ್ರೀರಾಮ, ಅವನು ರಾಕ್ಷಸನೆಂದು ಕಪಿಗಳಿಗೆ ತಿಳಿಸಬಾರದು!"

ಉಚ್ಯಂತಾಂ ವಾನರಾಃ ಸರ್ವೇ ಯಂತ್ರಮೇತತ್ ಸಮುಚ್ಛ್ರಿತಮ್ ॥

- ಯುದ್ಧ ೬೧:೩೩.

"ಲಂಕೆಯಲ್ಲಿ ಕಾಣುತ್ತಿರುವುದು ಒ,ದು ಯಂತ್ರ. ಬೆದರುಗೊಂಬೆ! ಅದನ್ನು ಎತ್ತಿ ನಿಲ್ಲಿಸಿದ್ದಾರೆ" ಎಂದು ಕಪಿಗಳಿಗೆ ಹೇಳಬೇಕು ಎನ್ನುತ್ತಾನೆ.

ಕುಂಭಕರ್ಣನು ಯುದ್ಧಕ್ಕೆ ಹೊರಡುವಾಗ ರಾವಣನು ಅವನ ತೋಳುಗಳಿಗೆ ತೋಳ್ಬಂದಿಯನ್ನು ತೊಡಿಸಿ ಬೆರಳುಗಳಿಗೆ ಉಂಗುರ-ಗಳನ್ನಿಟ್ಟು, ಉತ್ತಮವಾದ ಆಭರಣಗಳಿಂದ ಅಲಂಕರಿಸಿದ್ದನು! ಮುತ್ತಿನ ಸರವನ್ನು ಕೊರಳಿಗೆ ತಾನೇ ಹಾಕಿ ದಿವ್ಯ ಪುಷ್ಪಮಾಲೆಗಳಿಂದ ಸಿಂಗರಿಸಿದ್ದನು! ಆದರೆ ಯುದ್ಧೋತ್ಸಾಹದಿಂದ ಪ್ರಯಾಣ ಮಾಡುತ್ತಿರು-ವಾಗ ಕುಂಭಕರ್ಣನು ಅವುಗಳನ್ನೆಲ್ಲ ಕಿತ್ತೊಗೆಯುತ್ತಾನೆ! ರಾಕ್ಷಸಭಟರನ್ನು ನೋಡಿ ವಿಕಟಹಾಸ್ಯದಿಂದ ನಕ್ಕು, "ರಾಕ್ಷಸಭಟರೆ, ಈ ಯುದ್ಧಕ್ಕೆ ಮೂಲ ಕಾರಣರಾದವರು ರಾಮಲಕ್ಷ್ಮಣರು, ಅವರನ್ನು ನಾನು ಸಂಹರಿಸಬೇಕು! ಕಾಡಿನಲ್ಲಿ ಅಲೆದಾಡುವ ಈ ಕಪಿಗಳು ನನಗೆ ಯಾವ ತೊಂದರೆಯನ್ನೂ ಮಾಡಿಲ್ಲ! ನಮ್ಮಂಥವರ ಉಪವನಗಳಲ್ಲಿ ಅಲಂಕಾರವಾಗಿ ಅಲೆದಾಡಿ-ಕೊಂಡಿರುವ ಕಪಿಜಾತಿ ಇದು!" ಎಂದು ವಿನೋದಮಾಡುತ್ತಾನೆ:

ನಾಪರಾಧ್ಯಂತಿ ಮೇ ಕಾಮಂ ವಾನರಾ ವನಚಾರಿಣಃ ।
ಜಾತಿರಸ್ಮದ್ವಿಧಾನಾಂ ಸಾ ಪುರೋದ್ಯಾನವಿಭೂಷಣಮ್ ॥

- ಯುದ್ಧ ೬೫:೪೪

ರಾಕ್ಷಸಭಟರು ಅಗಸೆಯ ಬಾಗಿಲಿನಿಂದ ಯುದ್ಧಭೂಮಿಗೆ ಹೋಗುತ್ತಾರೆ. ಕುಂಭಕರ್ಣನು ಕೋಟೆಯನ್ನು ಕಾಲಿನಿಂದ ದಾಟಿಕೊಂಡು ಹೋಗುತ್ತಾನೆ!

ಸ ಲಂಘಯಿತ್ವಾ ಪ್ರಾಕಾರಂ ಪದ್ಭ್ಯಾಂ ಪರ್ವತಸಂನಿಭಃ ॥

- ಯುದ್ಧ ೬೫:೫೩

ಅತ್ಯುನ್ನತಶರೀರನಾದ ಕುಂಭಕರ್ಣನ ಬಾಯಿ ಆಕಾಶದಲ್ಲಿತ್ತು. ಅವನು ಅಬ್ಬರಿಸುತ್ತ ರಣಭೂಮಿಗೆ ಬಂದಾಗ ಆಕಾಶದಲ್ಲಿ ಮೋಡವು ಗುಡುಗಿದಂತಾಯಿತು! ಕಪಿಗಳು ಚಲ್ಲಾಪಿಲ್ಲಿಯಾಗಿ ಓಡಿಹೋದರು.

ಕುಂಭಕರ್ಣನ ಯುದ್ಧದ ಧಾಟಿಯೇ ಬೇರೆ. ಅವನು ಕಪಿಗಳನ್ನು ಬಡಿದು ಕೊಲ್ಲುವುದಕ್ಕಿಂತ ತಿಂದುಬಿಡುವುದೇ ಹೆಚ್ಚು! ಕಡೆ ಕಡೆಗೆ ಕ್ರೋಧಾವೇಶದಲ್ಲಿ ಕಪಿಗಳನ್ನು ಬರಗಿ ನುಂಗಿಬಿಡುತ್ತಿದ್ದನಂತೆ! ಕಪಿಗಳು ಅವನ ಕಿವಿಗಳಿಂದಲೂ ಮೂಗಿನ ಹೊಳ್ಳೆಗಳಿಂದಲೂ ಹಾರಿಹಾರಿ ಹೊರಗೆ ಬರುತ್ತಿದ್ದನಂತೆ! ಕುಂಭಕರ್ಣನ ಯುದ್ಧ ಮಾರ್ಗವೆಲ್ಲವನ್ನೂ ವಾಲ್ಮೀಕಿ ಮುನಿಗಳು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ.

ರಾವಣನೂ ನಗುವುದುಂಟು! ಅವನ ನಗುವಿನಲ್ಲಿ ವಿನೋದಕ್ಕಿಂತ ಭೀಷಣತೆ ಹೆಚ್ಚು! ಅವನ ನಗುವೆಂದರೆ ವಿಕಟಹಾಸ್ಯ! ಯಾವ ಪ್ರಚೋದನೆಗೂ ಸೀತಾದೇವಿಯು ಜಗ್ಗದೆ ರಾವಣನನ್ನು ಧಿಕ್ಕರಿಸಿದಾಗ, ರಾವಣನು ಕೋಪಾವಿಷ್ಟನಾದನು. ಆಗ ಧಾನ್ಯಮಾಲಿನಿಯೆಂಬ ರಾವಣನ ಭಾರ್ಯೆಯು ಮುಂದೆ ಬಂದು ರಾವಣನನ್ನು ಅಪ್ಪಿಕೊಂಡು ''ಮಹಾರಾಜ, ಈ ಸೀತೆಯಿಂದ ಆಗಬೇಕಾದ್ದೇನು? ನನ್ನೊಡನೆ ವಿಹರಿಸು!ಕಾಮವಿಲ್ಲದವಳನ್ನು ಕಾಮಿಸುವವನಿಗೆ ಶರೀರ ಶ್ರಮವೇ ಹೊರತು ಸುಖವಿಲ್ಲ! ಕಾಮಿಸಿ ಬಂದವಳನ್ನು ಪ್ರೀತಿಸುವವನಿಗೆ ಬಹಳ ಸುಖವುಂಟು'' ಎಂದು ಹೇಳಿ ರಾವಣನನ್ನು ಮುಂದೆ ನುಗ್ಗದಂತೆ

ಜಗ್ಗಿದಳು. ಆಗ ರಾವಣನು 'ಹೋ' ಎಂದು ಗಟ್ಟಿಯಾಗಿ ನಗುತ್ತ ಅರಮನೆಗೆ ಹಿಂದಿರುಗಿದನಂತೆ! (ಸುಂದರಕಾಂಡ, ೨೨:೪೨, ೪೩)

ಉದ್ದಿನ ಕಾಳಿನ ರಾಶಿ

ಹೋಲಿಕೆಗಳನ್ನು ಕೊಡುವಾಗ, ವಿಶೇಷಣಗಳನ್ನು ಕೊಡುವಾಗ, ಸಣ್ಣಪುಟ್ಟ ಸಂದರ್ಭಗಳಲ್ಲಿಯೂ ವಾಲ್ಮೀಕಿ ಮುನಿಗಳು ಹಾಸ್ಯವನ್ನು ಮಿನುಗಿಸುತ್ತಾರೆ. ಹನುಮಂತನು ಸೀತೆಯನ್ನು ಹುಡುಕುತ್ತ ರಾವಣನ ಅಂತಃಪುರಕ್ಕೆ ಹೋದಾಗ ಪರ್ಯಂಕದಲ್ಲಿ ಮಲಗಿದ್ದ ರಾವಣನನ್ನು ಕಂಡನು. ಕಪ್ಪು ಬಣ್ಣದ ಬೃಹದಾಕೃತಿಯ ಆ ರಾಕ್ಷಸೇಂದ್ರನು, ಪೇರಿಸಿದ ಉದ್ದಿನ ಕಾಳಿನ ರಾಶಿಯಂತೆ ಕಾಣಿಸಿದನಂತೆ! 'ಮಾಷರಾಶಿ ಪ್ರತೀಕಾಶಮ್'. ರತ್ನಖಚಿತವಾದ ಸುವರ್ಣದೀಪಸ್ತಂಭಗಳು ನಿದ್ರಿಸುತ್ತಿದ್ದ ಸ್ತ್ರೀಯರ ಸೌಂದರ್ಯವನ್ನು ಎವೆಯಿಕ್ಕದೆ ನೋಡುತ್ತಿರುವಂತೆ ಕಾಣಿಸಿತು! ಅಂತಃಪುರದಲ್ಲಿದ್ದ ಕೆಲವು ದೀಪಗಳು ಮಂದಪ್ರಕಾಶವಾಗಿದ್ದವು. ದ್ಯೂತದಲ್ಲಿ ಸೋತು ಜೋಲು ಮೋರೆ ಹಾಕಿರುವ ಜೂಜು ಖೋರರಂತೆ ಅವು ಕಾಣುತ್ತಿದ್ದವು! ಕುಂಭಕರ್ಣನು ಅಂಗದಗಳನ್ನು ತೊಟ್ಟು ಕಿರೀಟವನ್ನು ಧರಿಸಿ ನಿದ್ರಿಸುತ್ತಿದ್ದನಂತೆ! 'ಕಾಂಚನಾಂಗದನದ್ಧಾಂಗಂ ಕಿರೀಟಿನಮರಿಂದಮಮ್'. ಕುಂಭಕರ್ಣನು ಆ ಪ್ರಕಾರದಲ್ಲಿ ಪ್ರಾಣಿಗಳನ್ನು ತಿನ್ನತೊಡಗಿದರೆ ಸ್ವಲ್ಪ ಕಾಲದಲ್ಲಿಯೇ ಜಗತ್ತು ಶೂನ್ಯವಾಗುವುದೆಂದು ಬ್ರಹ್ಮನಿಗೆ ಚಿಂತೆಯಾಯಿತಂತೆ! 'ಅಚಿರೇಣೈವ ಕಾಲೇನ ಶೂನ್ಯೋ ಲೋಕೋ ಭವಿಷ್ಯತಿ' ಪಂಪಾತೀರದ ಕಾಡಿನಲ್ಲಿ ಸಾಯಂಕಾಲದ ಹೊತ್ತು ಕಪಿಗಳು ಬಳ್ಳಿಗಳನ್ನು ಹೂಮಾಲೆಗಳಂತೆ ಕೊರಳಿಗೆ ಸುತ್ತಿಕೊಂಡು ತಿರುಗಾಡಲು ಹೊರಡುತ್ತವೆಯಂತೆ! 'ವಿಟಪೀ ಮಾಲ್ಯಧಾರಿಣಃ' ಪಂಪಾ ಸರೋವರದಲ್ಲಿ ಹೆರೆದುಪ್ಪ (ಗಟ್ಟಿಯಾದ ತುಪ್ಪ)ದಂತಿರುವ ದೊಡ್ಡ ದೊಡ್ಡ ನೀರುಹಕ್ಕಿಗಳು ಸಿಗುತ್ತವೆಯಂತೆ! 'ಘೃತ ಪಿಂಡೋಪಮಾನ್ ಸ್ಥೂಲಾನ್.' ರಾವಣ ಸುಗ್ರೀವರು

ಮಲ್ಲಯುದ್ಧ ಮಾಡುವಾಗ ತಿಂಡಿಗಾಗಿ ಕಚ್ಚಾಡುವ ಬೆಕ್ಕುಗಳಂತೆ ಕಾಣಿಸಿದರಂತೆ! 'ಮಾರ್ಜಾರಾವಿವ ಭಕ್ಷಾರ್ಥೇ.'

ಯುದ್ಧವು ಮುಗಿಯಿತು. ಲಂಕೆಯು ಸ್ವಾಧೀನವಾಯಿತು. ಶ್ರೀರಾಮನ ವಿಜಯವಾರ್ತೆಯನ್ನು ಹನುಮಂತನು ಜಾನಕಿಗೆ ಮುಟ್ಟಿಸಿದನು. ದೇವಿಯ ಆನಂದಕ್ಕೆ ಪಾರವುಂಟೆ? ''ಸೌಮ್ಯ-ಹನುಮಂತ, ಈ ಆನಂದದ ಸುದ್ದಿಯನ್ನು ತಂದ ನಿನಗೆ ಈ ಜಗತ್ತಿನಲ್ಲಿರುವ ಯಾವ ಅಮೂಲ್ಯ ವಸ್ತುವನ್ನು ಕೊಟ್ಟರೂ ಸಾಲದು'' ಎಂದಳು. ಹನುಮಂತ ಯಾವ ಬಹುಮಾನವನ್ನು ಬಯಸಿಯಾನು? ಜಾನಕಿಯ ಸುತ್ತಲೂ ನಿಂತಿದ್ದ ರಾಕ್ಷಸಿಯರನ್ನು ನೋಡಿದಾಗ ಅವನಿಗೆ ಒಂದು ಇಚ್ಛೆ ಉಂಟಾಯಿತು. ''ದೇವಿ, ನನಗೆ ಒಂದು ಬಯಕೆ ಇದೆ. ಒಂದು ವರವನ್ನು ಸಲ್ಲಿಸು. ಈ ರಾಕ್ಷಸಿಯರು ನಿನಗೆ ಹಿಂಸೆ ಕೊಡುತ್ತಿದ್ದರು. ಆ ಸೇಡನ್ನು ತೀರಿಸಿ-ಕೊಳ್ಳಬೇಕೆಂದಿದ್ದೇನೆ! ಇವರ ಕಿವಿ ಮೂಗುಗಳನ್ನು ಕಚ್ಚಿ, ಕೂದಲನ್ನು ಕಿತ್ತು ಚಿತ್ರಹಿಂಸೆಯನ್ನು ಕೊಡಬೇಕೆಂದಿದ್ದೇನೆ. ಇದಕ್ಕೆ ಅನುಮತಿ ಕೊಡು!'' ಎಂದು ಕೇಳುತ್ತಾನೆ.

ಹಂತುಮಿಚ್ಛಾಮ್ಯಹಂ ಸರ್ವಾ ಯಾಭಿಸ್ತ್ವಂ ತರ್ಜಿತಾ ಪುರಾ ।
ಕ್ಲಿಶ್ಯಂತೀಂ ಪತಿದೇವಾಂ ತ್ವಾಮಶೋಕವನಿಕಾಂ ಗತಾಮ್ ॥

ಘೋರರೂಪಸಮಾಚಾರಾಃ ಕ್ರೂರಾಃ ಕ್ರೂರತರೇಕ್ಷಣಾಃ ।
ರಾಕ್ಷಸ್ಯೋ ದಾರುಣಕಥಾ ವರಮೇತತ್ ಪ್ರಯಚ್ಛ ಮೇ ॥

ಮುಷ್ಟಿಭಿಃ ಪಾಣಿಭಿಃ ಸರ್ವಾಶ್ಚರಣೈಶ್ಚೈವ ಶೋಭನೇ ।
ಇಚ್ಛಾಮಿ ವಿವಧೈರ್ಘಾತೈರ್ಹಂತುಮೇತಾಃ ಸುದಾರುಣಾಃ ॥

ಘಾತೈರ್ಜಾನುಪ್ರಹಾರೈಶ್ಚ ದಶನಾನಾಂ ಚ ಪಾತನೈಃ ।
ಭಕ್ಷಣೈಃ ಕರ್ಣನಾಸಾನಾಂ ಕೇಶಾನಾಂ ಲುಂಚನೈಸ್ತಥಾ ॥

ನಖೈಃ ಶುಷ್ಕಮುಖೈಶ್ಚೈವ ದಾರುಣೈರ್ಲಂಘನೈರ್ಹತೈಃ ।
ನಿಪಾತ್ಯ ಹಂತುಮಿಚ್ಛಾಮಿ ತವ ವಿಪ್ರಿಯಕಾರಿಣೀಃ ॥
- ಯುದ್ಧ ೧೧೬:೩೧-೩೫

ಲಂಕಾಭಯಂಕರನೆನಿಸಿದ ಹನುಮಂತನಿಗೂ ರಾಕ್ಷಸಿಯರಮೇಲೆ ಸೇಡು ತೀರಿಸಿಕೊಳ್ಳುವ ಕಪಿ ಚಾಪಲ್ಯ!

ಹನುಮನ ವಿವಾಹ

ಶ್ರೀರಾಮನು ಅಯೋಧ್ಯಾಭಿಮುಖನಾಗಿ ಹೊರಟು ಭರದ್ವಾಜಾ-ಶ್ರಮಕ್ಕೆ ಬಂದಿದ್ದಾನೆ. ಈ ಆನಂದದ ವಾರ್ತೆಯನ್ನು ಭರತನಿಗೆ ತಿಳಿಸುವ ಭಾಗ್ಯವೂ ಹನುಮಂತನ ಪಾಲಿಗೆ ಬಂದಿತು. ಅವನು ಮಾನುಷವೇಷದಲ್ಲಿ ನಂದಿಗ್ರಾಮಕ್ಕೆ ಬಂದು ''ಭರತ, ಶ್ರೀರಾಮನು ಸೀತಾಲಕ್ಷ್ಮಣರೊಡನೆ ಕುಶಲದಲ್ಲಿದ್ದಾನೆ. ಇಲ್ಲಿಗೆ ಬರುತ್ತಿದ್ದಾನೆ'' ಎಂದು ತಿಳಿಸಿದನು. ಭರತನು ಆನಂದದಲ್ಲಿ ಮುಳುಗಿಹೋದನು. 'ಪಪಾತ ಸಹಸಾ ಹೃಷ್ಟೋ ಹರ್ಷಾ-ನ್ಮೋಹಂ ಜಗಾಮ ಹ'. ಅವನು ಹರ್ಷಾತಿರೇಕದಿಂದ ಹನುಮಂತನಿಗೆ 'ಅಪ್ಪಾ-ಪುಣ್ಯಾತ್ಮ, ಎಷ್ಟು ಆನಂದದ ಸುದ್ದಿಯನ್ನು ಹೇಳಿದೆ! ಇಂಥ ಸುದ್ದಿಯನ್ನು ತಂದ ನಿನಗೆ ಒಂದು ಲಕ್ಷ ಗೋವುಗಳನ್ನು ಕೊಡುವೆನು. ನೂರು ಗ್ರಾಮಗಳನ್ನು ದಾನಮಾಡುವೆನು. ಹದಿನಾರು ಮಂದಿ ಹುಡುಗಿಯರನ್ನು ಕೊಟ್ಟು ಮದುವೆಮಾಡಿಸುವೆನು!'' ಎನ್ನುತ್ತಾನೆ:

ದೇವೋ ವಾ ಮಾನುಷೋ ವಾ ತ್ವಮನುಕ್ರೋಶಾದಿಹಾಗತಃ ।
ಪ್ರಿಯಾಖ್ಯಾನಸ್ಯ ತೇ ಸೌಮ್ಯ ದದಾಮಿ ಬ್ರುವತಃ ಪ್ರಿಯಮ್ ॥

ಗವಾಂ ಶತಸಹಸ್ರಂ ಚ ಗ್ರಾಮಾಣಾಂ ಚ ಶತಂ ಪರಮ್ ।
ಸುಕುಂಡಲಾಃ ಶುಭಾಚಾರಾ ಭಾರ್ಯಾಃ ಕನ್ಯಾಶ್ಚ ಷೋಡಶ ॥
- ಯುದ್ಧ ೧೨೮ : ೪೨-೪೩

ವಿಭಾವ್ಯ ಚಾರುತಾಹೇತುಂ ವಾಲ್ಮೀಕಿರ್ಮುನಿಪುಂಗವಃ ।
ಶ್ರೀಮದ್ರಾಮಾಯಣೇ ಕಾವ್ಯೇ ಹಾಸ್ಯಮೇವಮಪೋಷಯತ್ ॥

ರಾಮಾಯಣೇ ವಿವಿಧಭಾವರಸಾಯನೇಽಸ್ಮಿನ್
ಕಾವ್ಯಜ್ಞ ಲೋಕಹೃದಯಸ್ಪೃಶಿ ಭವ್ಯಕಾವ್ಯೇ ।
ವಾಲ್ಮೀಕಿರಾದಿಕವಿರಾಡ್ ರಸತತ್ತ್ವದರ್ಶೀ
ಹಾಸ್ಯಂ ನ್ಯವೇಶಯದನರ್ಘಮಿವೈಲಚೂರ್ಣಮ್ ॥

ಶ್ರೀರಾಮಕರ್ಣಾಮೃತಮ್

ಶ್ರೀರಾಘವಂ ದಶರಥಾತ್ಮಜಮಪ್ರಮೇಯಂ
ಸೀತಾಪತಿಂ ರಘುವರಾನ್ವಯರತ್ನದೀಪಮ್ ।
ಆಜಾನುಬಾಹುಮರವಿಂದದಲಾಯತಾಕ್ಷಂ
ರಾಮಂ ನಿಶಾಚರವಿನಾಶಕರಂ ನಮಾಮಿ ॥ ೧ ॥

ಶ್ರೀರಾಮಚಂದ್ರೇ ರಮತಾಂ ಮನೋ ಮೇ
ರಮಾಂಗವಾಮೇ ವಿಪದಾಂ ವಿರಾಮೇ ।
ಜಿತಾರಿರಾಮೇ ಪ್ರಣತಾರಿರಾಮೇ
ಗುಣಾಭಿರಾಮೇ ಭುವನೈಕರಾಮೇ ॥ ೨ ॥

ರಾಮಂ ರತ್ನಕಿರೀಟಕುಂಡಲಧರಂ ಕೇಯೂರಹಾರಾನ್ವಿತಂ
ಸೀತಾಲಂಕೃತವಾಮಭಾಗಮತುಲಂ ಸಿಂಹಾಸನಸ್ಥಂ ಪ್ರಭುಮ್ ।
ಸುಗ್ರೀವಾದಿಸಮಸ್ತವಾನರಗಣೈಃ ಸಂಸೇವ್ಯಮಾನಂ ಸದಾ
ವಿಶ್ವಾಮಿತ್ರಪರಾಶರಾದಿಮುನಿಭಿಃ ಸಂಸ್ತೂಯಮಾನಂ ಭಜೇ ॥

ವಾಮೇ ಭೂಮಿಸುತಾ ಪುರಸ್ತು ಹನುಮಾನ್ ಪಶ್ಚಾತ್
ಸುಮಿತ್ರಾಸುತಃ
ಶತ್ರುಘ್ನೋ ಭರತಶ್ಚ ಪಾರ್ಶ್ವದಲಯೋರ್ವಾಯ್ವಾದಿ
ಕೋಣೇಷ್ವಪಿ ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ
ಜಾಂಬವಾನ್
ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ
ಶ್ಯಾಮಲಮ್ ॥

ವೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಟಪೇ
ಮಧ್ಯೇಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಮ್ ।

ಅಗ್ರೇ ವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃ ಪರಂ
ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇ
ಶ್ಯಾಮಲಮ್

ವಂದಾಮಹೇ ಮಹೇಶಾನಚಂಡಕೋದಂಡಖಂಡನಮ್ ।
ಜಾನಕೀಹೃದಯಾನಂದಚಂದನಂ ರಘುನಂದನಮ್ ॥ ೬ ॥

ಜಾನಾತಿ ರಾಮ ತವ ನಾಮರುಚಿಂ ಮಹೇಶೋ
ಜಾನಾತಿ ಗೌತಮಸತೀ ಚರಣಪ್ರಭಾವಮ್ ।
ಜಾನಾತಿ ದೋರ್ಬಲಪರಾಕ್ರಮಮೀಶಚಾಪೋ
ಜಾನಾತ್ಯಮೋಘಪಟುಬಾಣಗತಿಂ ಪಯೋಧಿಃ ॥ ೭ ॥

ಶೃಂಗಾರಂ ಕ್ಷಿತಿನಂದಿನೀವಿಹರಣೇ ವೀರಂ ಧನುರ್ಭಂಜನೇ
ಕಾರುಣ್ಯಂ ಬಲಿಭೋಜನೇಽದ್ಭುತರಸಂ ಸಿಂಧೌ ಗಿರಿಸ್ಥಾಪನೇ ।
ಹಾಸ್ಯಂ ಶೂರ್ಪಣಖಾಮುಖೇ ಭಯಮಘೇ ಬೀಭತ್ಸಮನ್ಯಾಮುಖೇ
ರೌದ್ರಂ ರಾವಣಮರ್ದನೇ ಮುನಿಜನೇ ಶಾಂತಂ ವಪುಃ
ಪಾತು ನಃ ॥ ೮ ॥

ಮಾತಾ ರಾಮೋ ಮತ್ಪಿತಾ ರಾಮಚಂದ್ರೋ
ಭ್ರಾತಾ ರಾಮೋ ಮತ್ಸಖೋ ರಾಘವೇಂದ್ರಃ ।
ಸರ್ವಸ್ವಂ ಮೇ ರಾಮಚಂದ್ರೋ ದಯಾಲುಃ
ನಾನ್ಯಂ ದೈವಂ ನೈವ ಜಾನೇ ನ ಜಾನೇ ॥ ೯ ॥

ಭೂಕಂಪಂ ಜನಯನ್ನಭೋ ವಿದಲಯನ್ನಂಭೋನಿಧಿಂ ಕ್ಷೋಭಯನ್
ದೈತೇಯಾಂಶ್ಚ ವಿಮರ್ದಯನ್ ಗಿರಿವರಾನ್ ಭಿಂದನ್
ದಿಶಃ ಪೂರಯನ್ ।
ವೈದೇಹೀಮಥ ಮೋದಯನ್ ಸಕಲಗೀರ್ವಾಣಾನ್
ಶಿರಃ ಕಂಪಯನ್
ಪಾಯಾನ್ನೋ ರಘುವೀರಬಾಣವಿಲಸತ್ಕೋ-
ದಂಡಚಂಡಧ್ವನಿಃ ॥ ೧೦ ॥

ವಿಮಲಕಮಲನೇತ್ರಂ ವಿಸ್ಫುರನ್ನೀಲಗಾತ್ರಂ
ತಪನಕುಲಪವಿತ್ರಂ ದಾನವಧ್ವಾಂತಮಿತ್ರಮ್ ।
ಭುವನಶುಭಚರಿತ್ರಂ ಭೂಮಿಪುತ್ರೀಕಲತ್ರಂ
ದಶರಥವರಪುತ್ರಂ ನೌಮಿ ರಾಮಾಖ್ಯಮಿತ್ರಮ್ ॥ ೧೧ ॥

ಜಗತಿ ವಿಶದಮಂತ್ರೋ ಜಾನಕೀಪ್ರಾಣಮಂತ್ರೋ
ವಿಬುಧವಿನುತಮಂತ್ರೋ ವಿಶ್ವವಿಖ್ಯಾತಮಂತ್ರಃ ।
ದಶರಥನುತಮಂತ್ರೋ ದೈತ್ಯಸಂಹಾರಮಂತ್ರೋ
ರಘುಪತಿನಿಜಮಂತ್ರೋ ರಾಮರಾಮೇತಿ ಮಂತ್ರಃ ॥ ೧೨ ॥

ಕನಕನಿಕಷಭಾಸಾ ಸೀತಯಾಲಿಂಗಿತಾಂಗೋ
ನವಕುವಲಯದಾಮಶ್ಯಾಮವರ್ಣಾಭಿರಾಮಃ ।
ಅಭಿನವ ಇವ ವಿದ್ಯುನ್ಮಂಡಿತೋ ಮೇಘಖಂಡಃ
ಶಮಯತು ಮಮ ತಾಪಂ ಸರ್ವದಾ ರಾಮಚಂದ್ರಃ ॥ ೧೩ ॥

ಕದಾ ವಾ ಸಾಕೇತೇ ವಿಮಲಸರಯೂತೀರಪುಲಿನೇ
ಸಮಾಸೀನಃ ಶ್ರೀಮದ್ರಘುಪತಿಪದಾಬ್ಜಂ ಹೃದಿ ಭಜನ್ ।
ಅಯೇ ರಾಮ ಸ್ವಾಮಿನ್ ಜನಕತನಯಾವಲ್ಲಭ ವಿಭೋ
ಪ್ರಸೀದೇತಿ ಕ್ರೋಶನ್ ನಿಮಿಷಮಿವ ನೇಷ್ಯಾಮಿ
ದಿವಸಾನ್ ॥ ೧೪ ॥

ಲೋಕತ್ರಾಣಾನುಕಾರೀ ದಶವದನಶಿರಃಪಂಕ್ತಿವಿಚ್ಛೇದಕಾರೀ
ಲಂಕಾಲಂಕಾರಹಾರೀ ಭೃಗುತನಯಮನಃಸರ್ವಗರ್ವಾಪಹಾರೀ ।
ಸೀತಾಸೀಮಂತಕಾರೀ ಮಣಿಮಯಮಕುಟೋ ದಿವ್ಯಕೋದಂಡಧಾರೀ
ಶ್ರೀರಾಮಃ ಪಾಪಹಾರೀ ಶಮಯತು ದುರಿತಂ
ಭೂಮಿಭಾರಾಪಹಾರೀ ॥ ೧೫ ॥

ಬ್ರಹ್ಮಾದಿಯೋಗಿಮುನಿಪೂಜಿತಸಿದ್ಧಮಂತ್ರಂ
ದಾರಿದ್ರ್ಯದುಃಖಭವರೋಗವಿನಾಶಮಂತ್ರಮ್ ।

ಸಂಸಾರಸಾಗರಸಮುತ್ತರಣೈಕಮಂತ್ರಂ
ವಂದೇ ಮಹಾಭಯಹರಂ ರಘುರಾಮಮಂತ್ರಮ್ ॥ ೧೬ ॥

ವ್ಯಾಮೋಹಪ್ರಶಮೌಷಧಂ ಮುನಿಮನೋವೃತ್ತಿಪ್ರವೃತ್ತ್ಯೌಷಧಂ
ದೈತ್ಯೋನ್ಮೂಲಕರೌಷಧಂ ಭವಭಯಪ್ರಧ್ವಂಸನೈಕೌಷಧಮ್ ।
ಭಕ್ತಾನಂದಕರೌಷಧಂ ತ್ರಿಭುವನೇ ಸಂಜೀವನೈಕೌಷಧಂ
ಶ್ರೇಯಃಪ್ರಾಪ್ತಿಕರೌಷಧಂ ಪಿಬ ಮನಃ ಶ್ರೀರಾಮನಾಮೌಷಧಮ್

ರಾಮಾಭಿರಾಮಂ ನಯನಾಭಿರಾಮಂ
ವಾಚಾಭಿರಾಮಂ ವದನಾಭಿರಾಮಮ್ ।
ಸರ್ವಾಭಿರಾಮಂ ಚ ಸದಾಭಿರಾಮಂ
ವಂದೇ ಸದಾ ದಾಶರಥಿಂ ಚ ರಾಮಮ್ ॥ ೧೮ ॥

ಜಯ ಜಯ ರಘುರಾಮ ಶ್ರೀಮುಖಾಂಭೋಜಭಾನೋ
ಜಯಜಯ ರಘುವೀರ ಶ್ರೀಮದಂಭೋಜನೇತ್ರ ।
ಜಯ ಜಯ ರಘುನಾಥ ಶ್ರೀಕರಾಭ್ಯರ್ಚಿತಾಂಘ್ರೇ
ಜಯ ಜಯ ರಘುವರ್ಯ ಶ್ರೀಶ ಕಾರುಣ್ಯಸಿಂಧೋ ॥ ೧೯ ॥

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ ॥೨೦॥

ಶ್ರೀರಾಮಾಯಣಮಾದಿಕಾವ್ಯಮೃಷಿಣಾ ವಾಲ್ಮೀಕಿನಾ ನಿರ್ಮಿತಂ
ವೇದಾಂತಾರ್ಥವಿಶಾರದೈರನುದಿನಂ ಸ್ತುತ್ಯಂ ಸುರೈರರ್ಚಿತಮ್ ।
ಶ್ರೋತೄಣಾಮಘನಾಶನಂ ಸುರತರೋಸ್ತುಲ್ಯಂ ತು ಮುಕ್ತಿಪ್ರದಂ
ಯೇ ಶೃಣ್ವಂತಿ ಪಠಂತಿ ರಾಮಚರಿತಂ ತೇ ಯಾಂತಿ ವಿಷ್ಣೋಃ
ಪದಮ್ ॥ ೨೧ ॥

ವಂದೇ ನೀಲಸರೋಜಕೋಮಲರುಚಿಂ ವಂದೇ ಜಗದ್ವಂದಿತಂ
ವಂದೇ ಸೂರ್ಯಕುಲಾಬ್ಧಿಕೌಸ್ತುಭಮಣಿಂ ವಂದೇ
ಸುರಾರಾಧಿತಮ್ ।

ವಂದೇ ಪಾತಕಪಂಚಕಪ್ರಹರಣಂ ವಂದೇ ಜಗತ್ಕಾರಣಂ
ವಂದೇ ವಿಂಶತಿಪಂಚತತ್ತ್ವರಹಿತಂ ವಂದೇ ಸದಾ
ರಾಘವಮ್ ॥ ೨೨ ॥

ಇಕ್ಷ್ವಾಕುವಂಶಾರ್ಣವಜಾತರತ್ನಂ
ಸೀತಾಂಗನಾಯೌವನಭಾಗ್ಯರತ್ನಮ್ ।
ವೈಕುಂಠರತ್ನಂ ಮಮ ಭಾಗ್ಯರತ್ನಂ
ಶ್ರೀರಾಮರತ್ನಂ ಶಿರಸಾ ನಮಾಮಿ ॥ ೨೩ ॥

ರಾಮಂ ಕೋಮಲನೀಲಮೇಘವಿಲಸದ್ಗಾತ್ರಂ ಪಯೋಜಾನನಂ
ಕಾಕುತ್ಸ್ಥಂ ದಶಕಂಠಬಾಹುವಿದಲತ್ಕೋದಂಡಬಾಣಾನ್ವಿತಮ್ ।
ಪಾಪಘ್ನಂ ವಿಶದಾಯತಾಕ್ಷಿಯುಗಲಂ ಸೌಮಿತ್ರಿಸಂಸೇವಿತಂ
ಭಕ್ತಾನಾಂ ಪರಮೌಷಧಂ ಮುನಿವರ್ಯೈಃ ಸಂಸ್ತೂಯಮಾನಂ
ಭಜೇ ॥ ೨೪ ॥

ಜಲನಿಧಿಕೃತಸೇತುಂ ದೇವತಾನಂದಹೇತುಂ
ದಶಮುಖಮುಖರಕ್ಷೋದಾರವೈಧವ್ಯಹೇತುಮ್ ।
ಮುನಿಜನನಿವಹಾನಾಂ ಮುಕ್ತಿಸೌಖ್ಯಾದಿಹೇತುಂ
ರಘುವರಕುಲಕೇತುಂ ಕೀರ್ತಯೇ ಧರ್ಮಹೇತುಮ್ ॥ ೨೫ ॥

ಸಕಲಭುವನರತ್ನಂ ಸಚ್ಚಿದಾನಂದರತ್ನಂ
ಸಕಲಹೃದಯರತ್ನಂ ಸೂರ್ಯಬಿಂಬಾಂತರತ್ನಮ್ ।
ವಿಮಲಸುಕೃತರತ್ನಂ ವೇದವೇದಾಂತರತ್ನಂ
ಪುರಹರಜಪರತ್ನಂ ಪಾತು ಮಾಂ ರಾಮರತ್ನಮ್ ॥ ೨೬ ॥

ದಶರಥಸುತಮಂತ್ರಂ ದೈತ್ಯಸಂಹಾರಮಂತ್ರಂ
ವಿಬುಧವಿನುತಮಂತ್ರಂ ವಿಶ್ವವಿಖ್ಯಾತಮಂತ್ರಮ್ ।
ಮುನಿಗಣನುತಮಂತ್ರಂ ಮುಕ್ತಿಮಾರ್ಗೈಕಮಂತ್ರಂ
ರಘುಪತಿನಿಜಮಂತ್ರಂ ರಾಮರಾಮೇತಿ ಮಂತ್ರಮ್ ॥ ೨೭ ॥

ರಾಮಂ ಪುರಾಣಪುರುಷಂ ರಮಣೀಯವೇಷಂ
ರಾಜಾಧಿರಾಜಮಕುಟಾರ್ಚಿತಪಾದಪೀಠಮ್ ।
ಸೀತಾಪತಿಂ ರಘುವರಂ ಜಗದೇಕವೀರಂ
ಶ್ರೀರಾಮಚಂದ್ರಮನಿಶಂ ಕಲಯಾಮಿ ಚಿತ್ತೇ ॥ ೨೮ ॥

ಯಃ ಪೃಥ್ವೀಭರವಾರಣಾಯ ದಿವಿಜೈಃ ಸಂಪ್ರಾರ್ಥಿತಶ್ಚಿನ್ಮಯಃ
ಸಂಜಾತಃ ಪೃಥಿವೀತಲೇ ರಘುಕುಲೇ ಮಾಯಾಮನುಷ್ಯೋಽವ್ಯಯಃ।
ನಿಶ್ಚಕ್ರಂ ಹತರಾಕ್ಷಸಃ ಪುನರಗಾತ್ ಬ್ರಹ್ಮತ್ವಮಾದ್ಯಂ ಸ್ಥಿರಾಂ
ಕೀರ್ತಿಂ ಪಾಪಹರಾಂ ವಿಧಾಯ ಜಗತಾಂ ತಂ ಜಾನಕೀಶಂ
ಭಜೇ ॥ ೨೯ ॥

ವಿಶ್ವೋದ್ಭವಸ್ಥಿತಿಲಯಾದಿಷು ಹೇತುಮೇಕಂ
ಮಾಯಾಶ್ರಯಂ ವಿಗತಮಾಯಮಚಿಂತ್ಯಮೂರ್ತಿಮ್ ।
ಆನಂದಸಾಂದ್ರಮಮಲಂ ನಿಜಬೋಧರೂಪಂ
ಸೀತಾಪತಿಂ ವಿದಿತತತ್ತ್ವಮಹಂ ನಮಾಮಿ ॥ ೩೦ ॥

ರಾಮಚಂದ್ರಚರಣಾರವಿಂದಯೋ-
ರಂತರಂಗ ಚರ ಭೃಂಗಲೀಲಯಾ ।
ತತ್ರ ಸಂತಿ ಚ ರಸಾಶ್ಚತುರ್ವಿಧಾಃ
ಮಾಕರಂದರಸ ಏವ ಪಂಕಜೇ ॥ ೩೧ ॥

ಕಲ್ಯಾಣಾನಾಂ ನಿದಾನಂ ಕಲಿಮಲಮಥನಂ ಪಾವನಂ ಪಾವನಾನಾಂ
ಪಾಥೇಯಂ ತನ್ಮುಮುಕ್ಷೋಃ ಪರಮಸುಖಪದಪ್ರಾಪ್ತಯೇ
ಪ್ರಸ್ಥಿತಸ್ಯ ।
ವಿಶ್ರಾಮಸ್ಥಾನಮೇಕಂ ಕವಿವರವಚಸಾಂ ಜೀವನಂ ಜೀವಭಾಜಾಂ
ಬೀಜಂ ಧರ್ಮದ್ರುಮಸ್ಯ ಪ್ರಭವತು ಭವತಾಂ ಭೂತಯೇ
ರಾಮನಾಮ ॥ ೩೨ ॥

ಜಯತು ಜಯತು ಹಾರೀ ಜಾನಕೀಮೋದಕಾರೀ
ತಪನಕುಲವಿಹಾರೀ ದಂಡಕಾರಣ್ಯಚಾರೀ ।

ದಶವದನಕುಠಾರೀ ದೈತ್ಯವಿಚ್ಛೇದಕಾರೀ
ಮಣಿಮಕುಟವಿಧಾರೀ ಚಂಡಕೋದಂಡಧಾರೀ ॥ ೩೩ ॥

ಶ್ರೀರಾಮಚಂದ್ರಃ ಶ್ರಿತಪಾರಿಜಾತಃ
ಸಮಸ್ತಕಲ್ಯಾಣಗುಣಾಭಿರಾಮಃ ।
ಸೀತಾಮುಖಾಂಭೋರುಹಚಂಚರೀಕೋ
ನಿರಂತರಂ ಮಂಗಲಮಾತನೋತು ॥ ೩೪ ॥

ಯತ್ಪಾದಪಂಕಜರಜಃ ಶ್ರುತಿಭಿರ್ವಿಮೃಗ್ಯಂ
ಯನ್ನಾಭಿಪಂಕಜಭವಃ ಕಮಲಾಸನಃ ಸ್ಯಾತ್ ।
ಯನ್ನಾಮಸಾರರಸಿಕೋ ಭಗವಾನ್ ಪುರಾರಿಃ
ತಂ ರಾಮಚಂದ್ರಮನಿಶಂ ಹೃದಿ ಭಾವಯಾಮಿ ॥ ೩೫ ॥

ಜಾನಾತಿ ರಾಮ ತವ ತತ್ತ್ವಗತಿಂ ಹನೂಮಾನ್
ಜಾನಾತಿ ರಾಮ ತವ ಸಖ್ಯಗತಿಂ ಕಪೀಂದ್ರಃ ।
ಜಾನಾತಿ ರಾಮ ತವ ಯುದ್ಧಗತಿಂ ದಶಾಸ್ಯೋ
ಜಾನಾತಿ ರಾಮ ಗಿರಿಜಾಪತಿರೇವ ಸತ್ಯಮ್ ॥ ೩೬ ॥

ಇದಂ ಶರೀರಂ ಶತಸಂಧಿಜರ್ಜರಂ
ಪತತ್ಯವಶ್ಯಂ ಪರಿಣಾಮದುರ್ಭಗಮ್ ।
ಕಿಮೌಷಧಂ ಪೃಚ್ಛಸಿ ಮೂಢ ದುರ್ಮತೇ
ನಿರಾಮಯಂ ರಾಮಕಥಾಮೃತಂ ಪಿಬ ॥ ೩೭ ॥

ಜನ್ಮಾದೌ ಕ್ರತುರಕ್ಷಣಂ ಮುನಿಪತೇಃ ಸ್ಥಾಣೋರ್ಧನುರ್ಭಂಜನಂ
ವೈದೇಹೀಗ್ರಹಣಂ ಪಿತುಶ್ಚ ವಚನಾದ್ಘೋರಾಟವೀಗಾಹನಮ್ ।
ಕೋದಂಡಗ್ರಹಣಂ ಖರಾದಿಮಥನಂ ಮಾಯಾಮೃಗಚ್ಛೇದನಂ
ಬದ್ಧಾಬ್ಧಿಕ್ರಮಣಂ ದಶಾಸ್ಯಹನನಂ ಚೈತದ್ಧಿ ರಾಮಾಯಣಮ್ ॥

ಶ್ರೀರಾಮಃ ಕಲ್ಪವೃಕ್ಷೋ ಮೇ ವಿರಾಮಃ ಸಕಲಾಪದಾಮ್ ।
ಅಭಿರಾಮಸ್ತ್ರಿಲೋಕಾನಾಂ ಕ್ಷೇಮಂ ರಾಮಃ ಕರೋತು ನಃ ॥೩೯॥

ಪ್ರಾತಃ ಸ್ಮರಾಮಿ ರಘುನಾಥಮುಖಾರವಿಂದಂ
ಮಂದಸ್ಮಿತಂ ಮಧುರಭಾಷಿ ವಿಶಾಲಫಾಲಮ್ ।
ಕರ್ಣಾವಲಂಬಿ ಚಲಕುಂಡಲಗಂಡಭಾಗಂ
ಕರ್ಣಾಂತದೀರ್ಘನಯನಂ ನಯನಾಭಿರಾಮಮ್ ॥ ೪೦ ॥

ಪ್ರಾತರ್ಭಜಾಮಿ ರಘುನಾಥಪದಾರವಿಂದಂ
ರಕ್ಷೋಗಣಾಯ ಭಯದಂ ವರದಂ ನಿಜೇಭ್ಯಃ ।
ಯದ್ ರಾಜಸಂಸದಿ ವಿಭಿದ್ಯ ಮಹೇಶಚಾಪಂ
ಸೀತಾಕರಗ್ರಹಣಮಂಗಲಮಾಪ ಸದ್ಯಃ ॥ ೪೧ ॥

ಪ್ರಾತರ್ನಮಾಮಿ ರಘುನಾಥಪದಾರವಿಂದಂ
ಪದ್ಮಾಂಕುಶಾದಿಶುಭರೇಖಮುಪಾತ್ತಶೋಭಮ್ ।
ಯೋಗೀಂದ್ರಮಾನಸಮಧುವ್ರತಸೇವ್ಯಮಾನಂ
ಶಾಪಾಪಹಂ ಸಪದಿ ಗೌತಮಧರ್ಮಪತ್ನ್ಯಾಃ ॥ ೪೨ ॥

ಪ್ರಾತರ್ನಮಾಮಿ ವಚಸಾ ರಘುನಾಥನಾಮ
ವಾಗ್ದೋಷಹಾರಿ ಸಕಲಂ ಕಲುಷಂ ನಿಹತ್ಯ ।
ಯತ್ ಪಾರ್ವತೀ ಸ್ವಪತಿನಾ ಸಹ ಶುದ್ಧಚಿತ್ತಾ
ಪ್ರೀತ್ಯಾ ಸಹಸ್ರಹರಿನಾಮಜಪಂ ಜಜಾಪ ॥ ೪೩ ॥

ಕಿಂ ಮಂತ್ರೈರ್ಬಹುಭಿಶ್ಚ ದುಷ್ಕರಫಲೈರಾಯಾಸದೈಸ್ತದ್ವಿದಾಂ
ಕಿಂಚಿಲ್ಲೋಪವಿಧಾನಮಾತ್ರವಿಫಲೈಃ ಸಂಸಾರದುಃಖಾವಹೈಃ ।
ಏಕಃ ಸನ್ನಪಿ ಸರ್ವಮಂತ್ರಫಲದೋ ದೋಷೋಜ್ಝಿತಃ ಸರ್ವದಾ
ಶ್ರೀರಾಮಃ ಶರಣಂ ಮಮೇತಿ ಪರಮೋ
ಮಂತ್ರೋಽಯಮಷ್ಟಾಕ್ಷರಃ ॥ ೪೪ ॥

ನದೀರಮಣಬಂಧನಂ ಮತಿಮತಾಮುದಾರಂ ಧನಂ
ಜಗದ್ವಿಹಿತರಂಜನಂ ಸಕಲಕಾಮನಿಷ್ಯಂದನಮ್ ।
ವಿಲಿಪ್ತಹರಿಚಂದನಂ ವಿನಯನಮ್ರಸಂಕ್ರಂದನಂ
ಭಜಾಮಿ ರಘುನಂದನಂ ಪವನನಂದನಸ್ಯಂದನಮ್ ॥ ೪೫ ॥

ದಶರಥವರಪುತ್ರಂ ಜಾನಕೀಸತ್ಕಲತ್ರಂ
ದಶಮುಖಹರದಕ್ಷಂ ಪದ್ಮಪತ್ರಾಯತಾಕ್ಷಮ್ ।
ಕರಧೃತಶರಚಾಪಂ ಚಾರುಮುಕ್ತಾಕಲಾಪಂ
ರಘುಕುಲನೃವರೇಣ್ಯಂ ರಾಮಮೀಡೇ ಶರಣ್ಯಮ್ ॥ ೪೬ ॥

ದಯಾರೂಪೇ ಭೂಪೇ ರಘುಕುಲಕಲಾಪೇ ಸುಹೃದಯೇ
ಭುಜಸ್ತಂಭೇ ದಂಭೇತರವಿಜಯಗುಂಭೇ ವಿಹರತಾಮ್ ।
ಮಹಾವೀರೇ ಧೀರೇ ದಶರಥಕುಮಾರೇ ಪರಿಲಸದ್-
ಗುಣಾರಾಮೇ ರಾಮೇ ದಶಮುಖವಿರಾಮೇ ಮಮ ಮನಃ ॥

ಕಿಂ ಯೋಗಶಾಸ್ತ್ರೈಃ ಕಿಮಶೇಷವಿದ್ಯಯಾ
ಕಿಂ ಯಾಗಗಂಗಾದಿವಿಶೇಷತೀರ್ಥೈಃ ।
ಕಿಂ ಬ್ರಹ್ಮಚರ್ಯಾಶ್ರಮಸಂಶ್ರಯೇಣ
ಭಕ್ತಿರ್ನ ಚಿತ್ತೇ ಯದಿ ರಾಮಚಂದ್ರೇ ॥ ೪೮ ॥

ರಾಮ ರಾಮ ದಯಾಸಿಂಧೋ ರಾವಣಾರೇ ಜಗತ್ಪತೇ ।
ತ್ವತ್ಪಾದಕಮಲಾಸಕ್ತಿರ್ಭವೇಜ್ಜನ್ಮನಿ ಜನ್ಮನಿ ॥ ೪೯ ॥

ಇಂದೀವರದಲಶ್ಯಾಮಃ ಪುಂಡರೀಕನಿಭೇಕ್ಷಣಃ ।
ಧೃತಕೋದಂಡತೂಣೀರೋ ರಾಮ ಏವ ಗತಿರ್ಮಮ ॥ ೫೦ ॥

✡ ✡ ✡

ಶ್ರೀರಾಮಚಂದ್ರಸುಪ್ರಭಾತಮ್

ವಿದ್ವಾನ್
ಎನ್. ರಂಗನಾಥಶರ್ಮಾ

ಅನುಷ್ಟುಪ್

ಶ್ರೀರಾಮಚಂದ್ರದಯಿತೇ ಸೀತೇ ಜನಕನಂದಿನಿ ।
ಉತ್ತಮೇ ಸರ್ವನಾರೀಣಾಂ ಸುಪ್ರಭಾತಂ ಮದಂಬ ತೇ ॥ ೧ ॥

ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ವಿಶ್ವಮಂಗಲಮ್ ॥ ೨ ॥

ವಸಂತತಿಲಕಾ

ಆಜಾನುಬಾಹುರರವಿಂದದಲಾಯತಾಕ್ಷಃ
ಕೋದಂಡಪಾಣಿರನುಜಾವನಿಜಾಸಹಾಯಃ ।
ಧ್ಯೇಯಃ ಸದಾ ಸಕಲಲೋಕಹೃದಂತರಾತ್ಮಾ
ರಾಮ ತ್ವಮೇವ ಶರಣಂ ತವ ಸುಪ್ರಭಾತಮ್ ॥ ೩ ॥

ವಾಕ್ಯಂ ಗುರೋರನುಸರನ್ ಕುಶಿಕಾತ್ಮಜಸ್ಯ
ಹತ್ವಾ ಸುಕೇತುತನಯಾಮನಯಪ್ರತಿಷ್ಠಾಮ್ ।
ಧರ್ಮಸ್ಯ ವೀರ ಜಯಮಾದ್ಯಮದರ್ಶಯಸ್ತ್ವಂ
ಶ್ರೀರಾಮಚಂದ್ರ ರಘುಪುಂಗವ ಸುಪ್ರಭಾತಮ್ ॥ ೪ ॥

ಯಜ್ಞಸ್ಯ ರಕ್ಷಣವಿಧಾವಥ ಗಾಧಿಸೂನೋಃ
ಅಸ್ತ್ರೇಣ ತೇ ಸದಹಿತೋ ನಿಹತಃ ಸುಬಾಹುಃ ।
ದೈತ್ಯಃ ಪರೋಽಪ್ಯಹೃತ ಪರ್ಣಮಿವಾರ್ಣವಾಂತಃ
ಶ್ರೀರಾಮಚಂದ್ರ ರಘುನಂದನ ಸುಪ್ರಭಾತಮ್ ॥ ೫ ॥

ಗತ್ವಾ ವಿದೇಹನಗರೀಮಮರ್ತ್ಯೈರನಮ್ಯಂ
ರೌದ್ರಂ ಧನುರ್ದಲಯತಾ ಜಯತಾಽಽಯತಾಕ್ಷೀಮ್ ।
ಕಾಕುತ್ಸ್ಥ ಕೀರ್ತಿವನಿತಾಪ್ಯಮಾಲಾ ತ್ವಯಾಪ್ತಾ
ಸೀತಾಪತೇ ರಘುಪತೇ ನೃಪತೇ ಪ್ರಭಾತಮ್ ॥ ೬ ॥

ಘೋರಂ ಪ್ರಗೃಹ್ಯ ಪರಶುಂ ಪರುಷಂ ಬ್ರುವಾಣೋ
ಧೀರ ತ್ವಯಾ ಧೃತಶರೇಣ ಸ ರೈಣುಕೇಯಃ ।
ನೀತಃ ಶಮಂ ವಿಪಿನವಹ್ನಿರಿವಾಂಬುದೇನ
ಶ್ರೀರಾಮಚಂದ್ರ ಜಯ ಸಂಪ್ರತಿ ಸುಪ್ರಭಾತಮ್ ॥ ೭ ॥

ಸೌವರ್ಣವರ್ಣವಪುಷಾ ತವ ಕರ್ತುಮಿಚ್ಛನ್
ಮಾಯಾವಿನಿರ್ಮಿತಜಗತ್ತ್ರಿತಯಸ್ಯ ಮೋಹಮ್ ।
ಮೂಢೋಽಸುರಃ ಶಕಲಿತಃ ಶಿತಸಾಯಕೇನ
ಶ್ರೀರಾಮಚಂದ್ರ ಜಯ ರಾಘವ ಸುಪ್ರಭಾತಮ್ ॥ ೮ ॥

ಉಗ್ರೋರಗಾವಿವ ನಿಕೃತ್ಯ ಕರಾಲಬಾಹೂ
ಪ್ರಕ್ಷಿಪ್ಯ ಭೀಷ್ಮವಪುಷಂ ಸುಷಿರೇ ಕಬಂಧಮ್ ।
ಸೌಮಿತ್ರಿಣಾ ಸಹ ಮದೀಶ ಯಯಾಥ ಪಂಪಾಂ
ಶ್ರೀರಾಮಚಂದ್ರ ರಘುವೀರ ಜಯ ಪ್ರಭಾತಮ್ ॥ ೯ ॥

ಸುಗ್ರೀವಸಖ್ಯಬಹುಲೀಕೃತಕಾರ್ಯ ಶೀಘ್ರಂ
ಸೂನುಂ ನಿಷೂದ್ಯ ಭವತಾ ಬಲಿನಂ ಬಲಾರೇಃ ।
ಧರ್ಮಸ್ಯ ಸೂಕ್ಷ್ಮತಮತಾ ವಿವೃತಾಽವತಾ ನಃ
ಶ್ರೀರಾಮಚಂದ್ರ ಮನುಜೇಂದ್ರ ಜಯ ಪ್ರಭಾತಮ್ ॥ ೧೦ ॥

ಮಾಲಿನೀ

ಅಥ ವಿರಹಸಮುತ್ಥಂ ಶೋಕವಹ್ನಿಂ ಪ್ರಿಯಾಯಾಃ
ರಘುವರ ಶಮಯಿಷ್ಯನ್ ಸ್ತಂಭಯನ್ನಂಬುರಾಶಿಮ್ ।

ತ್ರಿಭುವನಜಯಕೇತುಂ ಸೇತಮಾಬಧ್ಯ ಪಾರಂ
ಪ್ಲವಗಬಲಮನೈಷೀಃ ರಾಮ ತೇ ಸುಪ್ರಭಾತಮ್ ॥ ೧೧ ॥

ಪವನತನಯಮೇರೋಃ ಶೃಂಗಮಾರುಹ್ಯ ತುಂಗಂ
ರವಿರಿವ ಕಿರಣೌಘೈಃ ಕೀರ್ಣಮಂಧಂ ತಮಿಸ್ರಮ್ ।
ಸಪದಿ ದನುಜವೃಂದಂ ಘೋರಮಸ್ತ್ರೈರುದಸ್ಯನ್
ಜಯಸಿ ಮಹಿತತೇಜಾ ದೇವ ತೇ ಸುಪ್ರಭಾತಮ್ ॥ ೧೨ ॥

ಗಿರಿಮಿವ ಗುರುಕಾಯಂ ಭೀಷಣಂ ಕುಂಭಕರ್ಣಂ
ಕವಲಮಿವ ಕಪೀನಾಂ ಯೂಥಮಾಚಾಮಯಂತಮ್ ।
ಮದಗಜಮಿವ ಸಿಂಹಃ ಸಂಹರನ್ ಜಿಹ್ಮಗೈಸ್ತ್ವಂ
ಜಯಸಿ ವಿಬುಧಸಂಘೈಃ ಸ್ತೂಯಮಾನಃ ಪ್ರಭಾತಮ್ ॥ ೧೩ ॥

ಶಿಖರಿಣೀ

ಯದರ್ಥಂ ಜನ್ಮಾಭೂತ್ ಪ್ರಭವ ಜಗತಾಂ ತೇ ರಘುಕುಲೇ
ಯದರ್ಥೋ ವಾಸಸ್ತೇ ನಿಖಿಲಜಗದಾವಾಸ ವಿಪಿನೇ ।
ಸ ಧರ್ಮಃ ಸಂಸಿದ್ಧೋ ದಶವದನಸಂಹಾರವಿಧಿನಾ
ಪ್ರಭಾತಂ ಸಂಜಾತಂ ಕಥಯತಿ ಖಗಾನಾಂ ಕಲರುತಮ್ ॥೧೪॥

ಮಂದಾಕ್ರಾಂತಾ

ಲಂಕಾಯಾಂ ತ್ವಂ ನಿಶಿಚರಪತಿಂ ಸಾಂಪರಾಯೇ ಮಥಿತ್ವಾ
ಭಕ್ತಂ ಸಾಧುಂ ತದನುಜಮಥ ಸ್ಥಾಪಯಿತ್ವಾ ಸ್ವರಾಜ್ಯೇ ।
ದೇವ್ಯಾ ಯುಕ್ತಃ ಕನಕನಿಭಯಾ ವಿದ್ಯುತೇವಾಂಬುವಾಹಃ
ಪ್ರಾಪ್ತೋಽಯೋಧ್ಯಾಂ ಭರತವರದೋ ರಾಮ ತೇ
ಸುಪ್ರಭಾತಮ್ ॥ ೧೫ ॥



ವಿದ್ವಾನ್ ಎನ್. ರಂಗನಾಥಶರ್ಮಾ

ಶಿವಮೊಗ್ಗ ಜಿಲ್ಲೆಯ ಸೊರಬದ ಸಮೀಪದಲ್ಲಿರುವ ನಡಹಳ್ಳಿಯಲ್ಲಿ ತಾ. ೭-೪-೧೯೧೬ರಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವಾದ ಮೇಲೆ ಬೆಂಗಳೂರಿಗೆ ಬಂದು ಶ್ರೀಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಧ್ಯಯನಮಾಡಿ ವ್ಯಾಕರಣಶಾಸ್ತ್ರ ಅಲಂಕಾರಶಾಸ್ತ್ರಗಳಲ್ಲಿ ವಿದ್ವತ್ ಪದವಿಯನ್ನು ಗಳಿಸಿದರು. ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಕೆಲವು ಕಾಲ ಸಂಸ್ಕೃತದ ಉಪಾಧ್ಯಾಯರಾಗಿದ್ದು ಅನಂತರ ಮೇಲ್ಕಂಡ ಸಂಸ್ಕೃತಮಹಾಪಾಠಶಾಲೆಯಲ್ಲಿಯೇ ವ್ಯಾಕರಣಶಾಸ್ತ್ರದ ಅಧ್ಯಾಪಕರಾಗಿ ನಿಯುಕ್ತರಾದರು. ವ್ಯಾಕರಣ ಶಾಸ್ತ್ರದಲ್ಲಿಯೇ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಶ್ರೀರಂಗನಾಥಶರ್ಮರು ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿದ್ವಾನ್ ಮತ್ತು ಮೈಸೂರಿನ ಕನ್ನಡ ಪಂಡಿತಪರೀಕ್ಷೆಗಳನ್ನು ಮಾಡಿಕೊಂಡಿದ್ದಾರೆ. ವಾಲ್ಮೀಕಿ ರಾಮಾಯಣ, ಶ್ರೀ ವಿಷ್ಣುಪುರಾಣ, ಭಾಗವತದ ೧೦-೧೧-೧೨ನೆಯ ಸ್ಕಂಧಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಸಂಸ್ಕೃತ ಮತ್ತು ಕನ್ನಡದಲ್ಲಿ ಸುಮಾರು ೪೫ ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯಪರಿಷತ್ತಿನಲ್ಲಿ ಹಳಗನ್ನಡ ಕಾವ್ಯಗಳ ಅನುವಾದಕ ಮಂಡಲಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿಧ್ದಾರೆ. ನೂರಾರು ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ಸಮಗ್ರವಾದ ವಾಲ್ಮೀಕಿ ರಾಮಾಯಣವನ್ನು ಶ್ರೀಯುತರು ಕನ್ನಡಕ್ಕೆ ಎಂಟು ಸಂಪುಟಗಳಲ್ಲಿ ಅನುವಾದ ಮಾಡಿರುವುದನ್ನು ಬೆಂಗಳೂರಿನ ನರಸಿಂಹರಾಜ ಕಾಲೋನಿಯ ಶ್ರೀ ರಾಮ ಮಂದಿರದವರು ಪ್ರಕಟ ಮಾಡಿದ್ದಾರೆ. ಅಲ್ಲದೆ ಶಾಸ್ತ್ರಗ್ರಂಥಗಳಾದ ಶ್ರೀ ತೋಟಕಾಚಾರ್ಯರ 'ಶ್ರುತಿಸಾರಸಮುದ್ಧರಣಮ್' ಐಯ್ಯಣ್ಣ ದೀಕ್ಷಿತರ 'ವ್ಯಾಸತಾತ್ಪರ್ಯ ನಿರ್ಣಯ' 'ಶ್ರೀ ಮಾಧವೀಯ ಶಂಕರ ದಿಗ್ವಿಜಯ' ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡಿರುತ್ತಾರೆ.

ಶ್ರೀಯುತರು ಮಾಡಿರುವ ಅನುಪಮವಾದ ಸಾಹಿತ್ಯಸೇವೆಗಾಗಿ ರಾಷ್ಟ್ರಪತಿ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿಗಳಿಂದ ಸನ್ಮಾನಿತರಾಗಿದ್ದಾರೆ.

Price : Rs. 24/-